ಗೌರಿ ಲಂಕೇಶರ


ಲಂಕೇಶ್

ಜುಲೈ 5, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ

ಲ್ಲಿಂದ
ಂತು
ುಡ್ಡು?

ವೆಂಕಟಾಚಲ ಮಗ ಖರೀದಿಸಿದ ಬಂಗಲೆ


4.5 ಕೋಟಿ!





ಹಾಸನ : ಹಾ.ರಾ. ನಾಗರಾಜ್ ಕೊಲೆ

ಕೇಸ್ ಖಲಾಸ್!



ಬಸವ ನಾಣ್ಯ ಮೋಸ ಕಾಣ!

ಸತ್ಯವೇಲು ಹಂತಕರ ರಕ್ಷಣೆಗೆ ಸುರಾನ!





ಮಂಡ್ಯ ಹುಡುಗ ಬೆಂಗ್ಳೂರ್ ಬೆಡಗಿ

ಡುಂ ಡುಂ!





ಪೋಸ್ಕೋ ಜಗನ್ನಾಥ!

ಈ ದೇಶದಲ್ಲಿ ಬಡವರು ಸಂಕಟಪಟ್ಟರೆ ಮೊರೆ ಹೋಗಲು ಇರುವುದು ಒಂದೇ ದಾರಿ. ದೇವರ ಮೊರೆ ಹೋಗುವುದು. ಆ ದೇವರನ್ನು ಶ್ರೀಮಂತರೇ ಕೊಂಡುಬಿಟ್ಟರೆ ಬಡವರು ಹೋಗುವುದು ಎಲ್ಲಿಗೆ?

ಒರಿಸ್ಸಾದ ಎಲ್ಲಾ ಬಡಜನತೆಗೂ-ಆದಿವಾಸಿಗಳಿಗೂ ಕಷ್ಟ ಬಂದರೆ ಮೊರೆ ಹೋಗುವ ದೈವ ಪುರಿಜಗನ್ನಾಥ. ಈಗ ಅಲ್ಲಿಯ ಆದಿವಾಸಿಗಳ ಪಾಡು ದೇವರಿಗೂ ಬೇಡ. ಒರಿಸ್ಸಾದ ಕಾಡುಗಳಲ್ಲಿ ಹುದುಗಿರುವ ಕಬ್ಬಿಣದ ಅದಿರನ್ನು ಲೂಟಿ ಮಾಡಲು ದಕ್ಷಿಣ ಕೊರಿಯಾದ ಪೋಸ್ಕೊ (POSCO) ಎನ್ನುವ ವಿದೇಶಿ ಕಂಪನಿ 51,000 ಕೋಟಿ ಬಂಡವಾಳ ಹೂಡುತ್ತಿದೆ. ಇದಕ್ಕಾಗಿ ಒರಿಸ್ಸಾದ 4 ಜಿಲ್ಲೆಗಳ ಆದಿವಾಸಿಗಳನ್ನು ಎತ್ತಂಗಡಿ ಮಾಡಲಾಗುತ್ತಿದೆ. ಈ ಆದಿವಾಸಿಗಳಿಗೆ ಆಗುವ ಅನ್ಯಾಯವನ್ನು ಕಿವಿಗೆ ಹಾಕಿಕೊಳ್ಳದಂತೆ ಒರಿಸ್ಸಾದ ಅಸೆಂಬ್ಲಿ ಹಾಗೂ ನ್ಯಾಯಾಲಯವನ್ನು ಪೋಸ್ಕೋ ಈಗಾಗಲೇ ಬುಕ್ ಮಾಡಿಕೊಂಡು ಬಿಟ್ಟಿದೆ.

ಈಗ ಈ ಜನತೆಯ ಅಂತಿಮ ಮೊರೆಯಾದ ಪುರಿ ಜಗನ್ನಾಥನನ್ನು ಆ ಕಂಪನಿ ಬುಟ್ಟಿಗೆ ಹಾಕಿಕೊಂಡು ಬಿಟ್ಟಿದೆ. ಮೊನ್ನೆ ಆ ದೇವಸ್ಥಾನಕ್ಕೆ ಬಂದವರಿಗೆಲ್ಲಾ ಕಂಪನಿಯೇ ದೇವರ ಪರವಾಗಿ ಉಚಿತ ಪ್ರಸಾದ, ಊಟ ಹಂಚಿದೆ. ಹೀಗಾಗಿ ಈಗ ಜಗನ್ನಾಥನೂ ಬುಕ್ ಆಗಿ ಬಿಟ್ಟಿದ್ದಾನೆ.

ಹರ ಕೊಲ್ಲಲ್ ಪರ ಕಾಯ್ವನೇ?

ಚಾರ್ವಾಕ

- ಶಿವಸುಂದರ್-



ನೋಕಿಯಾ- ಲಾಭದ ಸೈಕಿಯಾ....?


ಈಗ ನಮ್ಮ ದೇಶದಲ್ಲಿ ಉದಾರೀಕರಣದ ಮೂರನೇ ಘಟ್ಟ ಚಾಲ್ತಿಯಲ್ಲಿದೆ. ಈ ಮೂರನೇ ಘಟ್ಟದ ಗುಣಲಕ್ಷಣವೆಂದರೆ ವಿದೇಶಿ ಬಂಡವಾಳ ಬರುತ್ತದೆ ಎಂದರೆ ವಿಧಾನಸೌಧ, ಸಂಸತ್ ಭವನ ಹಾಗೂ ದೇಶದ ರಕ್ಷಣೆ ಹಾಗೂ ಭದ್ರತೆಗಳನ್ನು ಮಾರಿಬಿಡು ವುದು. ಈಗಾಗಲೇ ವಿದೇಶೀ ಮೊಬೈಲ್ ಹಾಗೂ ವಿಮಾನಯಾನ ಕ್ಷೇತ್ರಗಳಲ್ಲಿ ದೇಶದ ರಕ್ಷಣೆಯ ವಿಚಾರವನ್ನು ಕಡೆಗಣಿಸಿ ಹೇಗೆ ಅವರಿಗೆ ಲಾಭಕ್ಕೆ ಅವಕಾಶ ಮಾಡಿಕೊಡಲಾಗಿದೆ ಎಂದು ಇದೇ ಅಂಕಣದಲ್ಲಿ ಓದಿದ್ದೀರಿ.

ಈಗ ಆ ಸಾಲಿಗೆ ನೋಕಿಯಾ ಎಂಬ ಮೊಬೈಲ್ ಹ್ಯಾಂಡ್ ಸೆಟ್ ಇನ್ನಿತ್ಯಾದಿ ಮಾರುವ ಕಂಪನಿಯ ಸರದಿ. ಮಾಹಿತಿ ತಂತ್ರಜ್ಞಾನ ಬೆಳೆದ ಮೇಲೆ ಜಗತ್ತಿನ ಯಾವ ಮೂಲೆಯಲ್ಲಿ ಕುಳಿತಾದರೂ ವಿಶ್ವಾದ್ಯಂತ ಬಿಸಿನೆಸ್ ನಡೆಸಬಹುದಷ್ಟೇ. ಈಗ ನೋಕಿಯಾ ಕಂಪನಿ ಆ ಬಗೆಯ ರಿಮೋಟ್ ಕಂಟ್ರೋಲ್ ನೆಟ್‌ವರ್ಕಿಂಗ್ ಮಾನಿಟರಿಂಗ್ (ರಿಮೋಟ್ ಉಸ್ತುವಾರಿ) ಮಾಡಲು ಭಾರತದ ಚೆನ್ನೈ ಅನ್ನು ಆಯ್ಕೆ ಮಾಡಿಕೊಂಡಿದೆ. ಆದರೆ ಇದು ನಮ್ಮ ದೇಶದ 'ಭದ್ರತೆ'ಗೂ ಆತಂಕ ತರುತ್ತದೆ. ಏಕೆಂದರೆ ಆಗ ನೋಕಿಯಾ ನಮ್ಮ ದೇಶದ ಭದ್ರತಾ ಪಡೆಗಳ ತರಂಗಾಂತರಗಳನ್ನು ಮಾನಿಟರ್ ಮಾಡಲು ಸಾಧ್ಯವಾಗುತ್ತದೆ. ಆದರೆ ಇದನ್ನು ಕೇಳುವರ್ಯಾರು?

ಒಂದು ಗುಟ್ಟು:

ಭಾರತದಲ್ಲಿ ಬಡವರ ಸಂಖ್ಯೆ ಜಾಸ್ತಿ ಆಗುತ್ತಿದ್ದರೂ, ಶ್ರೀಮಂತರ ಸಂಖ್ಯೆಯೂ ಜಾಸ್ತಿ ಆಗುತ್ತಿದೆಯಂತೆ. ಭಾರತದಲ್ಲಿ 2004 ರಲ್ಲಿ 70,000 ಮಿಲಿಯಾಧಿಪತಿಗಳಿದ್ದರೆ 2005 ರಲ್ಲಿ 83,000 ಮಿಲಿಯಾಧಿಪತಿಗಳಾಗಿದ್ದಾರಂತೆ. ಅಂದರೆ ಶೇ. 20 ರ ಅಭಿವೃದ್ಧಿ. ಪ್ರಪಂಚ ಮಟ್ಟದಲ್ಲೂ ಶ್ರೀಮಂತರ ಸಂಖ್ಯೆ ಶೇ. 60 ದರದಲ್ಲಿ ಏರಿದೆಯಂತೆ. ಇಂದು ಪ್ರಪಂಚದ 85 ಲಕ್ಷ ಮಿಲಿಯಾಧಿಪತಿಗಳ ಬಳಿ 33.3 ಟ್ರಿಲಿಯನ್ ಡಾಲರ್ ದುಡ್ಡಿದೆಯಂತೆ. ಅಂದರೆ 16 ಕೋಟಿ ರೂಪಾಯಿಗಳು. ಅಂದರೆ 16000000000000000 (16 ರ ಮುಂದೆ 16 ಸೊನ್ನೆ) ರೂಪಾಯಿಗಳಿವೆಯಂತೆ...ಹಾಗೆಂದು ಅಮೆರಿಕದ ಮೆರಿಲ್ ಲಿಂಚ್ ಸಂಸ್ಥೆ ವರದಿ ಮಾಡಿದೆ. ಆದರೆ ಮತ್ತೊಂದು ಕಡೆ ವಿಶ್ವಸಂಸ್ಥೆಯ UNDP ಸಂಸ್ಥೆ ಜಗತ್ತಿನ ಬಡವರ ಸಂಖ್ಯೆಯೂ ಹೆಚ್ಚುತ್ತಿದೆ. ವಿಶ್ವದಲ್ಲಿ ದಿನಕ್ಕೆ ಎರಡು ಡಾಲರ್‌ಗಳನ್ನು ಪಡೆಯಲಾಗದವರ ಸಂಖ್ಯೆ ಶೇ. 20 ರ ದರದಲ್ಲಿ ಏರುತ್ತಿದೆ ಎಂದು ವರದಿ ಮಾಡಿದೆ.

ಭಾರತದಲ್ಲಿ ಮೆರಿಲ್ ಲಿಂಚ್ ವರದಿಯ ಪ್ರಕಾರ ಪ್ರತಿ 13,000 ಜನರಲ್ಲಿ ಒಬ್ಬ ದಶಲಕ್ಷಾಧಿಪತಿಗಳಿದ್ದಾರಂತೆ. ಆದರೆ ಇದೇ ಅವಧಿಯಲ್ಲಿ ಈ 13,000 ಜನರ ಪರಿಸ್ಥಿತಿ ಏನಾಗಿದೆ? ಅದರಲ್ಲಿನ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಒಂದು ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಣ್ಣ ಉದ್ಯಮಿಗಳು ನಷ್ಟಕ್ಕೊಳಗಾಗಿದ್ದಾರೆ...



ಹಾಗಿದ್ದರೂ ಮೆರಿಲ್ ಲಿಂಚ್ ಸಂಸ್ಥೆ ಶ್ರೀಮಂತರು ಜಾಸ್ತಿಯಾಗುತ್ತಿದ್ದಾರೆ ಎಂದು ವರದಿ ಮಾಡುವುದೇಕೆ? ಅದನ್ನು ದೊಡ್ಡ ಸತ್ಯವೆಂಬಂತೆ ಟೈಮ್ಸ್ ಆಫ್ ಇಂಡಿಯದಂತ ಪತ್ರಿಕೆ ವರದಿ ಮಾಡುವುದೇಕೆ? ಬಡತನ-ಶ್ರೀಮಂತಿಕೆ ಎರಡೂ ಒಟ್ಟಿಗೆ ಹೆಚ್ಚುವುದರ ಹಿಂದಿನ ಗುಟ್ಟೇನು?

.....ರಟ್ಟು

ವಿಶ್ವಬ್ಯಾಂಕಿನ ವರದಿಗಳೇ ಒಪ್ಪಿಕೊಳ್ಳುವಂತೆ ದೇಶದ ಹಾಗೂ ವಿಶ್ವದ ಬಡತನ ದೊಡ್ಡ ಸಂಖ್ಯೆಯಲ್ಲಿ ಹೆಚ್ಚುತ್ತಿದೆ.

ಅದರಲ್ಲೂ ಜಾಗತೀಕರಣ ಪ್ರಕ್ರಿಯೆ ಪ್ರಾರಂಭವಾದ ಮೇಲೆ ಬಡವರ ಹಾಗೂ ಶ್ರೀಮಂತರ ನಡುವಿನ ಅಂತರ, ಬಡದೇಶಗಳ ಹಾಗೂ ಶ್ರೀಮಂತ ದೇಶಗಳ ನಡುವಿನ ಅಂತರ ಅಗಾಧವಾಗಿ ಹೆಚ್ಚುತ್ತಿದೆ.


ವಿಶ್ವಬ್ಯಾಂಕಿನ ಅಧ್ಯಯನದ ಪ್ರಕಾರವೇ ಭಾರತದಲ್ಲಿ 1970 ರ ದಶಕದಲ್ಲಿ ಜನಸಂಖ್ಯೆಯ ಮೇಲಿನ ಇಪ್ಪತ್ತರಷ್ಟು ಜನ ಕೆಳಗಿನ ಇಪ್ಪತ್ತರಷ್ಟು ಜನರ ಆದಾಯಕ್ಕಿಂತ ಶೇ. 40 ರಷ್ಟು ಹೆಚ್ಚಿನ ಆದಾಯ ಪಡೆಯುತ್ತಿದ್ದರೆ, 2000 ರಲ್ಲಿ ಈ ಅಂತರ 1500 ಪಟ್ಟು ಹೆಚ್ಚಾಗಿದೆ. ಅಂದರೆ ಒಟ್ಟಾರೆ ಜಗತ್ತಿನಲ್ಲಿ ಸಮೃದ್ಧಿ-ಅಭಿವೃದ್ಧಿ ನಡೆಯುತ್ತಿದ್ದರೂ ಜಾಗತೀಕರಣದ ಪ್ರಕ್ರಿಯೆ ಅದರ ಹಂಚಿಕೆಯಲ್ಲಿ ಅಪಾರ ತಾರತಮ್ಯ ಮಾಡುತ್ತಿದೆ. ಆದ್ದರಿಂದಲೇ ವಿಶ್ವದ ಎಲ್ಲೆಡೆ ಜಾಗತೀಕರಣದ ವಿರುದ್ಧ ಅಪಾರ ಪ್ರತಿರೋಧ ವ್ಯಕ್ತವಾಗುತ್ತಿದೆ.

ಆದ್ದರಿಂದಲೇ ಮೆರಿಲ್ ಲಿಂಚ್‌ನಂತ ಸಂಸ್ಥೆಗಳು ಬಡತನದ ಪ್ರಶ್ನೆಯನ್ನು ಮುಟ್ಟದೆ ಶ್ರೀಮಂತಿಕೆ ಜಾಸ್ತಿ ಆಗುತ್ತಿರುವ ಅಂಶದ ಕಡೆ ಮಾತ್ರ ಒತ್ತು ನೀಡುತ್ತವೆ. ಆ ಮೂಲಕ ಜಾಗತೀಕರಣವೆಂದರೆ ಅಭಿವೃದ್ಧಿ ಎಂಬ ಭ್ರಮೆ ಬಿತ್ತಲು ಯತ್ನಿಸುತ್ತವೆ. ಟೈಮ್ಸ್‌ನಂತ ಪತ್ರಿಕೆಗಳೂ ಜಾಗತೀಕರಣವೆಂಬ ಜಾಗತಿಕ ಸುಲಿಗೆಯ ಮುಖವಾಣಿಯೇ ಆಗಿರುವುದರಿಂದ ಇಂತಹ ಅರ್ಧಸತ್ಯದ ಸುದ್ದಿಗಳನ್ನು ದೊಡ್ಡ ರೀತಿಯಲ್ಲಿ ಪ್ರಕಟಿಸುತ್ತವೆ....

ಎಲಿವೇಟೆಡ್ ಹೈವೇ: ಕೆಳಗಡೆಯೂ ದುಡ್ಡು- ಮೇಲ್ಗಡೆಯೂ ದುಡ್ಡು

ಕರ್ನಾಟಕವೆಂದರೆ ಬೆಂಗಳೂರು, ಬೆಂಗಳೂರು ಎಂದರೆ ಸಾಫ್ಟ್‌ವೇರು ಎಂದಾದ ಮೇಲೆ ಬೆಂಗಳೂರಿನ ಅಭಿವೃದ್ಧಿಯೆಂದರೆ ಈ ಸಾಫ್ಟ್‌ವೇರಿಗರಿರುವ ಹೊಸೂರು ರೋಡ್ ಅಭಿವೃದ್ಧಿ ಎಂದೇ ಆಗಿಬಿಟ್ಟಿದೆ. ಈಗಾಗಲೇ ಅಲ್ಲಿ ನೂರಾರು ಕೋಟಿ ಖರ್ಚು ಮಾಡಿ, ಬ್ರಿಡ್ಜ್ ಚತುಷ್ಪಥ ರಸ್ತೆ ಎಲ್ಲಾ ಕಟ್ಟಲಾಗಿದೆ. ಆದರೂ ಸಾಲದು-ನಾವು ಬೆಂಗಳೂರು ಬಿಟ್ಟು ಹೋಗ್ತೀವಿ ಎಂದು ನಾರಾಯಣ ಮೂರ್ತಿ ಗದರಿದ ತಕ್ಷಣ ಈಗ ಅಲ್ಲಿ 10 ಪಥದ ಎಲಿವೇಟೆಡ್ ಹೈವೇ ಒಂದನ್ನು ಕಟ್ಟಲು ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ಮೊನ್ನೆ ಮನಮೋಹನ್ ಸಿಂಗ್ ಅದಕ್ಕೆ ಶಂಕುಸ್ಥಾಪನೆ ಕೂಡಾ ಮಾಡಿದ್ದಾರೆ.

ರಸ್ತೆ ತಾನೆ ಆಗಲಿ ಬಿಡಿ-ಅದಕ್ಕೇಕೆ ಹೊಟ್ಟೆ ಉರಿ ಎನ್ನುವಂತಿಲ್ಲ- ಶ್ರೀಮಂತರ ಅಕ್ಕಪಕ್ಕಕ್ಕೆ ಇರುವವರು ಶ್ರೀಮಂತರೆಂಬಂತೆ ಇರದಿದ್ದರೆ ಹೇಗೆ? ಈ ಎಲಿವೇಟೆಡ್ ಹೈವೇ ಸಂಪೂರ್ಣವಾಗಿ ಶುಲ್ಕ ಕಟ್ಟಿ ಓಡಾಡುವ ರಸ್ತೆಯಾಗ ಲಿದೆ. ಅದನ್ನು ಖಾಸಗಿಯವರೇ ಕಟ್ಟುತ್ತಿದ್ದು 20 ವರ್ಷ ಸುಂಕ ಕಲೆಕ್ಟ್ ಮಾಡಿ ತಮ್ಮ ಬಂಡವಾಳ- ಲಾಭ ಎಲ್ಲಾ ಮಾಡಿಕೊಳ್ಳಲಿದ್ದಾರೆ. ಅಲ್ಲಿ ಓಡಾಡುವ ವರೂ ಶ್ರೀಮಂತ ಸಾಫ್ಟ್‌ವೇರಿಗಳೇ ಆದ್ದರಿಂದ ಅವರು ಕೊಡುತ್ತಾರೆ-ಇವರು ಇಸ್ಕೋತಾರೆ- ಅದರಲ್ಲೂ ಸಮಸ್ಯೆ ಇಲ್ಲ.




ಆದರೆ ಸರ್ಕಾರ ಅದರ ಕೆಳಗೆ ಕಟ್ಟಿರುವ ಸರ್ಕಾರಿ ರಸ್ತೆಗೂ ಇನ್ನು ಮುಂದೆ ಸುಂಕ ವಸೂಲಿ ಮಾಡುತ್ತದಂತೆ. ಮೇಲೂ ದುಡ್ಡು-ಕೆಳಗೂ ದುಡ್ಡು! ಅಂದರೆ ಬೆಂಗಳೂರಲ್ಲಿ ಇರಬೇಕೆಂದರೆ ಒಂದೋ ಸಾಫ್ಟ್‌ವೇರಿಗರಾಗಿರಬೇಕು-ಇಲ್ಲ ಅವರಷ್ಟು ದುಡ್ಡಿರುವವರಾಗಿರಬೇಕು....

No Comments


"ನಾನು ಇಂಗ್ಲಿಷ್‌ನಲ್ಲಿ ಪ್ರಮಾಣವಚನ ಸ್ವೀಕರಿಸಿದ್ದಕ್ಕೆ ರಾತ್ರಿಯೆಲ್ಲಾ ನಿದ್ರೆ ಬರಲಿಲ್ಲ"

-ಜಮೀರ್ ಅಹ್ಮದ್




"ಮಂತ್ರಿಗಿರಿ ಸಿಗಲಿಲ್ಲ ಎಂಬ ಕೊರಗಿನಲ್ಲಿ ಕಾಲ ಮೇಲೆ ಕಲ್ಲು ಹಾಕಿಕೊಳ್ಳಲೇ"

-ಸಿ.ಟಿ. ರವಿ



"ನಾನು ಮಾಡಿದ ತಪ್ಪೇನು?"


-ದೊರೆ ಜ್ಞಾನೇಂದ್ರ, ನೇಪಾಳದ ಮಾಜಿ ರಾಜ



"ಹಿಂದೆ ಉಪಮುಖ್ಯಮಂತ್ರಿಯಾಗಿದ್ದು ಈಗ ಸಂಪುಟದಲ್ಲಿ ಕೇವಲ ಸಚಿವನಾಗಿ ಕೆಲಸ ಮಾಡಲು ನನಗೆ ಮುಜುಗರವೇನಿಲ್ಲ"


-ಎಂ.ಪಿ. ಪ್ರಕಾಶ್

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



"ನಾನು ಕುಮಾರಸ್ವಾಮಿ ಮಂತ್ರಿ ಮಂಡಲ ಸೇರುವುದಿಲ್ಲ"

-ಮಹಿಮಾ ಪಟೇಲ್



"ಬಿಜೆಪಿ ಶಾಸಕರಿಗೆ ನಾನು ಔತಣಕೂಟ ಏರ್ಪಡಿಸಿರಲಿಲ್ಲ. ಅವರು ವೆಸ್ಟೆಂಡ್ ಹೋಟೆಲಿನಲ್ಲಿ ಸೇರಿ BMIC ಯೋಜನೆಯ ಬಗ್ಗೆ ಮಾಹಿತಿ ಕೇಳಿದರು-ನಾನು ಕೊಟ್ಟೆ

-ಅಶೋಕ್ ಖೇಣಿ



"ಪತ್ರಕರ್ತರೊಬ್ಬರು ನೈಸ್ ಪರವಾಗಿ ನನಗೆ ಲಂಚ ಕೊಡಲು ಬಂದಿದ್ದರೆಂದು ನಾನು ಹೇಳೇ ಇಲ್ಲ"


-ಎಚ್.ಡಿ.ಕುಮಾರಸ್ವಾಮಿ



"ರಾಷ್ಟ್ರೀಕೃತ ಬ್ಯಾಂಕ್‌ಗಳ ಶೇ. 4ರ ಬಡ್ಡಿ ದರದಲ್ಲಿ ಸಾಲ ಕೊಡುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಿದ್ದೇವೆ"

-ಬಿ.ಎಸ್. ಯಡಿಯೂರಪ್ಪ

ವಾರದ ಘೋಷಣೆ:




"ನಾವು ಯಾರೊಂದಿಗೂ ಕ್ರೂರವಾಗಿ ವರ್ತಿಸಿಲ್ಲ- ಹಾಗೆಯೇ ನಾವು ಕ್ರೂರತನಕ್ಕೂ ತಲೆಬಾಗುವುದಿಲ್ಲ"

-ಇರಾನ್ ಅಧ್ಯಕ್ಷ ಮೊಹಮದ್ ಅಹಮದಿಜೆನಾದ್, ಇರಾನ್ ಅಣುಶಕ್ತಿ ಕಾರ್ಯಕ್ರಮ ರದ್ದು ಮಾಡು ಬಗ್ಗೆ ಅಮೆರಿಕದ ಒತ್ತಡವನ್ನು ವಿರೋಧಿ

ವಾರದ ಫೋಟೋ



OBC ಮೀಸಲಾತಿ ಅಪಹಾಸ್ಯ ಮಾಡುವ ಮತ್ತೊಂದು ವಿಧಾನವೇ?



ಬದುಕು


ಬದುಕೆಂದರೆ ಮಾನವ ಅಸ್ತಿತ್ವದ ಆದಿ ಮತ್ತು ಅಂತ್ಯದ ನಡುವಿನ ಬಿರುಕು. ಆ ಬಿರುಕಿನಲ್ಲಿ ಹೂವು, ನೋವು, ಸುಖ, ದುಃಖ, ಬೇಸರ, ತಲ್ಲಣ, ಹುಚ್ಚು.... ಹೀಗೇ ಏನೇನೋ ಅರಳುತ್ತವೆ; ಅಳಿಯುತ್ತವೆ. ಈ ಬದುಕು ಎಲ್ಲವೂ ಹೌದು; ಏನೂ ಅಲ್ಲ.

ಈ ಸಂಚಿಕೆಯ ಸೂಕ್ತಿಗಳು 'ಬದುಕು' ಕುರಿತವು.

-ಮೂರ್ತಿ

ನನಗನ್ನಿಸುತ್ತೆ ಬದುಕೆಂದರೆ ನಮ್ಮ ಆತ್ಮವನ್ನು ಗಟ್ಟಿಗೊಳಿಸುವ ಒಂದು ವಸ್ತು -ಆರ್. ಬ್ರೌನಿಂಗ್

ಸಿನಿಮಾ ಎಂಬ ಮಾಯಾಜಿಂಕೆಯ ಹಿಂದೆ....



...ಆವತ್ತು ನನ್ನ ...ಸಿನ ಬಾಗಿಲು ...ಯುವ ಮುನ್ನವೇ ಆ ...ವಕ ಗೇಟ್ ಮುಂದೆ ...ಜರಾಗಿದ್ದ. ಅಂದು ...ು (ಕವಿತಾ) ಆಫೀಸಿಗೆ ...ುವುದಿಲ್ಲವೆಂದು ...ತ್ತಾಗಿ ಆತ ನನಗಾಗಿ ...ು ನಿಂತಿದ್ದ. ನಾನು ...ಾಗ "ನಾನು ನನ್ನ ...ನವನ್ನಾಧರಿಸಿ ಕತೆ ...ದಿದ್ದೇನೆ. ಅದರ ಮೇಲೆ ...ಮಾ ಮಾಡಿದರೆ ನೂರು ... ಗ್ಯಾರಂಟಿ ಓಡುತ್ತೆ" ...ದ. ಅದಕ್ಕೆ ...ಬೇಕೆನಿಸಿದರೂ ಅವನ ...ೀರ ಮುಖ ನೋಡಿ ...ಗೂ, ಸಿನಿಮಾಗೂ ...ಂಥ ಇಲ್ಲ, ನೀನು ...ಬೇಕಿರುವುದನ್ನು ...ಾಗೆ ಪತ್ರದ ಮೂಲಕ ...ು" ಎಂದು ಹೇಳಿ ...ನನ್ನು ಸಾಗಹಾಕಿದೆ.

...ಅವನೇನೋ ಸುಮ್ಮನೆ ...ದ, ಆದರೆ ಅವನಂತೆಯೇ ...ದ್ದ ಇನ್ನೊಬ್ಬ ಯುವಕ "ನನ್ನ ಕತೆ ಕೇಳಿಸಿಕೊಳ್ಳೋ...? ಹಾಗಾದರೆ, ಈ ಕ್ಷಣ ನಾನು ಗಾಂಧಿನಗರಕ್ಕೆ ...ಗಿ ಬೇರೆಯವರಿಗೆ ಹೇಳ್ತೀನಿ, ಮತ್ತೊಮ್ಮೆ ...ಚಿಸಿ" ಅಂತ ಸೀರಿಯಸ್ ಆಗಿ ಬೆದರಿಸಿದ. ...ಮ್ಮೆ ಚಿಕ್ಕಮಗಳೂರಿನಿಂದ ಗಂಟುಮೂಟೆ ಕಟ್ಟಿ ...ಡು ಬಂದಿದ್ದ ಹುಡುಗಿ ನನ್ನ ಮನೆಯಲ್ಲೇ ವಾಸ ...ುತ್ತಾ ಬೇಬಿ ಚಿತ್ರದಲ್ಲಿ ನಟಿಸಲು ತಯಾರಾಗಿ ...ದ್ದಳು. ಇನ್ನೊಂದು ಬಾರಿ ಬೇಬಿಯ ಚಿತ್ರದಲ್ಲಿ ...ಲ್ ಕೊಡಿಸುತ್ತೇನೆ ಎಂದ ಯಾವನನ್ನೋ ನಂಬಿ, ...ನ ಕೈಗೆ ಐದು ಸಾವಿರ ರೂಪಾಯಿ ಇಟ್ಟು, ... ರಾತ್ರಿ ಫುಟ್‌ಪಾತ್ ಮೇಲೆ ಕಳೆದು, ತಾನು ...ಸ ಹೋಗಿದ್ದೆನೆಂದು ಗೊತ್ತಾಗಿ ಬಂದಿದ್ದ ಮಂಡ್ಯದ ...ುಗನಿಗೆ ನಾನೇ ಬಸ್ ಚಾರ್ಜ್ ನೀಡಿ ವಾಪಸ್ ...ಗೆ ಕಳುಹಿಸಿದ್ದೆ.

ಈ ಸಿನಿಮಾ ಎಂಬ ಹುಚ್ಚು ಎಂತಹದ್ದೆಂದರೆ ಇದರಿಂದ ಯಾರೂ ಮುಕ್ತರಾಗಿಲ್ಲ ಅನ್ನಿಸುತ್ತೆ. ಪ್ರತಿ ದಿನ ರೋಲ್ ಕೇಳಿ ಬೇಬಿಗೆ ಬರುವ ಪತ್ರಗಳು, ತಮ್ಮ ಬಳಿ ಕತೆ ಇದೆ, ಟೈಟಲ್ ಇದೆ, ಇನ್ನೇನೋ ಇದೆ ಎಂದು ತಿಳಿಸುವ ಕಾಗದಗಳು, ತಮ್ಮ ಬಳಿ ಹತ್ತೋ-ಇಪ್ಪತ್ತೋ ಲಕ್ಷ ರೂಪಾಯಿಗಳಿದ್ದು ಸಿನಿಮಾ ನಿರ್ಮಿಸಬೇಕೆಂದಿದ್ದೇವೆ ಎಂಬ ಆಶೆ ಹೊತ್ತ ಫೋನ್ ಕರೆಗಳು... ಇಂತಹವು ನೂರಾರು..... ಒಮ್ಮೆ ಅಂತೂ ಒಂದು ಪತ್ರದಲ್ಲಿನ ಇಂಕ್ ವಿಚಿತ್ರವಾಗಿದೆಯಲ್ಲ ಎಂದು ನೋಡಿದ ಬೇಬಿಗೆ ಅದನ್ನು ಓದಿ ಶಾಕ್ ಆಗಿತ್ತು, ಏಕೆಂದರೆ ಆ ಇಡೀ ಪತ್ರವನ್ನು ರಕ್ತದಲ್ಲೇ ಬರೆಯಲಾಗಿತ್ತು....

ಸಿನಿಮಾ ಜಗತ್ತಿನ ಬಗ್ಗೆ ಯಾಕಿಂತಹ ಹುಚ್ಚು? ಬೆಳ್ಳಿ ತೆರೆಯ ಮೇಲೆ ಕಾಣಿಸಿಕೊಳ್ಳಬೇಕೆಂಬ ಕಾತರಕ್ಕೆ ಮಿತಿಯೇ ಇಲ್ಲವೆ?

ಇತ್ತೀಚೆಗೆ ತೆಹೆಲ್ಕಾ ಪತ್ರಿಕೆಯಲ್ಲಿ ನಿರ್ದೇಶಕ ಮಹೇಶ್ ಭಟ್‌ರವರ ಆಫೀಸಿನ ಮುಂದೆ ಕಳೆದ ಎಂಟು ವರ್ಷಗಳಿಂದ ಕಾತುರನಾಗಿ ಕಾಯುತ್ತಾ ನಿಂತಿರುವ ಬಿಹಾರದ ಯುವಕನೊಬ್ಬನ ಬಗ್ಗೆ ಓದಿದೆ. ಪ್ರತಿ ದಿನ ಬೆಳಿಗ್ಗೆಯಿಂದ ರಾತ್ರಿಯವರೆಗೆ ಭಟ್‌ರವರ ಆಫೀಸಿನ ಮುಂದೆ ಕಾವಲುಗಾರನಿಗಿಂತಲೂ ಹೆಚ್ಚು ನಿಷ್ಠೆಯಿಂದ ನಿಂತಿರುವ ಆತ ಊಟಕ್ಕಾಗಿ ಏನು ಮಾಡುತ್ತಾನೆ? ಹಣವನ್ನು ಎಲ್ಲಿಂದ, ಯಾವಾಗ ಗಳಿಸುತ್ತಾನೆ? ಅವನ ಈ ಎಂಟು ವರ್ಷಗಳ ಕನಸು ನೆನಸಾಗದಿದ್ದರೆ ಏನು ಮಾಡುತ್ತಾನೆ? ಬಣ್ಣದ ಲೋಕದ ಮಾಯೆಗೆ ಈತ ಹೀಗೆ ಬಲಿಯಾಗದಿದ್ದರೆ ಕನಿಷ್ಠ ಸವಲತ್ತುಗಳಿರುವ ಜೀವನವನ್ನು ಸಾಗಿಸುತ್ತಿದ್ದನಲ್ಲವೇ? ಎಂದೆಲ್ಲಾ ಪ್ರಶ್ನೆಗಳು ಮೂಡಿ ಹೋದವು.

ಆದರೆ ಇತರ ಕ್ಷೇತ್ರಗಳಲ್ಲಿನ ಖ್ಯಾತರು, ಪರಿಣಿತರು ಕೂಡ ಬೆಳ್ಳಿತೆರೆಯ ವ್ಯಾಮೋಹಕ್ಕೆ ಬೀಳುವಾಗ ಆ ಬಿಹಾರದ ಬಡ ಯುವಕ ಯಾವ ಲೆಕ್ಕಕ್ಕೆ? ಅಂತಹ ರಾಮಕೃಷ್ಣ ಹೆಗಡೆ ಕೂಡ 'ಮರಣಮೃದಂಗ' ಎಂಬ ಕೆಟ್ಟ ಸಿನಿಮಾದಲ್ಲಿ ನಟಿಸಿರಲಿಲ್ಲವೇ? ಜೆ.ಎಚ್. ಪಟೇಲ್ ಕೂಡ 'ಅವಸ್ಥೆ' ಚಿತ್ರದಲ್ಲಿ ಕಾಣಿಸಿಕೊಂಡಿರಲಿಲ್ಲವೇ? ಈಗಲೂ ನಾಟಕಗಳಲ್ಲಿ ನಟಿಸುವ ಹವ್ಯಾಸ ಹೊಂದಿರುವ ಗೃಹ ಸಚಿವ ಎಂ.ಪಿ. ಪ್ರಕಾಶ್‌ರಿಗೆ ಸಿನಿಮಾದಲ್ಲಿ ನಟಿಸುವ ಅವಕಾಶ ಕೊಟ್ಟು ನೋಡಿ, ಖಂಡಿತವಾಗಿಯೂ ದೇವೇಗೌಡ-ಕುಮಾರಸ್ವಾಮಿಗಳ ಕಿರಿಕಿರಿಗಳ ನಡುವೆಯೂ ನಟಿಸಲು ಸಿದ್ಧರಾಗಿರುತ್ತಾರೆ

ಕಂಡಹಾಗೆ



ಅನ್ನಿಸುತ್ತೆ. ಅಷ್ಟೇ ಏಕೆ, ಈಗ ಕೆಲವರ ಕಣ್ಣಲ್ಲಿ ನಾಯಕನೂ, ಹಲವರ ಅಭಿಪ್ರಾಯದಲ್ಲಿ ಖಳನಾಯಕನೂ ಆಗಿರುವ ವಿವಾದಿತ NICE ಕಂಪನಿಯ ಅಶೋಕ್ ಖೇಣಿ ಕೂಡ ಈ ತೆವಲಿಗೆ ಶರಣಾಗಿ ಕನ್ನಡ ಸಿನಿಮಾ ಒಂದರಲ್ಲಿ ನಟಿಸಿದ್ದಾರೆ. ಇವರೆಲ್ಲಾ ಸಾಕಷ್ಟು ಪ್ರಚಾರ ಪಡೆದಿದ್ದರೂ, ಪ್ರತಿ ದಿನ ಇವರ ಮುಖಗಳು ಟೀವಿಯಲ್ಲಿ, ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದರೂ, 35 MM ನಲ್ಲಿ ತಮ್ಮ ಮುಖ ಕಂಗೊಳಿಸಬೇಕೆಂಬ ಆಸೆ, ಅಥವಾ ಹುಚ್ಚು!

ಸಿನಿಮಾ ಎಂಬ ಮಾಧ್ಯಮ ಜನರ ಮೇಲೆ ಬೀರುವ ಪ್ರಭಾವವೂ ಇದಕ್ಕೆ ಕಾರಣ ಇರಬಹುದು. ನನಗೇ ಅನುಭವ ಆಗಿರುವಂತೆ ಎಷ್ಟೋ ಜನ ನನ್ನನ್ನು 'ಕವಿತಾ ಲಂಕೇಶ್' ಎಂದು ಕರೆಯುತ್ತಾರೆ ಅಥವಾ ನಮ್ಮಿಬ್ಬರ ನಡುವೆ ಒಂದಿಷ್ಟು ಹೋಲಿಕೆ ಇರುವುದರಿಂದ "ನೀವು ಕವಿತಾ ಲಂಕೇಶ್ ಅಲ್ವಾ?" ಎಂದು ಕೇಳುತ್ತಾರೆ. ಹೀಗೆ ಕರೆಯುವ ಅಥವಾ ಕೇಳುವ ಹತ್ತು ಮಂದಿಗಳಲ್ಲಿ ಒಬ್ಬರಾದರೂ ನನ್ನ ಹೆಸರಿಡಿದು ಗುರುತಿಸುತ್ತಾರೆ ಎಂಬುದೇ ನನ್ನ ಪುಣ್ಯ!

ಇತ್ತೀಚೆಗೆ ಒಂದು ಘಟನೆ ನಡೆಯಿತು. ಗೋವಾದಲ್ಲಿ ಪ್ರಥಮ ಬಾರಿಗೆ ಹಿಂದೂ-ಮುಸ್ಲಿಂರ ನಡುವೆ ಕೋಮುಗಲಭೆ ಸಂಭವಿಸಿತು. ಅದನ್ನು ಕುರಿತು ಸತ್ಯ ಸಂಶೋಧನೆ ಮಾಡುವ ತಂಡದಲ್ಲಿ ಭಾಗವಹಿಸಬೇಕೆಂದು ಈಗ ಗೋವಾದಲ್ಲಿ ವಾಸಿಸುತ್ತಿರುವ ಸುಪ್ರೀಂಕೋರ್ಟ್ ವಕೀಲೆ ನಂದಿತಾ ಹಕ್ಸರ್‌ರವರಿಂದ ಕರೆ ಬಂತು. ಇಲ್ಲಿನ ಕೆಲಸಗಳಿಂದ ಬಿಡುವು ಮಾಡಿಕೊಂಡು ಎರಡು ದಿನ ಗೋವಾಗೆ ಹೋಗಿ, ಸತ್ಯ ಸಂಶೋಧನೆ ಮಾಡಿ ರಾತ್ರಿ ಬಸ್ ಹತ್ತಿ ಬೆಂಗಳೂರಿಗೆ ಹೊರಟೆ.

ಬೆಳಗ್ಗೆ ಬೆಂಗಳೂರನ್ನು ಸಮೀಪಿಸುತ್ತಿದ್ದಾಗ ನೆಲಮಂಗಲದ ಹತ್ತಿರ ಅಪಘಾತ ಸಂಭವಿಸಿತು. ಬಸ್ಸಿನ ಮುಂಭಾಗ ಸಂಪೂರ್ಣವಾಗಿ ಛಿದ್ರಗೊಂಡಿತ್ತು, ಬಾಗಿಲು ಜಕಂ ಆಗಿತ್ತು, ಅದು ಹವಾನಿಯಂತ್ರಿತ ಬಸ್ ಆಗಿದ್ದರಿಂದ ಕಿಟಕಿಗಳೆಲ್ಲ ಸೀಲ್ ಆಗಿದ್ದವು. ಪ್ರಯಾಣಿಕರಲ್ಲಿ ಕೋಲಾಹಲ ಪ್ರಾರಂಭವಾಯಿತು. ಅಪಘಾತ ಸಂಭವಿಸಿದಾಗ ನನ್ನ ಪಕ್ಕದ ಸ್ಲೀಪರ್‌ನಲ್ಲಿದ್ದ ಮಹಿಳೆಯ ಹಣೆಗೆ ಪೆಟ್ಟು ಬಿದ್ದು ಆಕೆ ಜೋರಾಗಿ ಅಳುತ್ತಿದ್ದಳು.

"ರಕ್ತ ಬರುತ್ತಿದೆಯಾ, ಏನಾದರೂ ಬೇಕಾ?" ಎಂದು ನಾನು ಕೇಳಿದರೆ, ಆಕೆ ಕಣ್ಣೀರಿನ ನಡುವೆಯೇ "ನೀವು ಕವಿತಾ ಲಂಕೇಶ್ ಅಲ್ವಾ?" ಅಂತ ಬಿಕ್ಕಿದಳು!

ಬಸ್‌ನಲ್ಲಿ ಅಕ್ಷರಶಃ ಬಂಧಿತರಾಗಿದ್ದ ನಮ್ಮ ನೆರವಿಗೆ ಪೊಲೀಸರು ಬಂದರು. ಎಲ್ಲರನ್ನು ಜಕಂಗೊಂಡಿದ್ದ ಬಸ್‌ನ ಮುಂಭಾಗದಿಂದ ಕೈಹಿಡಿದು ಇಳಿಸುತ್ತಿದ್ದರು. ನನ್ನ ಕೈಹಿಡಿದ ಪೊಲೀಸರೊಬ್ಬರು "ಓಹ್ ಫಿಲ್ಮ್ ಡೈರೆಕ್ಟರ್ ಕವಿತಾ ಲಂಕೇಶ್" ಎನ್ನುತ್ತಾ ನೆರವಾದರು.

ಇದನ್ನೆಲ್ಲ ನಾನು ಹಲವಾರು ಬಾರಿ ಅನುಭವಿಸಿದ್ದರಿಂದ ಈಗ ಬೇಬಿಗೆ ಒಂದು ಷರತ್ತು ಹಾಕಿದ್ದೇನೆ. ಅದೇನೆಂದರೆ ಇನ್ನು ಮುಂದೆ ಯಾರಾದರೂ ಆಕೆಯನ್ನು "ನೀವು ಕವಿತಾ ಲಂಕೇಶ್ ಅಲ್ವಾ?" ಅಂತ ಕೇಳಿದಾಗ ಆಕೆ "ಹೌದು, ನಾನು ಗೌರಿ ಲಂಕೇಶ್‌ರ ತಂಗಿ" ಎಂದು ಹೇಳಬೇಕು ಅಂತ!

ಏಕೆಂದರೆ ಸಿನಿಮಾ ಮಾಧ್ಯಮದ ಹುಚ್ಚಿನ ಮುಂದೆ ನನ್ನ ಈ 'ರಂಜನೆ, ಬೋಧನೆ, ಪ್ರಚೋದನೆ' ನೀಡುತ್ತಿರುವ 'ಲಂಕೇಶ್' ಯಾವ ಲೆಕ್ಕ?!

ದಿಕ್ಕು ದೆಸೆ ಇಲ್ಲದಿರುವ ಮಂತ್ರಿಮಂಡಲದ ವಿಸ್ತರಣೆ, "ನಾನು ಬಳೆ ತೊಟ್ಟಿಲ್ಲ" ಎಂದು ಹೇಳುವ, ತನ್ನ ಸಂಪುಟದಲ್ಲಿ ಬಳೆ ತೊಡುವವರಿಗೇನು ಕೆಲಸ ಎಂದು ನಂಬಿರುವ ಕುಮಾರಸ್ವಾಮಿಯವರ ಧೋರಣೆ, ಇನ್ನಿತರ ದೊಂಬರಾಟಗಳನ್ನು ನಿರ್ಲಕ್ಷಿಸಿ ಸುಮ್ಮನೆ ತಮಾಷೆಗಾಗಿ ಈ ಟಿಪ್ಪಣಿ ಬರೆದಿದ್ದೇನೆ ಅಷ್ಟೇ...

-ಗೌರಿ ಲಂಕೇಶ್

ಮ್ಯಾಂಗೊ ಪೊಲೀಸ್ ನೀಲಂ ಅಚ್ಯುತರಾವ್

ಇನ್ನೇನು ಮಾವಿನ ಹಣ್ಣಿನ ಸೀಝನ್ ಮುಗಿಯಿತು ಅನ್ನುವಷ್ಟರಲ್ಲೇ ...ಂಗಳೂರಿಗೆ ನೀಲಂ ಹೆಸರಿನಿಂದ ಶುರುವಾಗುವ ಸ್ವೀಟ್ ಮ್ಯಾಂಗೊ ...ಚ್ಯುತರಾವ್ ಪೊಲೀಸ್ ಕಮಿಷನರಾಗಿ ಬಂದಿಳಿದಿದ್ದಾರೆ.

'ಮುಂದಿನ ಕಮಿಷನರ್ ಯಾರೋ?' ಎಂದು ಕಾತರದಿಂದ ...ೀಕ್ಷಿಸುತ್ತಿದ್ದ ಲ್ಯಾಂಡ್ ಮಾಫಿಯಾಗಳಿಗೆ, ರೌಡಿ ಜಗತ್ತಿಗೆ, ಭ್ರಷ್ಟ ...ಲೀಸರಿಗೆ 'ನೀಲಂ' ಹೆಸರು ಕಿವಿಗೆ ಬಿದ್ದ ತಕ್ಷಣ ಒಂಥರಾ ನೆಮ್ಮದಿಯಾಗಿ ...ೋಗಿದೆ. ಸಿಪ್ಪೆ-ವಾಟೆ ಒಂದೂ ಬಿಡದೆ ತಿಂದು ನಿಭಾಯಿಸಬಹುದು ... ನೀಲಂನನ್ನು ಎಂಬ ಸಂಭ್ರಮ ಅವರದ್ದು.

ನಮ್ಮ ಮುಖ್ಯಮಂತ್ರಿ ಕುಮಾರಸ್ವಾಮಿಗೂ ಅವರಪ್ಪ ದೇವೇ...ಡರಿಗೂ ಪೊಲೀಸ್ ವ್ಯವಸ್ಥೆಯ ತಲೆಬುಡ ಒಂದೂ ಗೊತ್ತಿಲ್ಲ ...ನ್ನಲು ಈ ಅನಾಮಧೇಯ ನೀಲಂ ಅಚ್ಯುತರಾವ್‌ರನ್ನು ಸಿಟಿ ಪೊಲೀಸ್ ...ಮಿಷನರಾಗಿ ನೇಮಿಸಿರುವುದೇ ಸಾಕ್ಷಿ. 70 ಲಕ್ಷ ಜನಸಂಖ್ಯೆಯ ಈ ...ಂಗಳೂರು, ಗಲ್ಲಿ ರೌಡಿಗಳಿಂದ ಹಿಡಿದು ಲಷ್ಕರ್-ಎ-ತೊಯಿಬಾವರೆಗಿನ ...ಗ್ರಗಾಮಿಗಳ ದಾಳಿಗಳು, ದಿನಕ್ಕೆ ಒಬ್ಬ ರಿಯಲ್ ಎಸ್ಟೇಟ್ ಏಜಂಟನ ...ೊಲೆ, ಎರಡು ರೇಪು, ಐದು ಸರ ಅಪಹರಣ, ಹದಿನೈದು ದರೋಡೆ, ...ಪ್ಪತ್ತೈದು ಗಲಾಟೆ, ನೂರಿಪ್ಪತ್ತೈದು ಕಳ್ಳತನ ನಡೆಯುವ ಬೆಂಗಳೂರು ...ಹಾನಗರದ ಕಮಿಷನರಾಗಿ ಬಂದಿರುವ 55 ವಯಸ್ಸಿನ ನೀಲಂ ...ೇಷ ಕ್ವಾಲಿಟಿ ಏನು ಗೊತ್ತೆ?

ಅವರಿಗೆ ಬೆಂಗಳೂರಿನ ಪರಿಚಯವೇ ಇಲ್ಲದಿರುವುದು!

30 ವರ್ಷಗಳ ಸರ್ವೀಸ್‌ನಲ್ಲಿ ಒಂದು ದಿನವೂ ಬೆಂಗಳೂರಲ್ಲಿ ...ಸ ಮಾಡದಿರುವುದು!!


ಬೆಂಗಳೂರಿನಲ್ಲಿ ಕಳ್ಳ ಯಾರು, ಪೊಲೀಸ್ ಯಾರು ಎಂಬ ವ್ಯತ್ಯಾಸವೇ ...ಗೊತ್ತಿಲ್ಲದಿರುವುದು!!!

[illegible] ಡೈನಾಮಿಕ್ ಆಫೀಸರ್‌ಗಳನ್ನು ...ದೆ ತಳ್ಳಿ ಬಂದಿರುವ ನೀಲಂರ ಟ್ರ್ಯಾಕ್ ರೆಕಾರ್ಡ್ ಆದರೂ ಭರ್ಜರಿ ...ಗಿದೆಯಾ ಅಂತಾ ನೋಡಿದರೆ ಅದೂ ಸೊನ್ನೆ. ಹಾಲಿ ಅಡಿಷನಲ್ ...ಡೈರೆಕ್ಟರ್ ಜನರಲ್ ಆಫ್ ಪೊಲೀಸ್ (ಆಧುನೀಕರಣ) ... ಟೆಲಿಫೋನ್ ಆಪರೇಟರ್ ತರದ ಕೆಲಸ ಮಾಡಿಕೊಂಡಿದ್ದ ನೀಲಂ ... ಜೊಡಲು ಚಳ್ಳಕೆರೆ, ಕೊಪ್ಪಳ ಮುಂತಾದೆಡೆ ಅಡಿಷನಲ್ ...ಗಿದ್ದವರು. ಆದರೆ ಅಲ್ಲಿನ ಯಾರಿಗೂ ಎಷ್ಟು ತಲೆ ಕೆರೆದುಕೊಂಡು ಯೋಚಿಸಿದರೂ ನೀಲಂರ ಒಂದಾದರೂ ಸಾಧನೆ ನೆನಪಾಗಲ್ಲವೆಂದರೆ ಇವರ ದಕ್ಷತೆ ಎಷ್ಟೆಂಬುದು ಗೊತ್ತಾಗುತ್ತದೆ. ನೀಲಂ ಬಗ್ಗೆ ಮಸಕು ಮಸಕಾಗಿ ನೆನಪಿರುವ ಒಂದೇ ಒಂದು ವಿಚಾರ ಏನೆಂದರೆ ಈತ ಮಂಗಳೂರು ಎಸ್ಪಿಯಾಗಿದ್ದಾಗ ಒಮ್ಮೆ ಲೋಕಾಯುಕ್ತ ರೇಡ್ ನಡೆದು ಮನೆಯಲ್ಲಿ ಎಂಭತ್ತು ಕೆಜಿ ಚಿನ್ನ ಸಿಕ್ಕಿತ್ತೆಂಬ ಸುದ್ದಿ. ರಾಜ್ಯ ನಿವೃತ್ತ ಮುಖ್ಯ ಕಾರ್ಯದರ್ಶಿ ಬಿ.ಎಸ್. ಪಾಟೀಲನೆಂಬ ಐ.ಎ.ಎಸ್ ಕಳ್ಳನೂ ಆಗ ಲೋಕಾಯುಕ್ತರಿಗೆ ಸಿಕ್ಕಿಬಿದ್ದಿದ್ದ. ಈ ಕಳ್ಳ-ಪೊಲೀಸ್ ಇಬ್ಬರೂ ಸೇರಿ ಕೇಸು ಹಳ್ಳ ಹಿಡಿಸಿ ಪಾರಾಗಿದ್ದರು. ಇದೆಲ್ಲಾ ಎಂಭತ್ತರ ದಶಕದ ಕತೆ ಬಿಡಿ.

ಸಿಟಿ ಪೊಲೀಸ್ ಕಮಿಷನರ್ ಆಗಲು ಶಂಕರ್ ಬಿದರಿ, ಸುಭಾಷ್ ಭರಣಿ, ಜೀಜಾ ಮಾಧವನ್ ಹರಿಸಿಂಗ್, ಕೆ.ವಿ.ಆರ್. ಟ್ಯಾಗೂರ್ ಎಲ್ಲರಿಗೂ ಸೀನಿಯಾರಿಟಿಯಿತ್ತು, ಅರ್ಹತೆಯೂ ಇತ್ತು. ಆದರೆ ನೇಮಕ ಮಾಡುವವರಿಗೂ ಚೂರುಪಾರು ಅರ್ಹತೆ-ವಿವೇಕ ಇರಬೇಕಲ್ಲವಾ? ಅದಿಲ್ಲದ ಕುಮಾರಸ್ವಾಮಿಗಳು ಅಚ್ಯುತರಾವ್‌ರನ್ನು ಆರಿಸಿಕೊಂಡಿದ್ದಾರೆ. ಇದು ಯಾಕೆಂದರೆ ಬಿದರಿ ಖಡಕ್ ಮನುಷ್ಯ ಆದರೆ ಲಿಂಗಾಯತ, ಭರಣಿ ಓಕೆ ಆದರೆ ದಲಿತ, ಜೀಜಾ ಹರಿಸಿಂಗ್ ದಕ್ಷೆ ಆದರೆ ಗೌಡರ ಕುಟುಂಬ ರಾಜಕೀಯದ ರಕ್ಷಕಿಯಾಗಲು ಒಪ್ಪಲಾರರು..

ಹೀಗೆ ಅರ್ಹರ ಲಿಸ್ಟ್ ಅನ್ನು ಎಲಿಮಿನೇಟ್ ಮಾಡಿಕೊಂಡು ಬಂದ ಗೌಡರ ಫ್ಯಾಮಿಲಿಗೆ ಕೊನೆಗೆ ಸಿಕ್ಕವರೆ ಈ ನೀಲಂ ಅಚ್ಯುತರಾವ್.

ಈಗಿನ ಕೋ-ಚಾ ಸರ್ಕಾರಕ್ಕೆ ದಕ್ಷತೆ-ಪ್ರಾಮಾಣಿಕತೆಯಿರುವ ಡೈನಾಮಿಕ್ ಪೊಲೀಸ್ ಆಫೀಸರ್‌ಗಳ ನೆರಳು ಕಂಡರೂ ಆಗಿಬರುತ್ತಿಲ್ಲ. ಹಾಗಾಗಿ ಜೀಜಾರನ್ನು ಜಂಗಲ್ ಲಾಡ್ಜ್ ರೆಸಾರ್ಟ್ ಉಸ್ತುವಾರಿಗೆ, ಮಧುಕರ ಶೆಟ್ಟಿಯವರನ್ನು ರಾಜ್ಯಪಾಲರ ಕಚೇರಿಗೆ, ಕೆಂಪಯ್ಯ, ಬಿದರಿ, ಭರಣಿಯವರನ್ನು



ಹೌಸ್ ಅರೆಸ್ಟ್ ತರಹವೇ ಆಫೀಸ್ ಅರೆಸ್ಟ್‌ನಲ್ಲಿಟ್ಟಿದ್ದಾರೆ. ಸ್ವಜಾತಿ ಒಕ್ಕಲಿಗ ಬಾಂಧವ ನಾರಾಯಣ ಗೌಡನಂತ ರಿಯಲ್ ಎಸ್ಟೇಟ್ ಪೊಲೀಸ್ ಏಜನ್ಸಿ ಪೈಕಿಯಂತವನನ್ನು ಸಾರಿಗೆ ಕಮಿಷನರ್ ಆಗಿಸಿದ್ದಾರೆ. ಇಂಟಲಿ ಜೆನ್ಸ್ ಐ.ಜಿ ಕಿಶೋರ್ ಚಂದ್ರ, ಸಿ.ಸಿ.ಬಿ.ಯ ಎಸಿಪಿ ದಿವಾಕರ ಹೇಳಿದ ಪ್ರಕಾರ ಇಡೀ ಪೊಲೀಸ್ ಇಲಾಖೆ ನಡೆಸಲು ಹೊರಟಿದ್ದಾರೆ.

ಅಂದಹಾಗೆ ಈ ನೀಲಂ ಅಚ್ಯುತರಾವ್ ಕರ್ನಾಟಕ ಸರ್ಕಾರದ ಆಡಳಿತಾಂಗದ ಕೀ ಪೋಸ್ಟ್‌ಗೆ ಬಂದು ಕೂರುತ್ತಿರುವ ಆಂಧ್ರದ ಐದನೇ ಆಫೀಸರ್.

ಬಿಜೆಪಿಯ ವೆಂಕಯ್ಯ ನಾಯ್ಡು ಕಟ್ಟಾ ಸುಬ್ರಮಣ್ಯ ನಾಯ್ಡು ಮುಂತಾದ ತೆಲುಗು ಲಾಬಿಯ ಶಕ್ತಿ ಎಷ್ಟೆಂಬುದು ನೀಲಂ ನೇಮಕಾತಿಯಲ್ಲೂ ಸಾಬೀತಾದಂತಾಗಿದೆ.

ನೀಲಂ ಅಚ್ಯುತರಾವ್ ಸಿಟಿ ಪೊಲೀಸ್ ಕಮಿಷನರಾಗಿ ಅಧಿಕಾರ ವಹಿಸಿಕೊಂಡು ಬ್ಯಾಟನ್ ಕೈಗೆತ್ತಿಕೊಂಡಿದ್ದಾರೆ. ಆದರೆ ಆ ಕೈಗಳಿಗೆ ಬೆಂಗಳೂರು ರೌಡಿಗಳ ಕೈಲಿರುವ [illegible] ಇಲ್ಲ, ಪೊಲೀಸ್ ಸ್ಟೇಷನ್ನು-ಲ್ಯಾಂಡ್ ಮಾಫಿಯಾ ನಂಟನ್ನಿಕೆ ಮುರಿದು ಹಾಕುವಷ್ಟು ಬಲವಿಲ್ಲ, ಸಪ್ಪೆಯಾಗಿರುವ ಬೆಂಗಳೂರು ಪೊಲೀಸ್ ಫೋರ್ಸ್‌ಗೆ ಸ್ಫೂರ್ತಿ ತುಂಬಿ ಕೆಲಸಕ್ಕೆ ಹಚ್ಚುವ ಸ್ಪಿರಿಟ್ಟೂ ಇಲ್ಲ.

ಬೆಂಗಳೂರು ನಾಗರೀಕರೆ ಹುಷಾರ್, ನಿಮ್ಮ ರಕ್ಷಣೆ ನಿಮ್ಮದೆ ಹೊಣೆ... ಕೋ-ಚಾ ಸರ್ಕಾರದ್ದಲ್ಲ!


-ಕ್ಷಿಪ್ರ

ಪ್ರತಿಭಟನೆಯ ಪ್ರಬುದ್ಧತನ.....

ಪ್ರಪಂಚದ ಮಂಪರು ಕರಗಿಸುವೆನೆಂಬ ಬಾಲಿಶತನ....

ಮಹಿಮಾ ಪಟೇಲ್‌ಗೆ ಮಿನಿಸ್ಟರ್ ಆಗುವ ಭೋಟ ಭೋಟ ಆಶಾ ಇತ್ತು.... ಸದ್ಯ ಅದು ಮಾಯವಾಗಿದೆ. 'ಆಶೆಯೇ ದುಃಖಕ್ಕೆ ಮೂಲ' ಎಂದು ಅವರಿಗೀಗ ಅರಿವಾಗಿದೆಯೋ? ಗೊತ್ತಿಲ್ಲ... ಅವರು ಒಮ್ಮೊಮ್ಮೆ ಬುದ್ಧನಂತೆ, ಒಮ್ಮೊಮ್ಮೆ ಓಶೋನಂತೆ ಮಾತಾಡುತ್ತಿದ್ದಾರೆ. ಆದರೆ ಒಂದಂತೂ ಸತ್ಯ. ಜನತಾದಳ(ಎಸ್)ನಲ್ಲಿನ ತಂದೆ ಮಕ್ಕಳ ಪಾಳೆಗಾರಿಕೆ ವಿರುದ್ಧ ಮಹಿಮಾರದು ಏಕೈಕ ದಿಟ್ಟ ಪ್ರತಿಭಟನೆ!

ದೇವೇಗೌಡ, ಎಂ.ಪಿ. ಪ್ರಕಾಶ್‌ರಿಗೆ ಅತೀ ವಿನಯದಿಂದ ಮಹಿಮಾ ಬರೆದಿರುವ ಎರಡು ಪತ್ರಗಳ ಆಳದಲ್ಲಿ ಚಾಟಿ ಏಟಿನ ಹೊಡೆತವಿದೆ. ಕಲ್ಲು ಮನಸ್ಸಿನ ಗೌಡರಿಗೆ ಅದು ತಟ್ಟುವುದು ಕಷ್ಟ... ಆದರೆ ಸೂಕ್ಷ್ಮ ಮನಸ್ಸಿನ ಜೀವಿ ಎನಿಸಿದ್ದ(!) ಪ್ರಕಾಶರಿಗೂ ಅದು ತಟ್ಟಲಿಲ್ಲವೆಂದರೆ ಅದು ಪ್ರಕಾಶ್‌ರ ಬೌದ್ಧಿಕ ದಿವಾಳಿತನವಷ್ಟೇ ಅಲ್ಲ, ಅಧಿಕಾರದ ಹಸಿವು ಕೂಡಾ ಹೌದು ಎಂದು ಬೇಸರದಿಂದಲೇ ಬರೆಯಬೇಕಾಗಿದೆ.



"ಸಂಪುಟಕ್ಕೆ ಸೇರದೇ ಇರುವುದಕ್ಕೆ, ಒಂದು ಕಡೆ ಬೇಸರ, ಮತ್ತೊಂದು ಕಡೆ ಸಂತೋಷ ಎರಡೂ ಆಗಿದೆ. ಸಹೋದರ ಕುಮಾರಸ್ವಾಮಿಯವರ ಸಂಪುಟದಲ್ಲಿ ಸದಸ್ಯನಾಗಲು ನನಗೆ ಅವಶ್ಯಕ ಅರ್ಹತೆ ಇಲ್ಲವೆಂದು ಎಲ್ಲಾ ಸಂಪುಟ ಸದಸ್ಯರನ್ನು ನೋಡಿ ಮನವರಿಕೆಯಾಗಿದೆ. ನನ್ನ ಒಳಿತಿಗಾಗಿಯೇ ನೀವು ನನ್ನ ಬಗ್ಗೆ ಶಿಫಾರಸ್ಸು ಮಾಡಿಲ್ಲವೆಂದು ಅಂದುಕೊಳ್ಳುತ್ತೇನೆ. ನನಗೆ ಈ ಸಂಪುಟದಲ್ಲಿ ಮಂತ್ರಿಯಾಗುವ ಯಾವ ಇಚ್ಛೆಯೂ ಉಳಿದಿಲ್ಲ" ಎಂದು ನೈಸ್ ಆಗಿ ಮಂಗಳಾರತಿ ಮಾಡಿರುವ ಮಹಿಮಾ ಪಟೇಲ್ ರಾಜ್ಯ ಜೆಡಿ(ಎಸ್) ಮಹಾಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡಿ, ಗೌಡರ ರಣತಾಂಡವದ ವಿರುದ್ಧ ಬಂಡಾಯ ಕಹಳೆ ಊದಿದ್ದಾರೆ.

ಇಷ್ಟೆಲ್ಲ ಪಾಸಿಟಿವ್ ಅಂಶಗಳನ್ನು ಗಮನಿಸಿ ಮಹಿಮಾ ಪಟೇಲರನ್ನು ಫೋನಿನಲ್ಲಿ ಸಂಪರ್ಕಿಸಿದ 'ಲಂಕೇಶ್'ಗೂ, ಮಹಿಮಾರಂತೆ ಬೇಸರ, ಸಂತೋಷ ಎರಡೂ ಮೂಡಿದವು.

ಈ ಸಚಿವ ಸಂಪುಟದಲ್ಲಿ ಬಹುತೇಕ ಅಯೋಗ್ಯರೇ ತುಂಬಿದ್ದಾರೆ ಎಂದು ಮೊದಲ ಬಾರಿ ಬಹಿರಂಗವಾಗಿ ಹೇಳುವ ಮೂಲಕ ಮಹಿಮಾ ಮೆಚ್ಚುಗೆ ಗಳಿಸುತ್ತಾರೆ. ಆದರೆ ಅವರಿಗೆ ಅದ್ಯಾವುದೋ ಆಧ್ಯಾತ್ಮದ ಗುಂಗು ಹೊಕ್ಕುಬಿಟ್ಟಿದೆಯಲ್ಲ, ಅದೇ ಇವತ್ತು ಮಹಿಮಾಗೆ ಮುಳುವಾಗುತ್ತಿದೆ ಎನಿಸುತ್ತಿದೆ.

ಅವರ ಮೊಬೈಲ್‌ಗೆ ಕಾಲ್ ಮಾಡುವುದಷ್ಟೇ ತಡ, 'ರೋಜಾ'ದ "ಭೋಟ ಭೋಟ ಆಶಾ...." ಹಾಡು ತೇಲಿಬರುತ್ತದೆ. ಮಹಿಮಾರ ಈಗಿನ ಸ್ಥಿತಿಯಲ್ಲಿ ಈ ಹಾಡು ಕೇಳಿದರೆ ನಗು ಬರದೇ ಇರುತ್ತಾ?


ಅವರು ಬೇಗ ರಿಸೀವ್ ಮಾಡುವುದಿಲ್ಲವಾದ್ದರಿಂದ ಪೂರ್ತಿ ಹಾಡು ಕೇಳಬಹುದು.

"ಆಸ್‌ಮಾನೊ ಮೆ ಉಡನೆ ಕಿ ಆಶಾ..."

ಹೌದು, ನಿಜವಾಗಿಯೂ ಆಕಾಶದಲ್ಲಿ ಹಾರಾಡುವುದು ಮಹಿಮಾರ **hobby!** ಈ ಹಿಂದೆ ಶರ್ಮಾ ಎನ್ನುವಾತನ ಜೊತೆ ಸೇರಿ ಮೈಕ್ರೊಲೈಟ್ ಏರ್‌ಕ್ರಾಫ್ಟ್‌ನಲ್ಲಿ ಹಾರಾಟ ನಡೆಸುತ್ತಾ "ಆಜ್ ಮೈ ಊಪರ್, ಆಸ್‌ಮಾನ್ ನೀಛೆ" ಎಂದು ಕಾಲಕಳೆಯುತ್ತಾ ಐಷಾರಾಮಿಯಾಗಿದ್ದರು ಈ ಮಹಿಮಾ.

ಜೆ.ಎಚ್. ಪಟೇಲ್‌ರೆಂದೂ ಮಕ್ಕಳನ್ನು ರಾಜಕೀಯಕ್ಕೆ ತುರುಕುವ ವಿಚಾರ ಮಾಡಲಿಲ್ಲವಷ್ಟೇ ಅಲ್ಲ, ಹಲವಾರು ಸಾರಿ ಚುನಾವಣಾ ರಾಜಕೀಯಕ್ಕೆ ಬರಲೆತ್ನಿಸಿದ ಮಕ್ಕಳನ್ನು ತಡೆದೂ ಬಿಟ್ಟಿದ್ದರು.

ಆದರೆ ಅವರ ನಿಧನಾ ನಂತರ ಚನ್ನಗಿರಿ ಕ್ಷೇತ್ರದಲ್ಲಿ ಹೆಂಡ ಹಂಚದೇ ಪಾದಯಾತ್ರೆಯ ಮೂಲಕ ಜನಸಂಪರ್ಕ ಸಾಧಿಸಿ, ಗೆದ್ದು ಭರವಸೆ ಮೂಡಿಸಿದ್ದ ಮಹಿಮಾ ಪಟೇಲ್‌ಗೆ ಆಗಲಾದರೂ ಜನೋಪಯೋಗಿ ಆಶಯಗಳು ಪ್ರಮುಖವಾಗಬೇಕಿತ್ತು. ಆದರೆ ದುರ್ದೈವ, ಮಹಿಮಾರನ್ನು ಆಗಲೇ ಹೊಕ್ಕಿದ್ದ ಕಲ್ಕಿ ತರಹದ ಪಿಶಾಚಗಳು ತಮ್ಮ ಸ್ಥಾನದಿಂದ ಅಲುಗಾಡಲೇ ಇಲ್ಲ! ಪಕ್ಷದ ಮಹಾಪ್ರಧಾನ ಕಾರ್ಯದರ್ಶಿ ಎಂಬುದು ಕೇವಲ ನಾಮಕಾವಸ್ತೆ ಹುದ್ದೆ, ದಳ(ಎಸ್) ಪಾರ್ಟಿ ಎಂಬುದು ಬರೀ ಸರ್ಕಾರ... ಅಲ್ಲಿ ಪಾರ್ಟಿ ಚಟುವಟಿಕೆನೇ ಇಲ್ಲ ಎಂದು ಅರ್ಥ ಮಾಡಿಕೊಂಡ ಮಹಿಮಾ ಪಟೇಲ್ ದೇವರ ಹುಡುಕಾಟದಲ್ಲಿ ವಿದೇಶಗಳನ್ನು ಸುತ್ತುತ್ತಾ ಈಗ ತಮ್ಮಲ್ಲೇ ದೇವರನ್ನು ಕಂಡುಕೊಂಡು ಚಿತ್ರವಿಚಿತ್ರವಾಗಿ ಮಾತಾಡ್ತಿರೋದು ನೋಡಿದರೆ ನಗು ಬರುತ್ತದೆ... ಜೊತೆಗೆ ಕ್ರಿಯಾಶೀಲ ಯುವ ರಾಜಕಾರಣಿಯೊಬ್ಬ ದಾರಿ ತಪ್ಪಿದನಲ್ಲ ಎಂದು ಖೇದವಾಗುತ್ತದೆ.



* * * * * * * *

ಪತ್ರಿಕೆ: ಸಚಿವ ಸ್ಥಾನ ಸಿಗದಿದ್ದಕ್ಕೆ ಬೇಸರವಾಗಿದೆಯೇ?

ಮಹಿಮಾ: ಬೇಸರವೂ ಆಗಿದೆ....... ಒಂದು ರೀತಿ ಒಳ್ಳೇದೂ ಆಗಿದೆ...

ಜನಸೇವೆ ಮಾಡಲೊಂದು ಅವಕಾಶ ಸಿಗಲಿಲ್ಲ ಎಂದು ಬೇಸರವಾಗಿದೆ.... ಪರಿವರ್ತನೆ ತರಬೇಕು ಎಂಬ ಆಶೆಯಿತ್ತು. ಆದರೆ ಗುಂಪಿನಲ್ಲಿ ಗೋವಿಂದ ಆಗಿಬಿಡುತ್ತಿದ್ದೆನೇನೋ... ಈಗ ಒಳ್ಳೆದೇ ಆಯ್ತು ಬಿಡಿ....

ಪತ್ರಿಕೆ: ಸಚಿವ ಸಂಪುಟದಲ್ಲಿರುವವರನ್ನು ನೋಡಿದ ಮೇಲೆ ಅಲ್ಲಿ ಸೇರದೇ ಇದ್ದದ್ದೇ ಒಳ್ಳೆದಾಯ್ತು ಎಂದಿದ್ದೀರಿ. ಏನಿದರರ್ಥ? ಸಚಿವರೆಲ್ಲ ಭ್ರಷ್ಟರು, ದುರ್ಮಾರ್ಗಿಗಳು ಎಂದಾ?


ಮಹಿಮಾ: ಭ್ರಷ್ಟರು, ದುಷ್ಟರು ಅಂತಾ ಹೇಳಿಲ್ಲ... ಅವರ ಜೊತೆ ಕೂಡುವ ಅರ್ಹತೆ ನನಗಿಲ್ಲ... ಮತ್ತು ನನ್ನ ಒಳ್ಳೆಯದಕ್ಕಾಗಿಯೇ ಸಚಿವಗಿರಿ ಸಿಗದಿದ್ದುದು ಎಂದುಕೊಂಡಿದ್ದೇನೆ.

ಪತ್ರಿಕೆ: ತತ್ವ, ನಿಷ್ಠೆಗಳು ಬಿಟ್ಟು ಹೋಗಿವೆ ಎಂಬಂತೆ ಮಾತಾಡುತ್ತಿದ್ದೀರಿ. ಮೊದಲೇ ಈ ಕುರಿತು ಆಕ್ಷೇಪ ಎತ್ತಬಹುದಿತ್ತಲ್ಲ?

ಮಹಿಮಾ: ನಿಜ... ನಿಜ... ಪ್ರತಿಭಟನೆ ಮಾಡಬೇಕಿತ್ತು....

ಪತ್ರಿಕೆ: ಈಗ ಪ್ರತಿಭಟಿಸುತ್ತಿದ್ದೀರಿ... ಮಂತ್ರಿಗಿರಿ ಸಿಗದೇ ಅಭಾವ ವೈರಾಗ್ಯದಿಂದ ಹೀಗೆ ಮಾಡುತ್ತೀದ್ದೀರಿ ಅನ್ನಿಸುವುದಿಲ್ಲವೇ?

ಮಹಿಮಾ: ಒಂದು ರೀತಿ ಅಭಾವ ವೈರಾಗ್ಯವೇ.... ಸಿಕ್ಕಿದ್ದರೆ ಪರಿವರ್ತನೆ ತರಬೇಕೆಂದಿದ್ದೆ. ಈಗ ಸಿಕ್ಕಿಲ್ಲ. ಈ ಕೆಟ್ಟ ಸಂಪುಟ ನೋಡಿದರೆ ಸಿಗದಿದ್ದೇ ಒಳ್ಳೇದು ಆಯ್ತು.....



* * * * * * * *

ಮಹಿಮಾರ ಗೊಂದಲ ಶುರುವಾಗುವುದೇ ಹೀಗೆ... ನೀವು ಅವರ ಪ್ರತಿಭಟನೆ ಮೆಚ್ಚತೊಡಗುತ್ತಿದ್ದಂತೆ ಅವರ ಗೊಂದಲಮಯ ಯೋಚನೆಗಳು ಹೊರಬೀಳುತ್ತಾ ಸಾಗುತ್ತವೆ....

* * * * * * * *

ಪತ್ರಿಕೆ: ನೀವು ಮಹಾಪ್ರಧಾನ ಕಾ[illegible] ದರ್ಶಿಯಾಗಿದ್ದಾಗ ಸಿದ್ಧರಾಮಯ್ಯನ[illegible] ಬಲಿಪಶು ಮಾಡಲಾಯ್ತು, ಆಗ[illegible] ಸುಮ್ಮನಿದ್ದಿರಲ್ಲ, ಆಗ ತತ್ವ, ನಿಷ್ಠೆ [illegible] ಹೋಗಿತ್ತು?

ಮಹಿಮಾ: ಆ ವಿಷಯವನ್ನು ನಾ[illegible] ಸಾರ್ವಜನಿಕವಾಗಿ ಚರ್ಚಿಸಲಿಲ್ಲ ನಿಜ.... ಅ[illegible] ಗೌಡರು, ಸಿದ್ಧರಾಮಯ್ಯ ಇಬ್ಬರೊಂದಿ[illegible] ಮಾತಾಡಿ ಬಿಕ್ಕಟ್ಟು ಬಗೆಹರಿಸಲು ಯ[illegible] ಸಿದೆ. ಕೈಮೀರಿ ಹೋಯ್ತು, ಸಿದ್ಧರಾಮ[illegible] ಜೊತೆ ಹೋಗುವುದಕ್ಕಿಂತ ಗೌಡರ ಜೊ[illegible] ಇರುವುದೇ ಸರಿ ಅನಿಸಿತ್ತು,

ಪತ್ರಿಕೆ: ಹಿಂದೆ ಕುದುರೆಮುಖ ಗಣಿಗಾ[illegible] ಕೋಮುವಾದವನ್ನು ವಿರೋಧಿಸಿದ್ದಿರಿ. ಈ[illegible] ನಿಮ್ಮ ದಳ ಕೋಮುವಾದಿಗಳೊಂದಿಗೆ ಸ[illegible] ಸರ್ಕಾರ ರಚಿಸಿದೆ.... ಈ ಸರ್ಕಾರ[illegible] ಗಣಿಗಾರಿಕೆಯ ಪರವಾಗಿಯೇ ಇದ[illegible] ಇದರ ಬಗ್ಗೆ ಏನು ಹೇಳ್ತೀರಿ?

ಮಹಿಮಾ: ಈ ಎರಡೂ ವಿಷಯಗಳು ನನ[illegible] ಮುಜುಗರ ಉಂಟು ಮಾಡಿದ್ದು ನಿಜ[illegible] ಇವೆಲ್ಲ ಪಕ್ಷದ ನಿರ್ಧಾರಗಳಾಗಿದ್ದರಿಂದ ಬೇ[illegible] ದಾರಿನೇ ಇರ್ಲಿಲ್ಲ....

ಪತ್ರಿಕೆ: ಜನತಾ ಪರಿವಾರ ಬೆಳದದ್ದೇ ವ[illegible] ಪಾರಂಪರಿಕ ರಾಜಕಾರಣವನ್ನು ವಿರೋ[illegible] ಮಾಡುತ್ತಾ... ಈಗ ಗೌಡರ ವಂಶ[illegible] ಆಸ್ತಿಯಾಗಿರುವ ದಳದಲ್ಲಿ ನೀವೂ ಭಾಗಿ[illegible] ಹಾಗೆಯೇ ನಿಮ್ಮ ಯಶಸ್ಸಿನಲ್ಲಿ ನಿ[illegible] ತಂದೆಯ ನೆರಳೇ ಎದ್ದು ಕಾಣುತ್ತಿದೆ... ಇದ[illegible] ವಂಶ ಪಾರಂಪರಿಕ ರಾಜಕೀಯ ಅಲ್ಲ[illegible]

ಮಹಿಮಾ: ನಿಜ, ನಮ್ಮ ತಂದೆ ಪ್ರಭಾವ ಇದೆ. ಆದ[illegible] ನೆಹರುರವರ ಮಗಳು ಎನ್ನುವ ಒಂ[illegible] ಕಾರಣಕ್ಕೆ ಇಂದಿರಾ ಗಾಂಧಿ, ಇಂದಿರಾ ಮ[illegible] ಎನ್ನುವ ಒಂದೇ ಕಾರಣಕ್ಕೆ ರಾಜೀ[illegible] ಪ್ರಧಾನಿಯಾದರು. ಆದರೆ ನಾನು ಮ[illegible] ಕ್ಷೇತ್ರದಲ್ಲಿ ಓಡಾಡಿ ಜನಸಂಪರ್ಕ ಸಾಧಿ[illegible] ಹೆಂಡ, ಹಣ ಹಂಚದೇ ಗೆದ್ದಿದ್ದೇನೆ.

ಪತ್ರಿಕೆ: ಈಗ ಸಚಿವಗಿರಿಯ ಆಹ್ವಾನ ಬಂದರೆ ಏ[illegible] ಮಾಡ್ತೀರಿ...

ಮಹಿಮಾ: ಖಂಡಿತಾ ಸೇರೋದಿಲ್ಲ...ಈ ಸಚಿವ ಸಂಪುಟ[illegible] ಸ್ವರೂಪ ಬದಲಾದರೆ ಮಾತ್ರ ಸೇರುತ್ತೇನೆ. ಅಲಂಗೂರು ಶ್ರೀನಿವಾಸ್, ಮಿರಾಜುದ್ದೀನ್ ಪಟೇಲ್, ಜಿ.ಟಿ. ದೇವೇಗೌಡ, ಬೆಳ್ಳಾವಿ ರಾಜಣ್ಣ ಎ.ಟಿ. ರಾಮಸ್ವಾಮಿಯಂತಹವರು ಸಚಿವರಾಗಬೇಕು... ಆಗ ಮಾತ್ರ ನಾನು ಸಚಿವಗಿರಿ ಒಪ್ಪಿಕೊಳ್ಳುವೆ....

ಪತ್ರಿಕೆ: ಇದಕ್ಕೆ ತಾರ್ಕಿಕ ಅಂತ್ಯವೇನು[illegible]

ಮಹಿಮಾ: ರಾಜಕಾರಣಕ್ಕೆ ಹೊಸ ಆಯಾಮ ಕೊಡಬೇಕು... ಕೋ-ಆಪರೇಷನ್, ಫ್ರೀಡಮ್‌ಗಳಿಗೆ ಆದ್ಯತೆ ಇರಬೇಕು...

-ಪಿ.ಕೆ. ಮಲ್ಲನಗೌಡರ[illegible]

ಈ ಜಗತ್ತೇ ನನ್ನ ಕ್ಷೇತ್ರ... 77 ದೇಶಗಳಲ್ಲಿ ನನಗೆ ಮಿತ್ರರಿದ್ದಾರೆ...

ಇದು ಆಧ್ಯಾತ್ಮದತ್ತ ತಿರುಗಿ ಹುಚ್ಚುಚ್ಚಾಗಿ, ಬಾಲಿಶವಾಗಿ ಮಾತಾಡುವ ಮಹಿಮಾರ ಇನ್ನೊಂದು ಮುಖ... ಅವರ ಈ ಚಿತ್ರ-ವಿಚಿತ್ರ ಮಾತುಗಳನ್ನು ಓದಿ ಹೊಟ್ಟೆತುಂಬಾ ನಕ್ಕುಬಿಡಿ ಅಷ್ಟೇ.....

ಪತ್ರಿಕೆ: ಹಲವು ವರ್ಷಗಳಿಂದ ಆಧ್ಯಾತ್ಮದ ಗೀಳು ಹಚ್ಚಿಕೊಂಡಿದ್ದೀರಿ... ಈ ದಾರಿಯಲ್ಲಿ ಮೂಢನಂಬಿಕೆಗಳ ಆಚರಣೆಯೂ ಇರುತ್ತಲ್ಲ?

ಮಹಿಮಾ: ನೋ... ನೋ... ನೋ... ನನ್ನ ಆಧ್ಯಾತ್ಮಿಕ ಚಿಂತನೆಯೇ ಬೇರೆ. ನಾನು ದೇವರನ್ನು ಹುಡುಕುತ್ತಾ ದೇಶ ವಿದೇಶಗಳನ್ನೆಲ್ಲ ಸುತ್ತಿದೆ... ಕೊನೆಗೆ ನನ್ನಲ್ಲೇ ದೇವರನ್ನು ಕಂಡುಕೊಂಡೆ... ನೀವೂ ಪ್ರಯತ್ನಿಸಿ... ನಿಮ್ಮಲ್ಲೇ ದೇವರು ಸಿಗುತ್ತಾನೆ....

ಪತ್ರಿಕೆ: ಈಗ ನೀವು ಚನ್ನಗಿರಿ ಕ್ಷೇತ್ರದತ್ತ ಹೆಚ್ಚು ಗಮನ ನೀಡಲು ಅವಕಾಶ ಸಿಕ್ಕಂತಾಯ್ತಲ್ಲ?

ಮಹಿಮಾ: ತಪ್ಪು... ತಪ್ಪು... ಚನ್ನಗಿರಿಯಷ್ಟೇ ನನ್ನ ಕ್ಷೇತ್ರವಲ್ಲ.... ಈ ರಾಜ್ಯವೇ ನನ್ನ ಕಾರ್ಯಕ್ಷೇತ್ರ... ಈ ಭಾರತವೇ ನನ್ನ ಕಾರ್ಯಕ್ಷೇತ್ರ... ಹಾಗೆ ಮುಂದುವರೆಯುವುದಾದರೆ ಈ ಜಗತ್ತೇ ನನ್ನ ಕಾರ್ಯಕ್ಷೇತ್ರ... ಈ ಇಡೀ ಜಗತ್ತಿನ ಒಳಿತಿಗಾಗಿ ನಾನು ಪರಿವರ್ತನೆ ತರಬೇಕೆಂದಿದ್ದೇನೆ... ಕೇವಲ ಚನ್ನಗಿರಿಗೆ ಸೀಮಿತಗೊಳ್ಳಲಾರೆ...

(ಇದನ್ನು ಓದಿದರೆ ಶಶಿ ಥರೂರ್ ವಿಶ್ವಸಂಸ್ಥೆಯ ಸೆಕ್ರೆಟರಿ-ಜನರಲ್ ಸ್ಪರ್ಧೆಯಿಂದ ಹಿಂದೆಗೆಯುತ್ತಾರೇನೋ...?)

ಪತ್ರಿಕೆ: ಹಾಗಾದರೆ ತಮ್ಮ ಮುಂದಿನ ಗುರಿ ರಾಜಕಾರಣವಾ, ಆಧ್ಯಾತ್ಮವಾ?

ಮಹಿಮಾ: ನನಗೆ, ನಿಮ್ಮಂಥಾ ಪತ್ರಕರ್ತರಿಗೆ... ಹಾಗೆಯೇ ಇಡೀ ಜಗತ್ತಿಗೆ ಒಂದು ರೀತಿಯ **unconscious** ಮಂಪರು ಕವಿದು ಬಿಟ್ಟಿದೆ... ನನ್ನ ಮಂಪರನ್ನು ಹೊಡೆದೋಡಿಸಿಕೊಳ್ಳುತ್ತ, ನಿಮ್ಮೆಲ್ಲರಿಗೆ ಮತ್ತು ಈ ಜಗತ್ತಿಗೆ ಕವಿದಿರುವ ಮಂಪರು ತೆಗೆದು ಹಾಕುತ್ತೇನೆ! 77 ದೇಶಗಳಲ್ಲಿ ನನ್ನ ಮಿತ್ರರಿದ್ದಾರೆ...... ನಾವೆಲ್ಲ ಸೇರಿ ಈ ಪರಿವರ್ತನಾ ಕಾರ್ಯದಲ್ಲಿ ಪಾಲ್ಗೊಳ್ಳುತ್ತೇವೆ...

* * * * * * * *

ಮಹಿಮಾ ಪಟೇಲರ ಈ ಮಾತುಗಳನ್ನು ಕೇಳುತ್ತಾ, ನಗೆ ಉಕ್ಕತೊಡಗಿತು.....ಜೊತೆಗೆ 'ಹಾಳಾಗ್ತಿದ್ದಾರಲ್ಲ' ಎಂದು ಬೇಸರವೂ ಆಯ್ತು....

ಹಲೋ ಮಹಿಮಾಜಿ...,

ನೀವು ನಿಮ್ಮ ಚನ್ನಗಿರಿಯಲ್ಲೇ ವಾಸ್ತವ್ಯ ಹೂಡಿ ಆ ಕ್ಷೇತ್ರವೊಂದನ್ನು **improve** ಮಾಡಿ ಸಾಕು... ಜೆ.ಎಚ್. ಪಟೇಲರ ಮಗನಾಗಿ ನೀವು ಈ ರೀತಿ ಮಾತಾಡುತ್ತಾ ಹೋದರೆ ಜನ ಖಂಡಿತಾ ಹುಚ್ಚ ಎನ್ನಬಹುದೇನೊ? ನಿಮ್ಮನ್ನಾವರಿಸಿಬಿಟ್ಟಿರುವ ಈ ಆಧ್ಯಾತ್ಮಿಕ ಮಂಪರಿನಿಂದ ಆದಷ್ಟು ಬೇಗ ಹೊರಬಂದು, ಹೊಸ ರಾಜಕೀಯದತ್ತ ಬರುವಂತಾಗಿ...

****

ಈಗಲೂ ನಗೆ ಬರುತ್ತಲೇ ಇದೆ... ಮಹಿಮಾರ ಮೊಬೈಲ್‌ನ ರಿಂಗ್ ಟೋನ್ ನೆನೆದು...

ಭೋಟ ಭೋಟ ಆಶಾ...

ಭೋಟ ಭೋಟ ಆಶಾ...

ಆಸ್‌ಮಾನೊ ಮೆ ಉಡನೆ ಕಿ ಆಶಾ....

ಒಂದು ಕಡೆ ಗೌಡರ ವಿರುದ್ಧದ ಪ್ರತಿಭಟನೆಯ ಪ್ರಬುದ್ಧತನ.... ಮತ್ತೊಂದು ಕಡೆ ಪ್ರಪಂಚದ ಮಂಪರು ಕರಗಿಸುವೆನೆಂಬ ಬಾಲಿಶತನ!!

ಬಿಕ್ಕು, ತಿರಸ್ಕಾರ ಮತ್ತು ನಗುಗಳ ಜೊತ್ತವೇ ಬದುಕು -ಓ. ಹೆನ್ರಿ

'ನೀವು ಓಡಿ ಹೋಗೋದಾದ್ರೆ ಯಾರ ಜೊತೆ ಹೋಗ್ತೀರಾ?"

"ನಿಮ್ಮ ಮಗಳು ಯಾರ ಜೊತೆಗಾದ್ರೂ ಓಡಿ ಹೋದ್ರೆ ಏನ್ ಮಾಡ್ತೀರಾ?"

-ಇಂತಾ ಲಂಗುಲಗಾಮಿಲ್ಲದ ಹಲ್ಕಟ್ ಮಾತುಗಳು ಎಫ್.ಎಂ. ರೇಡಿಯೋ ಚಾನೆಲ್ಲುಗಳಲ್ಲಿ ಈಗ ನಿತ್ಯದ ಚರ್ಚೆ.

ಕರ್ನಾಟಕದಲ್ಲೀಗ ~ ಎಫ್.ಎಂ. ರೇಡಿಯೋ ಚಾನೆಲ್ಲುಗಳು ಗಲ್ಲಿಗೊಂದರಂತೆ ಹುಟ್ಟಿಕೊಳ್ಳುತ್ತಿವೆ. ಸರ್ಕಾರದ ಪ್ರಸಾರ ಭಾರತಿಯ ಬೆಂಗಳೂರು ಆಕಾಶವಾಣಿಯವರು ರೈನ್‌ಬೋ ಎಂಬ ಚಾನೆಲ್ ಶುರು ಮಾಡಿ ಪಾಪುಲಾರಿಟಿ ಗಳಿಸಿದೇಟಿಗೆ ಎಲ್ಲರ ಕಣ್ಣು ಅತ್ತ ಹೋದವು. ಸ್ಟಾರ್ ಗ್ರೂಪ್‌ನವರ ರೇಡಿಯೋ ಸಿಟಿ, ಟೈಮ್ಸ್‌ನವರ ರೇಡಿಯೋ ಮಿರ್ಚಿ, ಈಗಾಗಲೇ ಚಾಲೂ ಆಗಿ ಪೋಲಿ, ಅಪಾ ಪೋಲಿ, ಹುಟ್ಟು ಪೋಲಿ ಲೆವೆಲ್‌ನ ಸಂಭಾಷಣೆಗಳನ್ನು ಶ್ರೋತೃಗಳ ಜೊತೆ ನಡೆಸುತ್ತಿವೆ. ಯಾರು ಯಾರ ಜೊತೆಗೆ ಓಡಿ ಹೋದರೆಂಬ ಗಬ್ಬು ಡೈಯಲಾಗ್‌ಗಳು ಸರ್ಕಾರಿ ಎಫ್.ಎಂ.ಗಳಿಂದ ಹಿಡಿದು ಖಾಸಗಿ ರೇಡಿಯೋಗಳ ತನಕ ಕಾರಿಕೊಳ್ಳುತ್ತಲೇ ಇವೆ.



F.M. ರೇಡಿಯೋ: ಹಲ್ಕಟ್ ಜಾಕಿಗಳು

ಈ ಖಾಲಿ ತಲೆಯ ರೇಡಿಯೋ ಜಾಕಿಗಳ ಕಾಟಗಳೇ ತಡೆಯಲಾರದಷ್ಟಿರುವಾಗ ಇನ್ನೇನು ಮೂರು ಹೊಸ ಎಫ್.ಎಂ. ರೇಡಿಯೋಗಳು ಶುರುವಾಗುವ ಮಾತು ಕೇಳಿಬರುತ್ತಿದೆ.

ಆಡ್‌ಲ್ಯಾಬ್ ಹಾಗೂ ರಿಲೆಯನ್ಸ್‌ನವರದೊಂದು, ಮಿಡ್‌ಡೆ-ಬಿಬಿಸಿ ಕಾಂಬಿನೇಷನ್ನಿನಲ್ಲಿ G0 ಎಂಬುದೊಂದು, ಇಂಡಿಗೋನವರದು ಮತ್ತೊಂದು, ಇಷ್ಟು ಸಾಲದೆಂಬಂತೆ ಹಿಂದೂಸ್ತಾನ್ ಟೈಮ್ಸ್‌ನವರ ರೆಡ್ ಎಫ್.ಎಂ. ಚಾಲೂ ಆಗುತ್ತಿವೆ. ಹಾಗಾಗಿ ರೇಡಿಯೋ ಜಾಕಿಗಳಿಗೀಗ (RJ) ಡಿಮ್ಯಾಂಡಪ್ಪೋ ಡಿಮ್ಯಾಂಡ್. ಈ ಜಾಕಿಗಳಲ್ಲಿ ಚಂದಾಗಿ, ಖುಷಿಯಾಗುವಂತೆ ಮಾತನಾಡುವ ಅಸಂಖ್ಯಾತ ಜನರಿದ್ದಾರೆ. ಪದ್ಮ ಶಿವಮೊಗ್ಗ, ಚಂದ್ರಿಕಾ, ಸುಧೀಂದ್ರ, ಅಂಜಾನ್, ನಟಿ ಅಪರ್ಣಾ, ಬಸಂತಿ, ಜ್ಯೋತಿ, ರೋಹಿತ್ ಬಾರ್ಕರ್ ಮುಂತಾದವರೆಲ್ಲಾ ಈಗಾಗಲೇ ಸಾಕಷ್ಟು ಹೆಸರು ಮಾಡಿರುವ ರೇಡಿಯೋ ಜಾಕಿಗಳು. ಆದರೆ ತಲೇಲಿ ಬುದ್ಧಿಯಿರದ, ಕಾಮನ್‌ಸೆನ್ಸು, ಚುರುಕುತನ, ಜಗತ್ತಿನ ಆಗುಹೋಗು ಒಂದೂ ಗೊತ್ತಿರದ ಜಾಕಿಗಳೂ ಈಗ ರೇಡಿಯೊದೊಳಗೆ ತೂರಿಕೊಂಡು ಬಿಟ್ಟಿದ್ದಾರೆ. ಈಗ ರಿಲೆಯನ್ಸ್‌ನವರ ಎಫ್‌ಎಂಗೆ ಸೆಲೆಕ್ಟ್ ಆಗಿರುವ ಪ್ರೀತಿ, ಅರ್ಚನಾ ಮೊದಲಿದ್ದ ಎಫ್.ಎಂ.ಗಳಲ್ಲಿ ಆವರೇಜ್ ಲೆವೆಲ್‌ನಲ್ಲಿದ್ದವರು. ಇನ್ನು Go ರೇಡಿಯೋ ಸೇರಿರುವ ಯದುನಂದನನ ಧ್ವನಿ ಹೆಣ್ಣಿಗನ ಮಾತಿನಂತಿರುತ್ತದೆ.

ಪ್ರತಿಭೆ, ಚಾಕಚಕ್ಯತೆ ಇರದ ಇಂಥವರೇ 'ಓಡಿ ಹೋದವರ ಪುರಾಣ' ಬಿಚ್ಚಿ ಕುಳಿತುಕೊಳ್ಳುತ್ತಿರುತ್ತಾರೆ. ರೈನ್‌ಬೋದಲ್ಲಿದ್ದ ಕೆಲವು ಅವಿವೇಕ ಇಂಗ್ಲಿಷ್ ಜಾಕ್ಗಳು 'ನಿಮ್ಮ ಮರೆಯಲಾಗದ ಕ್ಷಣ' ಯಾವುದೆಂದು SMS ಕಳಿಸುವಂತೆ ಜನರಿಗೆ ಹೇಳಿ ಅವರ ಹಾಸಿಗೆ ಸಾಹಸಗಳನ್ನೇ ಯಥಾವತ್ ಓದುತ್ತಿದ್ದಾರೆ. ಡೇಟಿಂಗ್ ಪಾಟಿಂಗ್ ಎಂದೆಲ್ಲಾ ಹರಟುತ್ತಿರುತ್ತಾರೆ.

ರೇಡಿಯೋ ಮಿರ್ಚಿ ತರದವರಿಗೆ ಕನ್ನಡದ ಬಗ್ಗೆ ವಿಪರೀತ ಅಸಡ್ಡೆ, ಅವರೆಲ್ಲಾ ನೆಪಮಾತ್ರಕ್ಕೆ, ಒಬ್ಬ ಕನ್ನಡದವರನ್ನು ಸೇರಿಸಿಕೊಂಡು ಉಳಿದಂತೆ ಬರೀ ಇಂಗ್ಲಿಷ್-ಹಿಂದಿ ಬೊಗಳುತ್ತಿರುತ್ತಾರೆ. ಮೂವತ್ತರಿಂದ ಎಪ್ಪತ್ತು ಸಾವಿರದವರೆಗೆ ಸಂಬಳಗಳಿವೆ. ಆದರೆ ಇವರ್‍ಯಾರಿಗೂ ಕನ್ನಡ, ಕನ್ನಡಿಗರು ಬೇಕಿಲ್ಲ, ರೇಡಿಯೋ ಮಿರ್ಚಿಯಲ್ಲಿ ಕನ್ನಡ ಗೊತ್ತಿರುವ ಜನರೇ ಇಲ್ಲ, ಒಂದಿಬ್ಬರು ಕನ್ನಡ ಮಾತಾಡಿದರೂ ಪ್ರೋಗ್ರಾಂಗಳು ಪೂರ್ತಿ ವೆಸ್ಟರ್ನ್ ಸ್ಟೈಲಿನಲ್ಲಿರುತ್ತವೆ. Go ನಲ್ಲೂ ಕೂಡ ಈಗ ಯದುನಂದನ್ ಬಿಟ್ರೆ ಕನ್ನಡಿಗರು, ಪೃಥ್ವಿ, ಪಲ್ಲವಿ, ಪವಿತ್ರ, ಇವರಿಗೂ ಕನ್ನಡಕ್ಕೂ ಅಷ್ಟಕಷ್ಟೆ, ಇವರ ಕಂಠ-ಪ್ರತಿಭೆಯೂ ಅಷ್ಟಕಷ್ಟೇ.

ರೇಡಿಯೋ ಕಳೆದ ಶತಮಾನದಿಂದಲೂ ಜನರ ಅಚ್ಚುಮೆಚ್ಚಿನ ಸಂಗಾತಿಯಾಗೇ ಉಳಿದುಕೊಂಡು ಬಂದಿದೆ. ಈಗಲೂ ಎಫ್.ಎಂ.ನಲ್ಲಿ ಹಳೇ ಕನ್ನಡ ಹಾಡುಗಳು ಬಂದರೆ ಕೇಳಲು ನಿಜಕ್ಕೂ ಚೆನ್ನ, ಆದರೆ ಕನ್ನಡ ಬೇಡ, ಕನ್ನಡಿಗರು ಬೇಡ ಎನ್ನೋರಿಗೆ 'ಸಖತ್ ಹಾಟ್' ಕನ್ನಡದಂತಹ ಪಾಠವನ್ನು ಜನರೇ ಕಲಿಸಿದರೆ ಉತ್ತಮ.

-ವರದಿಗಾರ

ಆದಿವಾಸಿ: ಅಂತ್ಯಗೊಳ್ಳದ 'ವನವಾಸ'!

ಬಿಟ್ bit ಹಿಟ್!

ಪಿ.ಕೆ. ಮಲ್ಲನಗೌಡರ್



ಅತಂತ್ರ ಸ್ಥಿತಿಯಲ್ಲಿರುವ ನಮ್ಮ ದೇಶದ ಸಹಸ್ರಾರು ಆದಿವಾಸಿಗಳ ಪರಿಸ್ಥಿತಿ ಕುರಿತು ಖ್ಯಾತ ಸಮಾಜತಜ್ಞ ರಾಮಚಂದ್ರ ಗುಹಾರವರು ಇತ್ತೀಚೆಗೆ ಹೀಗೆ ಬರೆದಿದ್ದಾರೆ:

ಸ್ವಾತಂತ್ರ್ಯ ಬಂದು 60 ವರ್ಷಗಳಾದರೂ ಇಲ್ಲಿ ದಲಿತರು (SC) ದಯನೀಯ ಸ್ಥಿತಿಯಲ್ಲಿದ್ದಾರೆ. ಆದಿವಾಸಿಗಳು (ST) ಇನ್ನೂ ದಯನೀಯ ಸ್ಥಿತಿಯಲ್ಲಿದ್ದಾರೆ. ಎಸ್.ಟಿ.ಗಳ ಸಾಕ್ಷರತಾ ಪ್ರಮಾಣ ಶೇ. 23 ಇದ್ದರೆ, ದಲಿತರದು ಶೇ. 30.1 ಇದೆ. ಶೇ. 49.9 ರಷ್ಟು ಎಸ್.ಟಿ.ಗಳು ಬಡತನ ರೇಖೆಗಿಂತ ಕೆಳಗಿದ್ದರೆ, ಶೇ. 41.5 ರಷ್ಟು ದಲಿತರು ಆ ಗುಂಪಲ್ಲಿದ್ದಾರೆ.

ಇವಿಷ್ಟೇ ಅಂಕಿ ಅಂಶಗಳು ಸಾಕು: ಆದಿವಾಸಿಗಳು ದಲಿತರಿಗಿಂತ ಹೀನಾಯ ಬದುಕು ಸಾಗಿಸುತ್ತಿದ್ದಾರೆ ಎಂದು ತಿಳಿದುಕೊಳ್ಳಲು.

ದಲಿತರ ರಾಜಕೀಯ ಪ್ರಭಾವ ಮತ್ತು ಆದಿವಾಸಿಗಳ ರಾಜಕೀಯದ ಶೂನ್ಯ ಪರಿಣಾಮಗಳಿಗೆ ಭೌಗೋಳಿಕತೆ ಮತ್ತು ಜನನ-ಮರಣ ಪ್ರಮಾಣಗಳು ಕಾರಣೀಭೂತವಾಗಿವೆ. ದಲಿತರಿಗೆ ತಮ್ಮದೇ ಆದ ಸ್ವಂತ ಒಮ್ಮೊಮ್ಮೆ ಪ್ರಭಾವಶಾಲಿಯೂ ಆದ ರಾಜಕೀಯ ಪಕ್ಷಗಳಿವೆ, ನಾಯಕರಿದ್ದಾರೆ. ಆದಿವಾಸಿಗಳಿಗೆ ಇದ್ಯಾವುದೂ ಲಭ್ಯವಿಲ್ಲ, ಆದಿವಾಸಿಗಳು ಆದಿವಾಸಿಹಳ್ಳಿ, ಕಾಡು, ಗುಡ್ಡ, ಕೊಳ್ಳಗಳಲ್ಲಿ ವಾಸಿಸುತ್ತಾರೆ. ಆಂಧ್ರದಲ್ಲಿ ಒಟ್ಟು ಜನಸಂಖ್ಯೆಯ ಶೇ. 6 ರಷ್ಟು, ಮಹಾರಾಷ್ಟ್ರದಲ್ಲಿ ಶೇ. 9 ರಷ್ಟು, ರಾಜಸ್ಥಾನದಲ್ಲಿ ಶೇ. 12 ರಷ್ಟು ಇದ್ದಾರೆ. ಆದಿವಾಸಿಗಳ ಹಿತಾಸಕ್ತಿ ಕಾಪಾಡಲೆಂದೇ ಸೃಷ್ಟಿಗೊಂಡ ರಾಜ್ಯಗಳಾದ ಜಾರ್ಖಂಡ್, ಚತ್ತೀಸ್‌ಗಡ್‌ಗಳಲ್ಲಿ ಶೇ. 33 ರಷ್ಟು ಆದಿವಾಸಿಗಳಿದ್ದಾರೆ.

ದಲಿತರು ಸಂಖ್ಯೆಯಲ್ಲಿ ಕಡಿಮೆ ಇದ್ದರೂ ಅವರು ಹಳ್ಳಿಗಳಲ್ಲಿ ಇತರ ಜಾತಿ, ವರ್ಗಗಳೊಂದಿಗೆ ವಾಸಿಸುತ್ತಿರುವುದರಿಂದ ಮೀಸಲು ಅಲ್ಲದ ಕ್ಷೇತ್ರಗಳ ಚುನಾವಣೆಗಳಲ್ಲೂ ಪ್ರಮುಖ ಪಾತ್ರ ವಹಿಸುತ್ತಾರೆ. ದಲಿತರಿಗೆ ಅಂಬೇಡ್ಕರ್‌ರಂತ ನಾಯಕರ ಸ್ಫೂರ್ತಿ ಇದೆ. ಆದರೆ ಆದಿವಾಸಿಗಳಿಗೆ ಅಂತಹ ನಾಯಕ ಸಿಗಲೇ ಇಲ್ಲ, ಅಂಬೇಡ್ಕರ್, ಜಗಜೀವನರಾಮ್‌ರಿಂದ ರಾಮ್ ವಿಲಾಸ್ ಪಾಸ್ವಾನ್, ಮೀಯ ರಾಕುಮಾರ್‌ವರೆಗೆ ದಲಿತ ನಾಯಕರು ಉನ್ನತ ಸ್ಥಾನ ಅಲಂಕರಿಸಿದ್ದಾರೆ. ಆದರೆ ಆದಿವಾಸಿಗಳಿಗೆ ಇಲ್ಲಿವರೆಗೂ ಕ್ಯಾಬಿನೆಟ್ ದರ್ಜೆಯ ಪ್ರಭಾವಿ ಖಾತೆಗಳು ಸಿಕ್ಕೇ ಇಲ್ಲ.

ರಾಜಕೀಯ ವರ್ಗಗಳ ಅನಾದರಕ್ಕೆ ಗುರಿಯಾದ ಆದಿವಾಸಿಗಳೀಗ ನವ-ಆರ್ಥಿಕತೆ, ನವ ಬಂಡವಾಳಶಾಹಿಗಳಿಂದ ಶೋಷಣೆಗೆ ಒಳಗಾಗುತ್ತಿದ್ದಾರೆ. ಬೆಲೆಬಾಳುವ ಖನಿಜಗಳಿಗಾಗಿ ಆದಿವಾಸಿಗಳನ್ನು ಎತ್ತಂಗಡಿ ಮಾಡಿ ಅತಂತ್ರ ಮಾಡಲಾಗುತ್ತಿದೆ. ಇವತ್ತು ಅಭಿವೃದ್ಧಿ ಹೆಸರಲ್ಲಿ ಎತ್ತಂಗಡಿಗೊಳಗಾದವರಲ್ಲಿ ಶೇ. 40 ರಷ್ಟು ಆದಿವಾಸಿಗಳೇ ಇದ್ದಾರೆ. ಎತ್ತಂಗಡಿಯಾಗದ ಆದಿವಾಸಿಗಳಿಗೂ ಸರ್ಕಾರ ಯಾವ ಸಹಾಯವನ್ನೂ ನೀಡುತ್ತಿಲ್ಲ, ಶಾಲೆ, ಆಸ್ಪತ್ರೆ, ಉದ್ಯೋಗ ಎಲ್ಲದರಲ್ಲೂ ಅನ್ಯಾಯ ನಡೆದೇ ಇದೆ.

ಈ 60 ವರ್ಷಗಳಲ್ಲಿ ಆರ್ಥಿಕ ಬೆಳವಣಿಗೆ ಮತ್ತು ರಾಜಕೀಯ ಸ್ವಾತಂತ್ರ್ಯಗಳಿಂದ ಆದಿವಾಸಿಗಳಿಗೆ ನಯಾಪೈಸೆ ಲಾಭವಾಗಲಿಲ್ಲ, ಅವರು ಕಳೆದುಕೊಂಡಿದ್ದೇ ಹೆಚ್ಚು...

-ರಾಮಚಂದ್ರ ಗುಹಾ (ಕೃಪೆ: ಇಂಡಿಯಾ ಟುಡೆ)

* * * * * * * * *

ಇಲ್ಲಿ ನಮ್ಮ ಮಲೆನಾಡಿನಲ್ಲೂ ಇದೇ ಪರಿಸ್ಥಿತಿಯಲ್ಲವೇ? ಚತ್ತೀಸ್‌ಗಡದಿಂದ ಹಿಡಿದು ಮಲೆನಾಡವರೆಗೆ ಆದಿವಾಸಿಗಳ ಪರಿಸ್ಥಿತಿ ಹೀಗೇಕಾಗಿದೆ? ಈ ಪ್ರಶ್ನೆಗೆ ಉತ್ತರಿಸುವವರ್‍ಯಾರು?

ರೈತರ ದಿನಾಚರಣೆ: ಹುತಾತ್ಮ ದಿನಾಚರಣೆಯೇ?

1998-2003 ರ ಅವಧಿಯಲ್ಲಿ ಭಾರತದಲ್ಲಿ 1 ಲಕ್ಷ ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಂದರೆ ಸರಾಸರಿ ಒಂದು ದಿನಕ್ಕೆ 45 ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಕಳೆದ ಜನವರಿಯಿಂದ ಈ ಜೂನ್‌ವರೆಗೆ ಮಹಾರಾಷ್ಟ್ರದ ವಿದರ್ಭವೊಂದರಲ್ಲೇ 700 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಜಾಗತೀಕರಣದ ಭರಾಟೆ ಹೆಚ್ಚುತ್ತಲೇ ಇರುತ್ತದೆ, ರೈತರ ಆತ್ಮಹತ್ಯೆಗಳ ಸಂಖ್ಯೆಯೂ ಏರುತ್ತಲೇ ಇರುತ್ತದೆ.


ಕಳೆದ ಬಾರಿಯ 'ಚಾರ್ವಾಕ'ದಲ್ಲಿ ಬರೆದಿದ್ದ ಈ ವಿಷಯ ಓದಿದರೇನೋ ನಮ್ಮ ಸಿ.ಎಂ.? ಈಗ ಅವರು ಡಿಸೆಂಬರ್ 23 ರಂದು ರೈತರ ದಿನಾಚರಣೆ ಆಚರಿಸಲಂತೂ ನಿರ್ಧರಿಸಿದ್ದಾರೆ.

ದೇಶಕ್ಕಾಗಿ ಪ್ರಾಣ ತೆತ್ತವರಿಗಾಗಿ ಹುತಾತ್ಮರ ದಿನಾಚರಣೆ ಆಚರಿಸುವ ಪರಿಪಾಠ ಇದೆ ಅಲ್ಲವೆ? ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರನ್ನು ಸ್ಮರಿಸಲು ಕುಮಾರಸ್ವಾಮಿಯ ಕೆಲಸಗೇಡಿ, ರೈತ ವಿರೋಧಿ ಸರ್ಕಾರ ನಿರ್ಧರಿಸಿದಂತಾಗಿದೆ.


ರೈತರಿಗೆ ಸಬ್ಸಿಡಿ ಇಲ್ಲ, ಬೆಳೆದ ಬೆಳೆಗೆ ಬೆಲೆಯಂತೂ ಇಲ್ಲವೇ ಇಲ್ಲ. ಆದರೂ 'ರೈತ ದಿನಾಚರಣೆ'ಯಂತೆ. ಅಂದು ಅವರೆಲ್ಲಾ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳಬೇಕೆಂಬುದು ಕುಮಾರಸ್ವಾಮಿಯ ಬಯಕೆಯೇ?



ನೈಜ ಪ್ರಜಾಪ್ರಭುತ್ವವಿಲ್ಲ... ಮತ್ತಿನ್ನೇನು?



- ಸರ್ದಾರ್ ಸರೋವರ್ ಪ್ರಾಜೆಕ್ಟ್ ಸಲುವಾಗಿ ಎತ್ತಂಗಡಿಯಾದ ನಿರಾಶ್ರಿತರ ಪರವಾಗಿ 30 ವರ್ಷಗಳ ಕಾಲ ಅಹಿಂಸಾತ್ಮಕ ಹೋರಾಟ ನಡೆಸಿದ ಮೇಧಾ ಪಾಟ್ಕರ್ ಹೇಳಿದರು: "ಈ ದೇಶದಲ್ಲಿ ನೈಜ ಪ್ರಜಾ ಪ್ರಭುತ್ವವೇ ಇಲ್ಲ...."



- ಮುಂಬೈ, ದೆಹಲಿಯ ಸ್ಲಮ್ ನಿವಾಸಿಗಳ ಎತ್ತಂಗಡಿ ವಿರೋಧಿಸಿ ಮಾತನಾಡಿದ ವಿ.ಪಿ. ಸಿಂಗ್ ಹೇಳಿದರು: "ಸರ್ಕಾರ ಸ್ಲಮ್ ನಿವಾಸಿಗಳಿಗೆ ಇದೇ ರೀತಿ ಅನ್ಯಾಯ ಮುಂದುವರೆಸಿದರೆ ಅವರೆಲ್ಲಾ ನಕ್ಸಲರಾಗಬೇಕಾಗುತ್ತದೆ, ಮತ್ತು ಆಗುತ್ತಾರೆ..."




- ಇತರ ಹಿಂದುಳಿದ ವರ್ಗಗಳ ಮೀಸಲಾತಿ ಪರ ಮಾತಾಡಿದ ಸಿದ್ಧರಾಮಯ್ಯ ಹೇಳಿದರು: "ಒ.ಬಿ.ಸಿ.ಗಳಿಗೆ ಮೀಸಲಾತಿ ನೀಡದಿದ್ದರೆ, ನೇಪಾಳದಂತೆ ಇಲ್ಲೂ ಮಾವೋ ಕ್ರಾಂತಿ ಮಾಡಬೇಕಾಗುತ್ತದೆ......"



- ಬಜೆಪಿ ಸಂಸದ ಎಚ್.ಟಿ. ಸಾಂಗ್ಲಿಯಾನ ಹೇಳಿದರು: "ಕ್ರೈಸ್ತರ ವಿರುದ್ಧದ ಅಪಪ್ರಚಾರ, ಅವರ ಮೇಲಿನ ದುರಾಚಾರ ನಿಲ್ಲಿಸದಿದ್ದರೆ ಅವರೆಲ್ಲ ನಕ್ಸಲರಾಗುತ್ತಾರೆ...."



- ಆದಿವಾಸಿ ನಿರಾಶ್ರಿತರನ್ನು ನಿರ್ಲಕ್ಷಿಸುವ ಸರ್ಕಾರಗಳ ವಿರುದ್ಧ ಕಿಡಿಕಾರಿದ ಅರುಂಧತಿ ರಾಯ್ ಹೇಳಿದರು: "ಆದಿವಾಸಿಗಳೆಲ್ಲ ನಕ್ಸಲ್ ದಾರಿ ಹಿಡಿಯಲಿದ್ದಾರೆ..."



- ಭ್ರಷ್ಟ ಅಧಿಕಾರಿಗಳನ್ನು ನೋಡಿ ರೋಸಿ ಹೋದ ಲೋಕಾಯುಕ್ತ ವೆಂಕಟಾಚಲ ಗುಡುಗಿದರು: "ಇದನ್ನೆಲ್ಲ ನೋಡುತ್ತಿದ್ದರೆ ನಾನು ನಕ್ಸಲೈಟ್ ಆಗಿಬಿಡುತ್ತೇನೇನೋ?"
- ಹಿಂದುಳಿದ ವರ್ಗಗಳ ನಾಯಕರು, ಅಹಿಂಸಾತ್ಮಕ ಹೋರಾಟಗಳನ್ನು ನಂಬಿದವರು, ಬಿಜೆಪಿಯ ಸಂಸದ, ಬರಹಗಾರ್ತಿ, ಲೋಕಾಯುಕ್ತ ಅಧಿಕಾರಿಗಳೆಲ್ಲ ಸರ್ಕಾರಗಳ ಭ್ರಷ್ಟತೆ, ನಿಷ್ಕ್ರಿಯತೆ ವಿರುದ್ಧ ಮಾತಾಡುವಾಗ ಮೇಲಿನಂತೆ ಹೇಳುತ್ತಲೇ ಇದ್ದಾರೆ.

ಏಕ್ ಹೀ ರಾಸ್ತಾ....?

ಒಂದು CDಗವನ

ನೇಪಾಳ ರಾಜಪ್ರಭುತ್ವದ
ಗೋಳಾಟ
'ನಾನೇನು ತಪ್ಪು ಮಾಡಿದೆ....'
ಭಾರತದ (ಪ್ರಜಾ)ಪ್ರಭುತ್ವದ ಕಿತ್ತಾಟ
'ನಾನೆಷ್ಟು ಗುಳುಂ ಮಾಡಿದೆ
ನೀನೆಷ್ಟು ಗುಳುಂ ಮಾಡಿದೆ?...'
ಪರಿಹಾರಕ್ಕೊಂದೇ ಅಸ್ತ್ರ
ಅದು ಏಕ್ ಹೀ ರಾಸ್ತಾ....?



ಬದುಕೆಂದರೆ ನೈಜ ಹಾಗು ತೀವ್ರವಾದದ್ದು; ಆದರೆ ಮಹತ್ತರವಾದದ್ದೇನೂ ಅದರ ಗುರಿಯಲ್ಲ -ಲಾಂಗ್‌ಫೆಲೋ

ಅಂತೂ ದ್ಯಾವೇಗೌಡನ ಜಲ್ಮ ಸಾರ್ಥಕಾಯ್ತು ಬುಡ್ಲ!

ಬಯಲು ಸೀಮೆಯ ಕಟ್ಟೆ ಪುರಾಣ

"ಕುಮಾರಸ್ವಾಮಿ ಇನ್ನು ವಸಿ ಜನ ಮಂತ್ರಿ ಮಾಡಿವನಂತೆ" ಎಂದು ಸೀರ ಅಷ್ಟೇನು ಉತ್ಸಾಹವಿಲ್ಲದವನಂತೆ ಹೇಳಿದ.

"ವಸಿ ಜನ ಮಾಡದ್ಯಾಕೆ, ಯಲ್ಲಾರ್‍ನು ವಟ್ಟಿಗೆ ಮಾಡಲೇಳು ನಮಿಗೇನು?" ಎಂದ ಕಾಳಮಾವ.

"ನೀನೇಳದ್ಯಂಗಾಯ್ತು ಅಂದ್ರೆ, ಮಂಗಮುಂಡೆದ ಮನಿಗೆ ಬುದೊವತ್ತಿಗೆ ಮನಿಯೋರನ್ನಲ್ಲ ಬಸುರು ಮಾಡಿತ್ತಂತೆ ಅಂಗೇಳತಿಯಲ್ಲೊ ಮಾವ" ಎಂದಳು ಜುಮ್ಮಿ.

"ಮತ್ತೆ ಇನ್ನೇನೇಳದ್ಲೆ. ಯಾವ್ನು ಮುಂಡೆ ಮಗ ಮಂತ್ರಿಯಾದ್ರೆ ನಮಿಗೆ ಬಂದ ಬಾಗ್ಯ ಏನು? ಅವ್ನೇನು ಬಂದು ನೇಗಲ ತಗೊಟ್ನನೊ, ಅಥವಾ ಬಿತ್ನೆಬೀಜ ಗ್ವಬ್ಬರ ತಗೊಟ್ನನೊ ಹೇಳು?"

"ಯಾರು ತಗೊಡದಿಲ್ಲ ಕಣ ಮಾವ" ಎಂದ ಉಗ್ರಿ.

"ಆ ಭೈರೇಗೌಡ ಕುಸಿ ಮಂತ್ರಿಯಾಗಿದ್ದಾಗ ಅಧಿಕಾರಿಗಳು ತಾರಾಡಿಕಂಡು ಓಡಾಡಿದ್ರು, ಗೊತ್ತೆ?"

"ಭೈರೇಗೌಡೆಲ್ಲಿ, ಇವೆಲ್ಲಿ. ಅಂಥೋನು ವಬ್ಬನೇ ವಬ್ಬ ಮಂತ್ರಿಯಿಲ್ಲ ಈಗ."

"ಅದ್ಯಾಕೆ ಎಂ.ಪಿ. ಪ್ರಕಾಶ ಇಲವೇನ್ಲ?" ಎಂದಳು ಜುಮ್ಮಿ.

"ಅಂಗರೆ ಪ್ರಕಾಶ ತಿರಗ ಮಂತ್ರಿಯಾದ್ನೆ?" ಎಂದ ಕಾಳಮಾವ.

"ಊ ಕಣ ಮಾವ. ಪಾಪ ಆ ಪಟೇಲ್ರು ಮಗ ಮಯಿಮಾ ಪಟೇಲನ್ನ ತಗಳದು ಬುಟ್ಟು ಪ್ರಕಾಶನ್ನ ತಗಂಡ್ರು."

"ಪ್ರಕಾಶ ನನಿಗೆ ಬ್ಯಾಡಿ ಅವುನ್ನೆ ಮಾಡಿ ಅನ್ನಬೇಕಾಗಿತ್ತು."

"ಅಂಗಂದ್ರು ದ್ಯಾವೇಗೌಡ ತಗೊಬೇಕಲ್ಲ, ಅವುನಿಗೆ ಈಗ ಪ್ರಕಾಶ ಬೇಕಾಗಿತ್ತು ಅದ್ಕೆ ತಗೊ ಅಂದ, ಇವುನು ತಗಂಡ."

"ಅಂಗಾದ್ರೆ ಪ್ರಕಾಶ ದ್ಯಾವೇಗೌಡನಿಗೆ ಬೇಕಾಗಿತ್ತೆ?"

"ಊ ಕಣ ಮಾವ. ನೈಸ್ ರಸ್ತೆ ಗಲಾಟೆಲಿ ಮಗ ಬಾಯಿಗೆ ಬಂದಂಗೆ ಮಾತಾಡಿ ಸಿಗಾಯ್ಕಂಡಿದ್ದ. ಇರೋದ ಪಕ್ಷದೋರು ಮಗನ ಬಾಯಿ ಕಟ್ಟಾಕದ ನೋಡಿದೋನಿಗೆ ಯಲ್ಲಾ ಮಾತಿಗೂ ಉತ್ತರ ಕೊಡೋನೊಬ್ಬ ಈಟೇಮಲ್ಲಿ ಇಲ್ದೆಯಿದ್ರೆ ಮಗನ್ನ ಮೂರು ಕಾಸಿಗೆ ಹರಾಜಾಕ್ತರೆ ಅನ್ನುಸ್ತು. ಅದ್ಕೆ ನಾಳೆನೆ ಮಂತ್ರಿ ಮಂಡಳ ಅಗಲ ಮಾಡಿ ಪ್ರಕಾಶನ್ನ ತಗೊ ಅಂದನಂತೆ. ಅದ್ಕೆ ತರಾತುರಿಲಿ ಮಂತ್ರಿಗಳ ಮಾಡಿದ್ರು" ಎಂದ ಉಗ್ರಿ.

"ರಿಯಲ್ ಪ್ಯಾಕ್ಟು ಇನ್ನು ಒಂದದೆ ಕಣೊ ಉಗ್ರಿ" ಎಂದ ವಾಟಿಸ್ಸೆ.

"ಅದೇನು ಫ್ಯಾಕ್ಟು ಹೇಳ್ಳ?" ಎಂದಳು ಜುಮ್ಮಿ.

"ರೇವಣ್ಣನೆಡ್ತಿ ದಿನಾ ಮನೆತಕ್ಕೆ ಬಂದು ಬೋದು ಹೋಗೋಳಂತೆ. ನನ್ನ ಗಂಡನ್ನ ಮಂತ್ರಿ ಮಾಡ್ತಿಯೋ ಇಲವೊ ಅಂತ. ಕಡೆಗೆ ಸ್ವಸೆರ ಜಗಳ ನೋಡಕ್ಯಾಗದೆ ದ್ಯಾವೇಗೌಡ ಒಂದು ತೀರ್ಮಾನ ತಗೊಂಡನಂತೆ. ಏನಪ್ಪಾ ಆ ತೀರ್ಮಾನ ಅಂದ್ರೆ, ರೇವಣ್ಣನ ಮಾತ್ರ ಮಂತ್ರಿ ಮಾಡಿದ್ರೆ ಜನ ಏನು ತಿಳಕತ್ತರೆ ಅಂತ ಜ್ವತಿಗೆ ಪ್ರಕಾಶನ್ನ ಮಾಡಿದ್ರೆ ಜನಗಳೂ ತಪ್ಪು ತಿಳಕಳದಿಲ್ಲ, ಲಿಂಗಾಯಿತ್ರಿಗೂ ಸಮಾಧಾನಾಯ್ತದೆ ಅಂತ ಯೋಚನೆ ಮಾಡೋ ವಪ್ಟರಲ್ಲಿ ವಿಧಾನಸಭೆಲಿ ಮಗ ಮಾತಾಡಕ್ಯಾಗದೆ ವದ್ದಾಡದು ಗೊತ್ತಾಗಿ ಅಂತು ಯಾರ್‍ಯಾರೋ ಮಂತ್ರಿಗಳಾದ್ರು ಅತ್ತಗೆ."

"ಪ್ರಕಾಶ ನಿನಗೆ ಗೊತ್ತಲವೇನ್ಲ?"

"ಇದೇನಕ್ಕ ಹಿಂಕೇಳ್ತಿ? ಕ್ಲೋಜ್ ಪ್ರೆಂಡು."

"ಅಂಗರೆ ಮಿನಿಟ್ರಾಗ್ಯವುರಲ್ಲ ಈಗೇನ್ನಾರ ಮಾಡಿಕಳ್ಳ."

"ಏನು ಮಾಡಿಕಳನಕ್ಕ, ಪ್ರಕಾಶನ್ನ ದುಡ್ಡು ಕೇಳಕ್ಯಾದತೆ? ದುಡ್ಡು ಕೇಳಿದ್ರೆ ಪ್ರೆಂಡ್‌ಸೀಪ್ಪೋಯ್ತದೆ ಇನ್ನೇನು ಕೇಳನಾ?"

"ಸೈಟು ಕೇಳು."

"ನನಿಗ್ಯಾಕಕ್ಕ ಸೈಟು? ನನಿಗೆ ಪ್ರಾಪರ್ಟಿ ಕಂಡ್ರೆ ಅಷ್ಟಕಷ್ಟೆಯ. ಏನಪ್ಪ ಅಂದ್ರೆ ಮಂತ್ರಿಗಳು ನನ್ನ ಕಂಡ್ರೆ ವಿಶ್ ಮಾಡ್ಲಿ ಅಷ್ಟೇ ಸಾಕು."

"ಪ್ರಕಾಶ ಹೋಂ ಮಿನಿಸ್ಟ್ರಾಗಿರದ್ರಿಂದ ಪೊಲೀಸ್‌ನೋರ ಟ್ರಾನ್ಸ್‌ಪರ್ ಮಾಡಿಸಿ ದುಡ್ಡು ಮಾಡೊ" ಎಂದ ಉಗ್ರಿ.

"ಮಿಸ್ಟರ್ ಉಗ್ರಿ, ಪ್ರಕಾಶನಿಗೆ ಯಾವ ಪೊಲೀಸ್‌ನೂ ಟ್ರಾನ್ಸ್‌ಫರ್ ಮಾಡೊ ಪವರ್‍ರೇಯಿಲ್ಲ ಕಣೊ."

"ಅದ್ಯಂಗೊ?"

"ದ್ಯಾವೇಗೌಡ್ರು ಮಕ್ಕಳ ಜ್ವತೆ ಕೂತಗೊಂಡು ಇಡೀ ಪೊಲೀಸ್‌ನೋರ ಐಜಿಯಿಂದ ಹಿಡದು ಹೆಡ್‌ಕಾನ್‌ಸ್ಟೇಬಲ್‌ವರಿಗೂ ವರ್ಗ ಮಾಡಿ, ಆಯಕಟ್ಟಿನ ಜಾಗಕ್ಕೆ ಯಾರ್‍ಯಾರ್‍ನ ಹಾಯ್ಕಬೇಕು, ಯಾರ್‍ಯಾರ್‍ನ ದಬ್ಬುಬೇಕು ಅಂತ ಮೂರಾವರ್ತಿ ವರ್ಗ ಮಾಡಿ ಈಗ ಆ ಖಾತೆ ತಗದು ಎಂಪಿ ಪ್ರಕಾಶ್ ಕೈಗೆ ಕೊಟ್ಟವುರೆ. ಈಗ ಪ್ರಕಾಶ್ ತಿರಗ ವರ್ಗ ಮಾಡಕ್ಯಾದತೆ? ಮಾಡಿದ್ರು ಗೌಡ್ರು ಬುಟ್ಟರೆ?"

"ಅಂಗಂತಿಯಾ?"

"ಊ ಮತ್ತೆ."

"ವಳ್ಳೆ ಆಡಳತ ಕೊಡಕ್ಕೆ ಅಂಗೆ ಮಾಡಿರಬೇಕು ಬುಡ್ಲ."

"ನೀನು ಇನ್ನೇನಂತಿ ದ್ವಡಪ್ಪ, ದ್ಯಾವೇಗೌಡ ಏನು ಮಾಡಿದ್ರು ರೈತರಿಗೇನೊ ಮಾಡಕ್ಕೆ ವಂಟವುನೆ ಅಂತಿ, ರೇವಣ್ಣನ್ನ ಮಂತ್ರಿ ಮಾಡದಕ್ಕಿಂತ ದತ್ತು ಮಗನಂಗಿರೊ ಆ ಪುಟ್ಟೇಗೌಡುನ್ನ ಮಾಡಬವುದಿತ್ತು. ಹೋಗಿ ಕನ್ನಡ ಬರಿಯಕ್ಕೆ, ಮಾತಾಡಕ್ಕೆ ಬರದೆಯಿರೊ ಆ ಜಮೀರಮ್ಮದ್‌ನ ಮಂತ್ರಿ ಮಾಡಿದನಲ್ಲ ಇದು ಸರಿನೆ ದ್ವಡಪ್ಪ?"

"ಅವುರು ಮಾಡದೆ ಅಂಗೆ ಕಣೊ. ನೀವೇನಾರ ಮಾಡಿಕಳಿ ನಾವು ಮಾಡದೆ ಅಂಗೆ ಅಂತರೆ. ಇದಕೇನೇಳ್ತಿ?" ಎಂದ ಉಗ್ರಿ.



"ಕನಡ ಬರದೆಯಿರೊ ಮಂತ್ರಿ ಯಾರ್‍ಲ?" ಎಂದಳು ಜುಮ್ಮಿ.

"ಅದೆ ಕಣಕ್ಕ ದ್ಯಾವೇಗೌಡ ದರಿದ್ರ ನಾರಾಯಣ್ಣ ಯಾಸ ಹಾಕಿ ಚಾಮರಾಜಪೇಟೆಯಿಂದ ಗೆಲ್ಲಿಸಿಕೊಂಡು ಬಂದ್ರಲ್ಲ ಅವುನು."

"ಏ ಅಲ್ಲಿಗಂಟ ಯಾಕೋಯ್ತಿ, ಯಮ್ಮೆಲ್ಲೆಗಳನ್ನ ಕುಮಾರಸ್ವಾಮಿ ಕರಕಂಡೋಗಕ್ಕೆ ಬಸ್ಸು ಕೊಟ್ಟದ್ನ ಅವುನು."

"ಬಸ್ಸು ಕೊಟ್ಟ ಅಂತ ಮಂತ್ರಿನೆ ಮಾಡಿಬುಡದೆ?"

"ಬಸ್ಸು ಕೊಟ್ಟ ಅಂತ ಮಾಡಿಲ್ಲ ಕಣಕ್ಕ, ಅವುನು ಕುಮಾರಸ್ವಾಮಿಯ ದುಬಾಯ್ಗೆ ಕರಕಂಡೋಗಿ ಏನೇನೋ ತೋರ್‍ಸಿ ಯಾರ್‍ಯಾರ್‍ನೋ ಪರಿಚಯ ಮಾಡಿದ್ನು ಅಂ... ಕುಮಾರಸ್ವಾಮಿ ಇರಕ್ಕೆ ಮನೆನೂ ಕೊಟ್ಟದ್ನಂತೆ ಅಂಥೋನ್ನ ಮಂತ್ರಿ ಮಾಡದೆ ಮಯಿಮಾ ಪಟೇಲನ್ನ ಮಾಡಕಾಯ್ತದಾ?"

"ಅಂತು ದ್ಯಾವೇಗೌಡನ ಜಲ್ಮ ಸಾರ್ಥಕಾಯ್ತು ಬುಡು" ಎಂದ ಸೀರ.

"ಇನ್ನುಳದೋರ ಜನ್ಮ ವೇಸ್ಟಾಯ್ತೆ ಚಿಗಪ್ಪ?"

"ಅಂಗಲ್ಲ ಕಂಡ್ಯ, ಅವುನು ಪಾರಟಿ ಅಧ್ಯಕ್ಷಾಗಿ ಮಗನ್ನ ಮುಖ್ಯಮಂತ್ರಿ ಮಾಡಿ, ಇನ್ನವಬ್ಬ ಮಗನ್ನ ಮಂತ್ರಿ ಮಾಡಿದ್ನಲ್ಲಾ, ಅದ್ಕೆ ಅವುನುಟ್ಟಿದುಕು ಸಾರ್ಥಕಾಯ್ತು ಅಂದಿದ್ದು" ಎಂದ ಸೀರ.

"ಹಿಂಗ್ಯಲ್ಲ ಮಾಡಿದ್ರೆ ಜನ ಗೌರವ ಕೊಡ... ಅಂತ ತಿಳಕಂಡವುನೆ ಚಿಗಪ್ಪ, ದ್ಯಾವೇಗೌಡ ಎ... ಪುಕ್ಲ ಅಂದ್ರೆ ನಾನೋದ ಮ್ಯಾಲೆ ನನ್ನ ಮಕ್ಳ ಯಲ್ಲಾರು ಓಡಿಸ್ಯಾಡಿ ಕಂದು ಚಚ್ಚತರೇನೊ ಅನ್ನಕಂಡು ಈಗ್ಲೆ ಅವುರನ್ಯಲ್ಲ ಪವರ್‌ಪುಲ್ ಮಾಡಕ್ಕೋಯ... ಅವುನೆ. ಇವುನ ಮಕ್ಕಳಿಗೆ ಅಂತ ಯೋಗ್ತಿಯಿ... ನಾವೇ ಗೆಲ್ಲಿಸಿ ಮಂತ್ರಿ ಮಾಡತಿದ್ದೊ?"

"ಮಾಡ್ತಿರಿ ನೀವು. ನಿಮ್ಮಂಥೋರು ಇಲ್ಲಿಗಂ... ಉದಿರಿಸಿದ್ದ ಅವುನು ನೋಡಿಲವೆ?" ಎಂದ ಕಾಳಮಾವ.

"ಒಂಥರದಲ್ಲಿ ನೀನೇಳದು ನಿಜವೆ ದ್ವಡಪ್ಪ. ರೇವಣ್ಣ ಆ ಕುಮಾರಣ್ಣ ಅವುರು ಮಾತು ನಡವಳಿ... ನೋಡಿದ್ರೆ ಅವುರ ಜನಗಳಂತೂ ಮುಂದಕೆ ತ... ಕ್ಯಾಯ್ತಿರಲಿಲ್ಲ, ಅದ್ಕೆ ಅವುರಪ್ಪನೆ ತಂದು ಕೂರಿಸ್ಯವ್ನೆ ಅನ್ನಕಬೇಕೀಗ."

"ಇನ್ನೊಂದೆರಡು ಮಕ್ಕಳವಂತಲ್ಲಾ ಅವುಕು ಮಂತ್ರಿ ಮಾಡಕೇನಾಗಿತ್ತು?" ಎಂದ ಸೀರ.

"ಅವುರು ಮಂತ್ರಿಗಿರಿಗಿಂತ್ಲೂ ಮ್ಯಾಲಿನ ಕ್ಯಲ್ಸ ಮಾಡ್ತಯಿದ್ದರಂತೆ ಚಿಗಪ್ಪ. ಜನಗಳು ಇನ್ನು ಸುಮ್ಮನಿದ್ರೆ ದ್ಯಾವೇಗೌಡ್ರು ಸ್ವಸೆರ್‍ನ ಎಮ್ಮೆಲ್ಸಿ ಮಾಡಿ ಮಂತ್ರಿ ಮಾಡೇಬುಡ್ತರೆ."

"ಅದೇನಾರ ಆಗ್ಲಿ ಮಯಿಮಾ ಪಟೇಲನ್ನ ಮಂತ್ರಿ ಮಾಡಬೇಕಾಗಿತ್ತು ಕಂಡ್ಯ" ಎಂದಳು ಜುಮ್ಮಿ.

"ಯಂಗೆ ಮಾಡ್ತರಕ್ಕ? ಇವತ್ತೂ ಮತ್ತೆ ಮುಂದೂ ತನ್ನ ಮಕ್ಕಳಿಗೆ ಯಾರ್‍ಯಾರು ಸವಾಲಾಗಬಲ್ಲರೊ ಅಂಥೋರನ್ಯಲ್ಲ ವತ್ತಿಸಿ ವತ್ತಿಸಿ, ದಡ ಸೇರುಸ... ಕುಂತಿರುವಾಗ, ನೀನೋಗಿ ಆ ಮಯಿಮನ್ನ ಮಂತ್ರಿ ಮಾಡು ಅಂತಿಯಲ್ಲಾ, ಇದಕೇನೇಳನಾ. ಎನಿ ಹ... ವಳ್ಳೆ ಸಂಪುಟ ಇದು. ಆ ಗುಂಡೂರಾಯನ ಸಂಪುಟ ಆ ನಂತ್ರ ಬಂಗಾರಪ್ಪನ ಸಂಪುಟ ಬುಟ್ರೆ ಇದೆ ತಮಾಸೆಯಾಗಿರೋದು.

"!?"

-ಬಿ. ಚಂದ್ರೇಗೌಡ

Zero Hour ಮುನ್ನಿ

1. ರೋಣದಲ್ಲಿ ನಡೆದ ಈ ಪ್ರಗತಿಪರ ಬಿತ್ತನೆಗೊಂದು ಟೈಟಲ್ ಕೊಡಿ
   - a) ಸೌಹಾರ್ದ ಬಿತ್ತನೆ
   - b) ಸಾಮೂಹಿಕ ಬಿತ್ತನೆ
   - c) ಎರೆಹೊಲ: ಕೆಂಪು ಬಿತ್ತನೆ
   - d) AISF ಹುಡುಗರ 'ಏಕ್ ಹೀ ರಾಸ್ತಾ'!
   - e) ಮೇಲಿನೆಲ್ಲವೂ ಸರಿ ಅನ್ನಬಹುದಲ್ಲಾ?



2. "ಈ ಜಗತ್ತೇ ನನ್ನ ಕ್ಷೇತ್ರ... ಜಗತ್ತಿಗೆ ಕವಿದಿರುವ ಮಂಪರು ತೆಗೆದು ಹಾಕುವೆ" ಎಂಬ ಮಹಿಮಾ ಪಟೇಲ್ ಮಾತಿನ ಅರ್ಥವೇನು?
   - a) ಜಗತ್ತು= ದೇವೇಗೌಡ
   - b) ಜಗತ್ತು= ಚನ್ನಗಿರಿ
   - c) ಜಗತ್ತು= ಕಲ್ಕಿ ಗುಡಿ
   - d) ಅದೆಲ್ಲಾ ಹಾಳಾಗ್ಲಿ, ಮೊದಲು ಮಹಿಮಾಗೆ ಮಂಪರು ಪರೀಕ್ಷೆ ಮಾಡಿಸಿ.
3. ಗುಂಪಿಗೆ ಸೇರದ ಪದ ತೆಗೆದು ಕಾರಣ ಕೊಡಿ.
   - a) ವಿಶ್ವೇಶ್ವರ ಭಟ್
   - b) ಸುಧೀಂದ್ರ ಕಂಚಿತೋಟ
   - c) ಪ್ರತಾಪ ಸಿಂಹ
   - d) ವೆಂಕಟನಾರಾಯಣ್
4. ಲೋಕಾಯುಕ್ತ ವೆಂಕಟಾಚಲ ಕುರಿತ ಈ ಹೇಳಿಕೆಗಳಲ್ಲಿ ಯಾವುದು ಸರಿ?
   - a) ಪಾರದರ್ಶಕತೆಗೆ ಆದ್ಯತೆ ಕೊಟ್ಟರು
   - b) ಪ್ರಚಾರ ಪ್ರಿಯರಲ್ಲ
   - c) 'ಆಶೆಯೇ ದುಃಖಕ್ಕೆ ಮೂಲ' ಎನ್ನುತ್ತಾರೆ
   - d) ಇದೆಲ್ಲ ಸಾಕು ಬಿಡಿ; ಈ ಸಲದ ಕವರ್‌ಸ್ಟೋರಿ ಓದಿ ಆಯ್ತು!
5. 'ಬಗಲ್ ಮೆ ದುಷ್ಮನ್' ಎಂದರೇನು?
   - a) ಸಂಕೇಶ್ವರ್‌ಗೆ ಗತಿ ಕಾಣಿಸಿದ ವಿ.ಕ.ದ ಚಿಲ್ಟಿ ಪತ್ರಕರ್ತರು
   - b) ಮಹಿಮಾ ಪಟೇಲ್ ಪ್ರಕಾರ ದೇವೇಗೌಡರು
   - c) ದಳ(ಎಸ್) ನಲ್ಲಿರುವ ಲಿಂಗಾಯತರ ಪಾಲಿಗೆ ದೇವೇಗೌಡರೇ ಬಗಲ್ ಮೆ ದುಷ್ಮನ್
   - d) ಜೊತೆಯಲ್ಲಿದ್ದಂತೆ ನಟಿಸುತ್ತಲೇ ಗೊತ್ತೇ ಆಗದಂತೆ ಮೋಸ ಮಾಡುವಾತ
   - e) ಸದ್ಯದ ಪರಿಸ್ಥಿತಿಯಲ್ಲಿ ಮೇಲಿನೆಲ್ಲವೂ ಸರಿ



ಉತ್ತರಗಳು: 1) e, 2) d, 3) d ([illegible]), 4) d, 5) e.

ನಾಳೆಯೂ ನಾನು ಬದುಕುತ್ತೇನೆನ್ನುವವರು ದಡ್ಡರು; ನೆನ್ನೆ ಬದುಕಿದ್ದವರು ಬುದ್ಧಿವಂತರು -ಮಾರ್ಟಿಯಲ್

ತೇಜಸ್ವಿಯವರಿಗೆ.....


ಗೆ,

ಲಂಕೇಶ್.

ಅಜ್ಜಂಪುರದಲ್ಲಿ ನೀವು ನಮಗೂ ನಿಮಗೂ ವ್ಯತ್ಯಾಸ ...ಮತಿಸುತ್ತಾ ನಾನು ನೇರ ರಾಜಕೀಯಕ್ಕೆ ಹೆದರಿದ್ದೇನೆಂದು ...ಸಿದಿರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ನಿಮ್ಮ ...ತಿಗೆ ನನಗೆ ಕೊಂಚವೂ ಬೇಸರವಿಲ್ಲ, ನಾನು ...ಪರಿಸುವ ಮನೋಭಾವದವನೇ ಅಲ್ಲವೆಂದು ನಿಮಗೆ ...ತ್ತು, ಆದರೆ ನಮ್ಮ ಕಷ್ಟ ನಿಮಗೆ ಅರ್ಥ ಮಾಡಿಸು ...ದು ಹೇಗೆಂದು ಗೊತ್ತಾಗುತ್ತಿಲ್ಲ, ರಾಜಕಾರಣಕ್ಕೆ ಒಂದು ...ರ್ಥಿಕ ಆಯಾಮವೂ ಇದೆ ಎನ್ನುವುದನ್ನು ಹೇಗೆ ...ರೆಯುತ್ತೀರ? ನಮ್ಮ ಸ್ವಂತ ದುಡಿಮೆಯಿಂದ ನಾವು ...ಲ ಹದಿನೈದು ದಿನ ಮಾತ್ರ ಪ್ರಸ್ತುತ ರಾಜಕೀಯ ...ಡಬಲ್ಲೆವು. ಅಲ್ಲವೆ? ನೀವು ಬಹುಶಃ ಆರು ತಿಂಗಳು ...ವಾ ಒಂದು ವರ್ಷ ಮಾಡಬಹುದು. ಆಮೇಲೆ ...ರೆಯವರ ಬಳಿ ಹಣ ಪಡೆಯಲೇ ಬೇಕಲ್ಲವೆ? ...ಮ್ಮ ಜಾಯಮಾನಕ್ಕೆ ಇದು ಸಾಧ್ಯವೆ? ಮತ್ತು ಈ ...ಜಕಾರಣ ಈಗಲೇ ಅನೇಕರು ಮಾಡುತ್ತಿರುವುದರಿಂದ ...ವು ಹೊಸದಾಗಿ ಯಾಕೆ ಹೋಗಬೇಕು. ನಾವು ... ರಾಜಕಾರಣಕ್ಕೆ ಇಳಿದೇ ಸರಿಯಾಗಿ ಸುಸ್ತಾಗಿ ... ಹತ್ತಿರುವವರಲ್ಲವೆ? ರಾಜಕಾರಣದ ಈ ಆರ್ಥಿಕ ...ಸ್ಯೆಗಳಿಗೆ ಸಮರ್ಪಕ ಉತ್ತರವಿಲ್ಲದೆ ರಾಜಕಾರಣದ ...ಕ ಸಾಮಾಜಿಕ ಆಯಾಮಗಳ ಬಗ್ಗೆ ಚರ್ಚಿಸುವುದು ...ಯೋಜನವಿಲ್ಲ, ಇದನ್ನು ಯಾವುದೇ ಕೋಪದಿಂದಲೂ ...ು ಬರೆಯುತ್ತಿಲ್ಲ. ಈ ಅಂಶಗಳು ನಿಮ್ಮ ಅರಿವಿಗೆ ...ಬೇಂದು ಮಾತ್ರ ಬರೆಯುತ್ತಿದ್ದೇನೆ. ಎಲ್ಲರೂ ದೊಡ್ಡ ...ಮನುಷ್ಯನೆಂದು ಕರೆದರೆಂದು ಹಾಗೇ ನಟಿಸಲು ಹೋಗಿ ...ಂದರೆಗೆ ಒಳಗಾದರೆ ನಮ್ಮ ರಾಜಕಾರಣ ಒಂದು ...ಸನವಾಗುತ್ತದೆ.


-ಕೆ.ಪಿ. ಪೂರ್ಣಚಂದ್ರ ತೇಜಸ್ವಿ

...ತೇಜಸ್ವಿಯವರು ಮತ್ತು ನನ್ನ ನಡುವೆ ಈ ಬಗೆಯ ...ರ್ಕ ಇದ್ದೇ ಇರುತ್ತದೆ. ನಾನು ರಾಜಕಾರಣಿಯಾಗಲು ...ರದಿಂದ ಇರುವೆನೆಂದು ಕೆಲವರು ತಪ್ಪಾಗಿ ತಿಳಿಯು... ತೇಜಸ್ವಿ ಹಾಗೆ ತಿಳಿಯುವುದಿಲ್ಲ ಎಂದು ನನಗೆ ಗೊತ್ತು, ತೇಜಸ್ವಿಯವರ ಹಿಂಜರಿಕೆ ನನಗೆ ಚೆನ್ನಾಗಿ ಅರ್ಥವಾಗುತ್ತದೆ. ರಾಜಕಾರಣ ಹೊಲಸೆದ್ದು ಹೋಗಿದೆ. ರಾಜಕಾರಣಿ ಎಂದರೇ ಇನ್ನೊಬ್ಬರ ಜೇಬಿಗೆ ಕೈಹಾಕುತ್ತಲೇ ಜೀವಿಸುವವನು ಎಂದು ಜನ ತಿಳಿಯತೊಡಗಿದ್ದಾರೆ. ಊಟ, ವಸತಿ ಇರುವವರು ತಮ್ಮ ಪಾಲಿಗೆ ಬಂದಿರುವ ಸರ್ಕಾರ ಅದೆಷ್ಟೇ ಕೆಟ್ಟದಾಗಿದ್ದರೂ ಸಹಿಸಿಕೊಂಡು ಸುಮ್ಮನಿರುತ್ತಾರೆ. ರಾಜಕೀಯಕ್ಕೆ ಹೋದರೆ ಇರುವ ಊಟ, ವಸತಿಗೂ ತೊಂದರೆಯಾದೀತೆಂದು ಅವರಿಗೆ



ಆತಂಕ. ಊಟಕ್ಕೆ ಕೂಡ ಇಲ್ಲದವರು, ಉದ್ಯೋಗದ ಆಶೆಯೇ ಇಲ್ಲದವರು ರಾಜಕೀಯದ ತಂಟೆಗೆ ಹೋಗು ವುದಿಲ್ಲ, ಅಥವಾ ರಾಜಕೀಯವನ್ನು ಪ್ರವೇಶಿಸಿ ಸಲ್ಲದ ಉದ್ಯೋಗದಲ್ಲಿ ತೊಡಗುತ್ತಾರೆ.

ರಾಜಕೀಯ ಪ್ರವೇಶಿಸುವುದಕ್ಕೆ ತೇಜಸ್ವಿಯವರ ಆಕ್ಷೇಪಣೆ ವರಮಾನ, ಖರ್ಚಿಗೆ ಸಂಬಂಧಿಸಿದ ವಿಷಯ ಗಳಿಗಿಂತ ಗಂಭೀರವಾದದ್ದೆಂದು ನಾನು ತಿಳಿದಿದ್ದೇನೆ. ನಮ್ಮ ಸಾರ್ವಜನಿಕ ಸಮಸ್ಯೆಗಳ ಭೀಕರತೆಯೇ ನಿಯತ್ತಿನ ವ್ಯಕ್ತಿಗಳನ್ನು ರಾಜಕೀಯದಿಂದ ದೂರ ಇಡುತ್ತದೆ. ಜನ ಸಾಮಾನ್ಯರ ಸಿನಿಕತನ, ಆಶಿಸ್ತು, ಮೌಢ್ಯದಿಂದ ಹಿಡಿದು ಆಧುನಿಕ ಗ್ರಾಹಕ (ಕನ್‌ಸ್ಯೂಮರಿಸ್) ಪ್ರಪಂಚದ ಸೂಕ್ಷ್ಮಾತಿಸೂಕ್ಷ್ಮ ಭ್ರಷ್ಟತೆಯ ವರೆಗೆ ಈ ಕ್ಲಿಷ್ಟತೆ ಹಬ್ಬಿದೆ. ರಾಜಕಾರಣಿ, ಅಧಿಕಾರಿಗಳ ಸ್ವಾರ್ಥ ಮತ್ತು ಲಂಚಕೋರತನ ತಮ್ಮವೇ ಆದ ಸಬೂಬುಗಳನ್ನು ಸೃಷ್ಟಿಸಿ ಕೊಂಡಿವೆ. ಈಗ ಜೀವಿಸುತ್ತಿರುವ ಪ್ರತಿಯೊಬ್ಬನೂ ಇವನ್ನೆಲ್ಲ ಕಣ್ಣಾರೆ ಕಂಡು ತಳಮಳಿಸುವಂತಾಗಿದೆ.



ಮೇ 8, 1988

ರಾಜಕೀಯವೆನ್ನುವುದು ನಮ್ಮ ನಿಮ್ಮ ಮನೆಯಿಂದ ಹೊರಗೆ ಬೀದಿಗಳಲ್ಲಿ ಯಾರೋ ಕೆಲವರು ಪುಂಡರು ಸೇರಿಕೊಂಡು ಸ್ವಂತದ ಹಿತಕ್ಕಾಗಿ ಮಾಡುತ್ತಿರುವ ಕ್ರಿಯೆ ಎಂದು ಅನೇಕರು ಭಾವಿಸಿದ್ದಾರೆ. ಅದು ಹಾಗಲ್ಲ, ದೂರದಲ್ಲಿರುವ ರಾಜಕಾರಣ ಕಾಫಿ ತೋಟವನ್ನು ಪ್ರವೇಶಿಸಿ ಅಲ್ಲಿಯ ವಿದ್ಯುತ್ ಸರಬರಾಜನ್ನು ಅತಂತ್ರ ಗೊಳಿಸಿದಾಗ, ಮನೆಯಲ್ಲಿ ಕುದಿಯುತ್ತಿರುವ ಎಣ್ಣೆ ಕಲಬೆರಕೆಯದಾಗಿದ್ದು ಮರುದಿನದಿಂದಲೇ ಕಾಮಾಲೆ, ಹೊಟ್ಟೆನೋವು ಶುರುವಾದಾಗ, ಹೊಟ್ಟೆ ನೋವಿಗೆಂದು ತೆಗೆದುಕೊಂಡ ಔಷಧಿ ಲಂಚಕೋರರಿಂದಾಗಿ ಕೋಟಾ ಔಷಧಿಯಾಗಿದ್ದು ಸಾವುನೋವುಗಳು ಸಂಭವಿಸಿದಾಗ, ಎಲ್ಲರ ಗದ್ದೆಗೆ ಹರಿಯಬೇಕಾದ ನೀರು ಲಂಚಕೊಟ್ಟವರ ಜಮೀನಿಗೆ ಮಾತ್ರ ಹರಿದಾಗ, ಪ್ರತಿಭಾವಂತನಾದ ಮಗ ಪರೀಕ್ಷಕರ ನಿರ್ಲಕ್ಷ್ಯದಿಂದಾಗಿ ಫೇಲಾಗಿ ದಿಗ್ಭ್ರಮೆಗೊಂಡಾಗ ಈ ರಾಜಕಾರಣ ನಮ್ಮ ಅತ್ಯಂತ ಖಾಸಗಿ ನರನಾಡಿಯನ್ನೂ ಪ್ರವೇಶಿಸಿರುತ್ತದೆ. ರಾಜಕಾರಣದ ಅವಾಂತರ ಇನ್ನೂ ಹತ್ತಿರ ಬರಬಲ್ಲದು. ಜಾತಿಯ ಕಾರಣಕ್ಕೆ ಅವಮಾನ ವಾಗುವ ಪರಿಸ್ಥಿತಿ, ನಂಬಿಕೆಯ ಕಾರಣಕ್ಕಾಗಿ ಪೊಲೀಸರಿಂದ ಬಂಧಿತನಾಗುವ ಅಪಾಯ, ದಾರಿಯಲ್ಲಿ ಪರಿಚಿತನೊಬ್ಬನೊಡನೆ ಮಾತಾಡಿದ್ದರಿಂದಲೇ ನಕ್ಸಲೈಟ ನೊಬ್ಬನೊಂದಿಗೋ, ಭಯೋತ್ಪಾದಕನೊಬ್ಬನೊಂದಿಗೋ ವ್ಯವಹರಿಸುತ್ತಿರುವ ಆಪಾದನೆ- ಇವೆಲ್ಲ ಆಗುವುದು ಅಪರೂಪವೇನಲ್ಲ.

"ನೀವು ರಾಜಕೀಯದಿಂದ ಯಾವಾಗ ನಿವೃತ್ತರಾಗು ತ್ತೀರಿ?" ಎಂದು ಗಾಂಧೀಜಿಯವರನ್ನು ಒಮ್ಮೆ ಕೇಳಿ ದರು-ಕೇಳುವವ ರಾಜಕೀಯ ದೆನ್ನುವುದು ಒಂದು ಪೌರ, ಉದ್ಯಮ ಎಂದು ತಿಳಿದಿದ್ದ, ಗಾಂಧೀಜಿ ನಕ್ಕು ಹೇಳಿದರು, "ನಾನು ಸತ್ತಾಗಲೇ ರಾಜಕೀಯದಿಂದ ನಿವೃತ್ತಿ" ಎಂದು. ಹೇಗೆಂದರೆ, ಬದುಕನ್ನು ಕಂಡು ಸಂಘಟಿಸಿ ಸರ್ಕಾರಗಳನ್ನು ರಚಿಸ ಲಾಗದಿದ್ದರೆ ಕ್ರಿಯೆಯಿಂದ ನಿಯಂತ್ರಿಸುವುದು ರಾಜಕೀಯ ಎಂದು ಗಾಂಧೀಜಿ ತಿಳಿದಿದ್ದರು. ಹೀಗೆ ನೋಡಿದರೆ ನಾವು ಈಗ ಬದುಕು ವುದಕ್ಕಾಗಿ ದುಡಿಯುತ್ತಿರುವು ದಕ್ಕೂ, ಕಿರಿಕಿರಿಯಿಲ್ಲದೆ ಬದು ಕುವುದಕ್ಕಾಗಿ ಸಂಘಟಿಸುವುದಕ್ಕೂ ವ್ಯತ್ಯಾಸವಿಲ್ಲ, ಅದು ಅನಿವಾರ್ಯ ಕೂಡ. ಈ ಘಟ್ಟದ ಸಂಘಟನೆಯಲ್ಲಿ ದಿವಾಳಿ ಏಳುವಂಥ ಖರ್ಚನ್ನಾಗಲಿ, ಎಲ್ಲರೆದರು ಕೈಚಾಚಿ ನಿಲ್ಲುವುದನ್ನಾಗಲಿ ರಾಜಕೀಯ ನಿರೀಕ್ಷಿಸುವುದಿಲ್ಲ, ನಾವು ಕೇವಲ ನಾವಾಗಿ ದಿನನಿತ್ಯದ ಕೆಲಸ, ರಂಜನೆ, ಕಾಳಜಿಗಳೊಂದಿಗೇ ರಾಜ ಕೀಯ ಮಾಡಬೇಕಾಗಿದೆ. ಇಂಥ ನಿಲುವಿನಿಂದ ಮಾತ್ರ ಸಂಘಟನೆಗೆ ಶಕ್ತಿ, ಚುನಾವಣೆ ಮುಂತಾದವುಗಳಿಗೆ ಚೈತನ್ಯ, ಹೊಸತನ ಬರುತ್ತದೆ.

ಅಧಿಕಾರಿ, ಮಂತ್ರಿಯ ಸಂಬಳ ಕೂಡ ಜನ ಕೊಟ್ಟದ್ದು; ಆ ಹಣವನ್ನು ಸರ್ಕಾರ ಜನರಿಂದ ಒತ್ತಾಯ ಪೂರ್ವಕವಾಗಿ ಎತ್ತಿರುತ್ತದೆ. ಅಧಿಕಾರಿ, ಮಂತ್ರಿಯ ಸ್ಥಾನಕ್ಕೆ ಜನಸೇವೆಯ ಮುಖದಿಂದ ಪ್ರತ್ಯೇಕವಾದ ಮುಖವೊಂದು ಕಾಣಿಸಿಕೊಂಡು ಕ್ರೂರಹಲ್ಲುಗಳ ಜನರನ್ನು ಅಣಕಿಸತೊಡಗುತ್ತದೆ. ಈ ಬಗೆಯ ಜನರ ಉದ್ಯೋಗ ಎಲ್ಲ ಬಗೆಯ ಉದ್ಯೋಗಸ್ಥರನ್ನು ಸದೆಬಡಿಯ ತೊಡಗುತ್ತದೆ. ಎಲ್ಲರ ಆದಾಯ, ವಸತಿಯ ಅರ್ಥ ಕಳೆದುಕೊಳ್ಳತೊಡಗುತ್ತದೆ. ಆಗ, ರಾಜಕೀಯದ ಅನ್ಯಾಯ, ಅವಮಾನ, ನೀಚತನ, ಖಾಸಗಿ, ಸಾರ್ವಜನಿಕ ಜೀವನವನ್ನೆಲ್ಲ ಕಲುಷಿತಗೊಳಿಸತೊಡಗಿದಾಗ ಎಷ್ಟೇ ಹಿಂಜರಿಕೆ ಇದ್ದರೂ ರಾಜಕೀಯದಲ್ಲಿ ಆಸಕ್ತಿ ವಹಿಸಲೇ ಬೇಕಾಗುತ್ತದೆ. ■

...ಗಂಡಸ್ರು ಮೊಬೈಲನ್ನ ಜೇಬಿಗೆ ಇಟ್ರೆ, ಹೆಂಗಸ್ರು ಎಲ್ಲಿಡ ಬೇಕು?



...ತಾ ಮಧುಸೂದನ್. ದಾವಣಗೆರೆ
...ಪೇಯಿ ಗೋಮುಖ ...ವ್ರನಾದರೆ, ದೇವೇಗೌಡ?
* ...ಳುಮುಂಜಿ ನರಿ.

...ಚಂದ್ರ ಕೊಪ್ಪಲು. ತೀರ್ಥಹಳ್ಳಿ
...ರಾಯಿ ಶುದ್ಧವಿರುವ ಸರ್ಕಾರಿ ...ರಿಗಳಿಗೆ ರಾಜ್ಯ ಸರ್ಕಾರ ಪ್ರಶಸ್ತಿ ... ಹೇಗಿರುತ್ತೆ?
* ...ಕೋ-ಜಾ ಪ್ರಶಸ್ತಿ ಎಂದು ಧಾರಾಳವಾಗಿ ಕರೆಯ...ದು.

...ಮಂಜುನಾಥ. ಗೆದರೆ
...ೂ, 'ದಂ'ಪತಿಗೂ ಇರುವ ವ್ಯತ್ಯಾಸ?
* ...ರ' ಅಂದರೆ 'ಪತ್ನಿ' ಅಂತ ನೋಡಿದಾಗ ವ್ಯತ್ಯಾಸ ...ಗುತ್ತೆ.

...ನ್. ಶ್ರೀವತ್ಸ. ಬೆಂಗಳೂರು
...ತ್ ಕೋ-ಜಾ ಸರ್ಕಾರ ಬಿದ್ದರೆ ಹೆಲ್ಮೆಟ್ ಕಾನೂನು ...ಗುತ್ತೆ?
* ...ಭಾ ಅಂತೂ 'ಅದನ್ನ' ಪಾಲಿಸಲೇಬೇಕು ಅಂತಾಳಂತೆ.

...ನರಾಜ್ ಬೆಸ್ತರ್. ಹರಪನಹಳ್ಳಿ
... ಲಂಕೇಶ್ ಕಾವ್ಯವಾದರೆ, ಗೌರಿ...?
* ...ಡ್ಯ' ಅಂದ್ರೆ ಅವರು ಮುಜುಗರ ಪಟ್ಕೋತಾರೆ

ಇಂದಿರಾ ಶ್ರೀಧರ್. ದಾವಣಗೆರೆ
ಕೋ-ಜಾ ಸರ್ಕಾರ ಭೂಕಬಳಿಕಾಭಿವೃದ್ಧಿ ಪ್ರಾಧಿಕಾರ ರಚಿಸಿದರೆ ಅದರ ಅಧ್ಯಕ್ಷನಾಗಲು ಯೋಗ್ಯ ವ್ಯಕ್ತಿ ಯಾರು?
* ಅದಕ್ಕಂತೂ ಆಶೋಕ್, ಕಟ್ಟಾ ಇತ್ಯಾದಿಗಳು ಜಗಳ ಬೀಳುವುದಂತೂ ಗ್ಯಾರಂಟಿ.

ಕೆ.ಪ್ರಾಣೇಶ್ ರಾವ್. ಹಗರಿಬೊಮ್ಮನಹಳ್ಳಿ
ಮಾತಿಗೆ ಮುನ್ನ ರಾಜೀನಾಮೆ ಕೊಡುತ್ತೇನೆ ಎನ್ನುವವರ ಉದ್ದೇಶ ಏನು?
* ಹುತಾತ್ಮನಾಗುವ ಭ್ರಮೆ.

ಎಂ.ಎಸ್. ಪಾರ್ವತಿ. ಕುಮಟಾ
ಸಂಸಾರದಲ್ಲಿ ಸೈ ಎಂದೆನಿಸಿಕೊಳ್ಳಲು ಹೆಂಡತಿ ಏನು ಮಾಡಬೇಕು?
* ಅರ್ಧನಾರಿ, ಅರ್ಧ ಪುರುಷನಂತಿರಬೇಕು ಪಾರ್ವತಿ.

ಕೆ.ಶ್ರೀನಿವಾಸ್. ಮಂಡ್ಯ
ನಮ್ಮ ರಾಜಕಾರಣಿಗಳು ನೀನು ತುಚ್ಛ, ನಾನು ಉಚ್ಛ ಎಂದು ಹುಚ್ಚರಂತೆ ಕಚ್ಚಾಡುವುದೇಕೆ?
* ಉಚ್ಛ ಜನ ಇನ್ನೇನು ಮಾಡ್ತಾರೆ.

ಹಾಲಪ್ಪ. ಶಿವಮೊಗ್ಗ
ಕುಮಾರಸ್ವಾಮಿ ಸಂಪುಟಕ್ಕೆ ಇತ್ತೀಚೆಗೆ ಸೇರ್ಪಡೆಗೊಂಡ ನಾಜೂಕಯ್ಯ ಯಾರು?
* ದೇವೇಗೌಡರು ಸಂಪುಟ ಸೇರಿಕೊಂಡಿಲ್ಲ ಕಣ್ರೀ.

ಎಂ.ಎಸ್. ವಿನಯ್. ಕುಮಟಾ
ಲಂಕೇಶ್‌ರವರ ಅಚ್ಚುಮೆಚ್ಚಿನ ವ್ಯಕ್ತಿ ಯಾರು?
* 'ನೀಲು' ಎಂಬ alter ego!

ಪೂರ್ಣಿಮಾ. ಹಗರಿಬೊಮ್ಮನಹಳ್ಳಿ
'ಸೀತಾರಾಮ' ಇದು ಯಾವ ಲಿಂಗ?
* ಸಮಾಜವಾದಿ ಅಂಗ, ಚಡ್ಡಿ ಸಂಗ.

ಎಂ.ಜಿ.ಸುರೇಶ್. ಭದ್ರಾವತಿ
ಗಂಡಸ್ರು ಮೊಬೈಲನ್ನು ಜೇಬಿಗೆ ಇಟ್ರೆ, ಹೆಂಗಸ್ರು ಎಲ್ಲಿಡ ಬೇಕು?
* ಇಟ್ಕೊಂಡವರಿಗೆ ಕಾಲ್ ಮಾಡಿ ನೋಡಿ.

ರವಿಕಿರಣ್. ಮೈಸೂರು
ಸಿದ್ಧರಾಮಯ್ಯರ ಮೇಲೇಕೆ ಕಾಂಗ್ರೆಸ್‌ಗೆ ಲವ್ ಉಂಟಾಗಿದೆ?
* ಲವ್ವಾ? ನೋವ್ವಾ?

ಇಮ್ಮಾನುವೇಲ. ಮಸರಕಲ
ತುಂಟಾಟಕ್ಕೆ ಪಿಚ್ ಯಾವ ತರಹದ್ದಿರಬೇಕು?
* ಬ್ಯಾಟು ಬಾಲಿಗೆ ತೊಂದರೆಯಾಗದಿದ್ದರಾಯ್ತು.

ನರೇಂದ್ರ ಘೋರ್ಪಡೆ. ಭದ್ರಾವತಿ
ಕಾವಿಗಳಲ್ಲಿ ಕನಕ ಕೀರಟಧಾರಣೆ ಕುತೂಹಲವೇಕೆ?
* ಪೇಜಾವರರಿಗೆ ರಾಮ ಮಂದಿರದ ಬಗ್ಗೆ ಅಪಾರ ವ್ಯಾಮೋಹವಿದೆ ಗೊತ್ತಾ!


...ನ್. ಪ್ರಸನ್ನಕುಮಾರ್. ತುಮಕೂರು
...ಗ ಅವಳ ಇ-ಮೇಲ್‌ನಲ್ಲಿ be vegetarian ... ಸಂದೇಶವಿರುತ್ತಲ್ಲಾ?
...ದ್ದರೂ ಅವಳ್ನ ತಿಂದು ಹಾಕುವ ಯೋಚನೆ ...ಕನೆಸ್ಸು.

ಬಹುಮಾನಿತ ಪ್ರಶ್ನೆ

ಧೀ ತುಂಟಿ!

ರೀಟಾ ಎಂಬ ಪತ್ರಕರ್ತೆ ಒಮ್ಮೆ ಪ್ರಖ್ಯಾತ ಕವಿ ನೆರೂಡನನ್ನು ಸಂದರ್ಶಿಸಿದಳು. ನೆರೂಡ ಮಹಾ ಸ್ತ್ರೀ ವ್ಯಾಮೋಹಿ, ಜೀವನಪ್ರೇಮಿ; ತನ್ನ ಬದುಕಿನ ದಿನಗಳನ್ನು ಕೈಯಲ್ಲಿಟ್ಟುಕೊಂಡು ತೀವ್ರವಾಗಿ ಬದುಕುತ್ತಿದ್ದ ಅವನನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಲು ರೀಟಾ ಕೇಳಿದಳು: "ಎಲ್ಲೆಲ್ಲೂ ಬೆಂಕಿ ಹತ್ತಿಕೊಂಡು ಉರಿಯುತ್ತಿದೆ ಅಂತ ಇಟ್ಟುಕೊಳ್ಳಿ. ನಿಮ್ಮ ಪುಸ್ತಕಗಳೆಲ್ಲ ಸುಟ್ಟು ಬೂದಿಯಾಗುವುದರಲ್ಲಿವೆ. ನೀವು ಆಗ ನಿಮ್ಮ ಯಾವ ಪುಸ್ತಕವನ್ನು ರಕ್ಷಿಸಿಕೊಳ್ಳುತ್ತೀರಿ?"

ನೆರೂಡ: ಯಾವುದನ್ನೂ ರಕ್ಷಿಸಲಿಕ್ಕಿಲ್ಲ, ನನ್ನ ಪುಸ್ತಕಗಳಿಂದ ನನಗೇನು ಉಪಯೋಗ? ಅದಕ್ಕೆ ಬದಲು ಒಬ್ಬಳು ಹುಡುಗಿಯನ್ನು ರಕ್ಷಿಸಬಯಸುವೆ... ನನ್ನ ಯಾವುದೇ ಪುಸ್ತಕಕ್ಕಿಂತ ಹೆಚ್ಚು ಸಂತೋಷ ಆಕೆಯಿಂದ ದೊರೆಯಬಲ್ಲದು...."



ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಈ ವಾರದ ಪ್ರಶ್ನೆ:

ಕುಮಾರಸ್ವಾಮಿ ಮಂತ್ರಿಮಂಡಲ ಸೇರಲು ಬೇಕಾದ ಅರ್ಹತೆಗಳೇನು?

ಕಳೆದ ವಾರದ ನಮ್ಮ ಪ್ರಶ್ನೆ: ಖೇಣಿ ಟೌನ್‌ಶಿಪ್‌ಗೂ, ಕುಮಾರಸ್ವಾಮಿ ಟೌನ್‌ಶಿಪ್‌ಗೂ ವ್ಯತ್ಯಾಸ ಏನು?

ನಿಮ್ಮ ಉತ್ತರ: ಖೇಣಿಯದು *Town'ship'* ಆದರೆ ಕುಮಾರಸ್ವಾಮಿಯದು *Town of sheep.*

ಉತ್ತರ ಕಳಿಸಿ ಬಹುಮಾನ ಪಡೆದಿರುವವರು: ಬಸವರಾಜ್ ಬೆಸ್ತರ್, ಹರಪನಹಳ್ಳಿ

...ಕು ಪ್ರೊಳ್ಳು, ಒಂದಿಷ್ಟು ಪ್ರೀತಿ, ಒಂದಿಷ್ಟು ದ್ವೇಷ ಹಾಗು ಶುಭದಿನ; ಬದುಕು ಚಿಕ್ಕದು. ಒಂದಿಷ್ಟು ಭರವಸೆ, ಒಂದಿಷ್ಟು ಕನಸು ಹಾಗು ಶುಭರಾತ್ರಿ -ಹೊಸ ಒಡಂಬಡಿಕೆ

ಸತ್ಯವೇಲು ಹಂತಕರ ರಕ್ಷಣೆಗೆ ಸುರಾನ!



ಹತನಾದ ಸತ್ಯವೇಲು




ಕೊಲೆಯಾದ ಸತ್ಯವೇಲುವಿನ ಮೃತ

ಗಾಜಿನ ಶವಪೆಟ್ಟಿಗೆಯೊಳಗೆ ಉಸಿರಾಡದೇ ಮಲಗಿದ್ದ ಸತ್ಯವೇಲು. ತಲೆ, ಕಪಾಲ, ಕತ್ತು, ಕಿವಿ, ಎದೆಗಳ ಮೇಲೆ ಬಿದ್ದಿದ್ದ ಮಚ್ಚಿನೇಟುಗಳಿಗೆ ಪೋಸ್ಟ್ ಮಾರ್ಟಮ್ ನಂತರ ಹಾಕಿದ್ದ ಹೊಲಿಗೆಯ ಗುರುತುಗಳು ಎದ್ದು ಕಾಣುತ್ತಿದ್ದವು. ನಿರ್ಗತಿಕರಂತಿದ್ದ ನೂರಕ್ಕೂ ಹೆಚ್ಚು ಮಂದಿ ಹೆಂಗಸರು ಒಂದಾನೊಂದು ಕಾಲದ ಲೇಡಿ ಡಾನ್ ಮತ್ತು ಹಾಲಿ ಕೌನ್ಸಿಲರ್ ಮಾರಿಮುತ್ತು ಜೊತೆ ಕೂತು ಎದೆ ಬಡಿದುಕೊಳ್ಳುತ್ತಿದ್ದರು. ಆತನ ವಿಧವಾ ಪತ್ನಿ ಸುಶೀಲ ಶವಪೆಟ್ಟಿಗೆಯ ಮುಂದೆ ಕೂತು ನೆಲಕ್ಕೆ ತಲೆ ಚಚ್ಚಿಕೊಳ್ಳುತ್ತಿದ್ದಳು. ಆಕೆಯ ಕಂಕುಳಲ್ಲಿದ್ದ ಮಗುವಿಗಿನ್ನೂ ಕೇವಲ ಒಂದು ವರ್ಷ!

ಹೀಗೇ ತಮಿಳು ಪಾತಕಲೋಕ ಕಂಡ ಅನಾಹುತಕಾರಿ ಕ್ರಿಮಿಗಳಾದ ಕುಟ್ಟಿ-ರಾಜರ ಸುಪಾರಿ ಹಂತಕರ ಕೈಗೆ ಸಿಲುಕಿ ಬರ್ಭರವಾಗಿ ಕೊಲೆಯಾದ ಸತ್ಯವೇಲು ಬಹುಜನ ಸಮಾಜ ಪಕ್ಷದ ಬೆಂಗಳೂರು ನಗರದ ಪ್ರಧಾನ ಕಾರ್ಯದರ್ಶಿ.

ಇಷ್ಟರಲ್ಲೇ ತನ್ನ ಕೊಲೆಯಾಗುತ್ತದೆಯೆಂದು ಆತನಿಗೆ ಚೆನ್ನಾಗಿ ಗೊತ್ತಿತ್ತು, ಇಡೀ ಕಂಟೋನ್ಮೆಂಟಿನ ಕೇಬಲ್ ಅಧಿಪತಿ ಶ್ರೀಧರನ ಅಟ್ಟಹಾಸಗಳ ವಿರುದ್ಧದ ಆತನ ಹೋರಾಟ ಕೊನೆಗೆ ಆತನ ಪ್ರಾಣಕ್ಕೇ ಕುತ್ತಾಗಿತ್ತು. ಅವನೊಬ್ಬನೇ ಅಲ್ಲ; ಆತನ ಅಣ್ಣ ವೇಲು, ತಮ್ಮ ಏಳುಮಲೈ ಅವರ ಸಮಸ್ತ ಗೆಳೆಯರ ಗುಂಪು ಬಹುಜನ ಸಮಾಜ ಪಕ್ಷದ ನಾಯಕ ಮಾರಸಂದ್ರ ಮುನಿಯಪ್ಪನವರ ನೇತೃತ್ವದಲ್ಲಿ ಕೇಬಲ್ ಧಣಿ ಶ್ರೀಧರನನ್ನೂ ಆತನ ಹಂಗಿಗೆ ಬಿದ್ದ ಪೊಲೀಸರನ್ನೂ ಒಟ್ಟೊಟ್ಟಿಗೇ ಎದುರು ಹಾಕಿಕೊಂಡಿತ್ತು. ಸತ್ಯವೇಲು ಕೊಲೆಯಾಗುವುದಕ್ಕೂ ವಾರದ ಮೊದಲೇ ತನ್ನ ರಕ್ಷಣೆಗೆ ರಿವಾಲ್ವರ್ ಲೈಸೆನ್ಸ್ ಕೋರಿ ಪೊಲೀಸ್ ಕಮಿಷನರ್‌ಗೆ ಮನವಿ ಕೊಟ್ಟಿದ್ದ. ಪ್ರಾಣಭಿಕ್ಷೆ ಬೇಡುತ್ತಾ ಜೆ.ಸಿ. ನಗರದ ಇನ್ಸ್‌ಪೆಕ್ಟರ್ ಅಸುಂಡಿ, ಬಾಣಸವಾಡಿ ಎಸಿಪಿ ಲಕ್ಷ್ಮಣ್, ಫ್ರೇಜರ್ ಟೌನ್ ಎಸಿಪಿ ಡಿಸೋಜ, ಕೆ.ಜಿ. ಹಳ್ಳಿ ಇನ್ಸ್‌ಪೆಕ್ಟರ್ ಶ್ರೀನಿವಾಸ್, ಜಾಯಿಂಟ್ ಕಮಿಶನರ್ ನಾರಾಯಣಗೌಡ, ಸಿಸಿಬಿಯ ಬಿ.ಕೆ. ಶಿವರಾಮ್; ಹೀಗೆ ಕಂಡಕಂಡ ಪೊಲೀಸ್ ಅಧಿಕಾರಿಗಳಿಗೆಲ್ಲಾ ಅರ್ಜಿ ಕೊಡುತ್ತಿದ್ದ.



ಕೇಬಲ್ ಶ್ರೀಧರ



ಹಂತಕ ಮ್ಯಾಥ್ಯೂ

ಅಷ್ಟೇ ಏಕೆ; ಪ್ರಾಣ ಕಾಯುವಂತೆ ಕೋರಿದ ಎರಡು ಸಾವಿರದಷ್ಟಿದ್ದ ಬಿ.ಎಸ್.ಪಿ. ಕಾರ್ಯಕರ್ತರು ಪೊಲೀಸ್ ಕಮಿಷನರ್ ಕಚೇರಿಗೇ ದಿಗ್ಬಂಧನ ಹಾಕಿದ್ದರು. ಮುಖ್ಯಮಂತ್ರಿ, ಮಾನವ ಹಕ್ಕು ಆಯೋಗ, ಲೋಕಾಯುಕ್ತ; ಹೀಗೆ ಸರ್ಕಾರದ ಯಾವೊಂದು ಅಂಗವೂ ಹಂತಕರನ್ನು ನಿರ್ಬಂಧಿಸಲಿಲ್ಲ. ಸತ್ಯವೇಲು ಹೀನಾಯವಾಗಿ ಕೊಲೆಯಾಗಿಹೋದ.

ಹಾಗಂಥ ಸತ್ಯವೇಲುವೇ ಹಂತಕರ ಟಾರ್ಗೆಟ್ ಆಗಿರಲಿಲ್ಲ, ಕೇಬಲ್ ಶ್ರೀಧರನ ಕಣ್ಣಿದ್ದದ್ದು ಆತನ ತಮ್ಮ ಏಳುಮಲೈ ಎಂಬಾತನ ಮೇಲೆ. ಅವನು ಸಿಗದಿದ್ದಕ್ಕೆ ಅನ್ಯಾಯವಾಗಿ ಅಣ್ಣನನ್ನು ಕೊಂದರು. ಸಧ್ಯ ಇಡೀ ಕಂಟೋನ್ಮೆಂಟ್‌ನ ಕೇಬಲ್ ಡಾನ್ ಶ್ರೀಧರನ ಸಾಮ್ರಾಜ್ಯಕ್ಕಿದ್ದ ಏಕೈಕ ಅಪಾಯ ಈ ಮೂಲಕ ನಿವಾರಣೆಗೊಂಡಂತಾಯ್ತು, ಆತನೀಗ ಕೊಲೆ ಕೇಸಿನಲ್ಲಿ ಭೂಗತ. ಆತನ ಪರ ಸುಪಾರಿ ಪಡೆದು ಸತ್ಯವೇಲುವನ್ನು ಕೊಲ್ಲಿಸಿದ್ದು ಭಕ್ಷಿ ಗಾರ್ಡನ್ನಿನ ಹಂತಕ ಸಹೋದರರಾದ ಕುಟ್ಟಿ-ರಾಜ. ವಿಚಿತ್ರವೆಂದರೆ ಈ ಪ್ರಕರಣದಲ್ಲಿ ವಿಧಾನಸೌಧದ ಇನ್ಸ್‌ಪೆಕ್ಟರ್ ಸಿದ್ಧಪ್ಪನವರ ಹೆಸರು ಸೇರಿದ್ದು!

ಅದು ಕೇಬಲ್ ಶ್ರೀಧರನ ಕುತಂತ್ರದ ಫಲ. ಈ ಶ್ರೀಧರ್ ಭಾರತಿ ನಗರದ ಮಾಜಿ ಶಾಸಕ ರಾಜಣ್ಣನ ತಮ್ಮ ರಾಮಕೃಷ್ಣಪ್ಪನ ಮಗ. ಇಲ್ಲಿಗೆ ವರ್ಷದ ಹಿಂದೆ ಬಹುಜನ ಸಮಾಜ ಪಕ್ಷದ ಕಾರ್ಯಕರ್ತರು ಪೊಲೀಸ್ ಕಮಿಶನರ್ ಕಚೇರಿಯೆದುರು ಪ್ರತಿಭಟನೆ ನಡೆಸಿ ಶ್ರೀಧರ್ ಮತ್ತು ಆತನ ರೌಡಿ ಪಡೆಯನ್ನು ಮಟ್ಟ ಹಾಕುವಂತೆ ಒತ್ತಾಯಿಸಿದ ಮರುದಿನವೇ ಮಾಜಿ ಎಮ್ಮೆಲ್ಲೆ ರಾಜಣ್ಣ ಕಮಿಶನರ್ ಮರಿಸ್ವಾಮಿಯವರನ್ನು ಕಂಡು 'ಶ್ರೀಧರ ನನ್ನ ಸಂಬಂಧಿಯಾದರೂ ನಾನು ಆತನ ವಿರೋಧಿ. ಆತನ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಿ, ನಂದೇನೂ ಅಭ್ಯಂತರವಿಲ್ಲ' ಎಂದು ಮತ್ತೊಂದು ಮನವಿ ಕೊಟ್ಟಿದ್ದರು.




ಎಮ್ಮೆಲ್ಲೆ ಸುರಾನ

ಆ ಹೊತ್ತಿಗಾಗಲೇ ಭಾರತಿನಗರದ ಬಿ.ಜೆ.ಪಿ. ಶಾಸಕ ಮಾರ್ವಾಡಿ ನಿರ್ಮಲ್‌ಕುಮಾರ್ ಸುರಾನನ ಬಲಗೈ ಬಂಟನಾಗಿಬಿಟ್ಟಿದ್ದ ಶ್ರೀಧರ. ಈಗ ಸತ್ಯವೇಲು ಕೊಲೆಯಿಂದ ಆತನನ್ನು ಬಚಾವು ಮಾಡಲು ಇನ್ನಿಲ್ಲದಂತೆ ಹೆಣಗುತ್ತಿರುವುದೂ ಎಮ್ಮೆಲ್ಲೆ ಕಂ ಲಾಟರಿ ದೊರೆ ಸುರಾನನೇ!

ಪ್ರಾರಂಭದಲ್ಲಿ ಮಾಜಿ ಎಮ್ಮೆಲ್ಲೆ ರಾಜಣ್ಣನ ಡೈರಿಯಲ್ಲಿ ಮನೆ ಮನೆಗೆ ಹಾಲು ಹಾಕುತ್ತಿದ್ದ ಶ್ರೀಧರ 1995ರ ಹೊತ್ತಿಗೆ ಕೇಬಲ್ ದಂಧೆಗಿಳಿದ. ದೊಡ್ಡಪ್ಪ ರಾಜಣ್ಣನೇ ಎಮ್ಮೆಲ್ಲೆಯಾಗಿದ್ದರಿಂದ ಆತನ ಕೇಬಲ್ ಸಾಮ್ರಾಜ್ಯ ವೇಗದಿಂದ ವಿಸ್ತರಿಸಿತು. ಅಲ್ಲಿಯ ತನಕ ಹಾಲಿಗೆ ನೀರು ಬೆರಕೆ ಮಾಡುತ್ತಿದ್ದದ್ದಕ್ಕೆ ತಮಿಳಿನಲ್ಲಿ 'ತಣ್ಣೀಪಾಲ್' ಎಂದು ಕರೆಸಿಕೊಳ್ಳುತ್ತಿದ್ದವನೆ. ಕ್ರಮೇಣ ಕೇಬಲ್ ಶ್ರೀಧರ್ ಎಂಬ ಹೆಸರು ಬಂತು. ಕಾಕ್ಸ್‌ಟೌನ್ ದೊಡ್ಡಿಗುಂಟೆಯ ರಾಮಕೃಷ್ಣ ರಸ್ತೆಯಲ್ಲಿ ಸಣ್ಣಗೆ ಶುರುವಾದ ಶ್ರೀಧರನ 'ಶ್ರೀ ಸ್ಯಾಟ್ ವಿಜನ್' ಎಂಬ ಕೇಬಲ್ ಅಡ್ಡೆ ಒಂದೆರಡು ವರ್ಷಕ್ಕೆ ಇಡೀ ಕಾಕ್ಸ್‌ಟೌನ್ ವ್ಯಾಪಿಸಿ ಕ್ರಮೇಣ ಜೀವನಹಳ್ಳಿ, ಫ್ರೇಜರ್ ಟೌನ್, ಥಣಿಸಂದ್ರ, ಸಿಂಧಿಕಾಲೋನಿ, ಮಾರತಹಳ್ಳಿ, ವೈಟ್‌ಫೀಲ್ಡ್ ತನಕ ವಿಸ್ತರಿಸಿತು. ಅಂಥಾ ಪೂರ್ವಂಕರ ಬಿಲ್ಡರುಗಳಿಗೇ ಧಮಕಿ ಹಾಕಿ ಪೂರ್ವ ಪಾರ್ಕ್ ಅಪಾರ್ಟ್‌ಮೆಂಟ್‌ನ ಎಂಟುನೂರು ಫ್ಲಾಟುಗಳಿಗೆ ಶ್ರೀಧರ್ ಕೇಬಲ್ ಎಳೆದ. ಇತ್ತ ಐಟಿಸಿ ಕ್ಲಬ್‌ನಿಂದ ಜೈಭಾರತ್ ನಗರ, ದೊಡ್ಡಿಗುಂಟೆ, ಸೇವಾನಗರದ ತನಕ ತನ್ನ ಕೇಬಲ್ ದಂಧೆಯನ್ನು ವಿಸ್ತರಿಸಿದ.

ಜೈಭಾರತ್‌ನಗರದಲ್ಲಿ ಕೇಬಲ್ ಇಟ್ಟುಕೊಂಡಿದ್ದ ಕುಟ್ಟಿ ಎಂಬಾತನನ್ನು ಉಪಾಯವಾಗಿ ಮುಗಿಸಿ, ಅದನ್ನು ಆತ್ಮಹತ್ಯೆ ಅಂತ ಕೇಸು ಬರೆಸಿ, ಆತನ ಇಡೀ ಕೇಬಲ್ ಜಾಲವನ್ನು ವಶಪಡಿಸಿಕೊಂಡ ಮೇಲಂತೂ ಸಣ್ಣಪುಟ್ಟ ಕೇಬಲ್ ಆಪರೇಟರುಗಳೆಲ್ಲ ಸೊಲ್ಲೆತ್ತದೆ ಶ್ರೀಧರನಿಗೆ ಶರಣಾದರು. ಆರ್.ಟಿ. ನಗರದಲ್ಲಿ ಏಟ್ರಿಯಾ ಧಣಿ ಚಿನ್ನಸ್ವಾಮಿ ರಾಜು ಆರಂಭಿಸಿದ್ದ ಕೇಬಲ್ ಕಂಪನಿಗೂ ಶ್ರೀಧರ್ ಕಾಟ ಕೊಟ್ಟ. ಶಿವಣ್ಣಚೆಟ್ಟಿ ಗಾರ್ಡನ್ನಿನಲ್ಲಿ ಹಾತ್‌ವೇ ಕೇಬಲ್ ನೆಟ್‌ವರ್ಕ್‌ಗೆ ರೌಡಿಗಳ ಸಮೇತ ನುಗ್ಗಿ ದಾಂಧಲೆಯೆಬ್ಬಿಸಿಬಿಟ್ಟ. ಆಗ ಫ್ರೇಜರ್ ಟೌನ್‌ಗೆ ಎಸಿಪಿಯಾಗಿದ್ದ ಗಣಪತಿ ಶ್ರೀಧರನನ್ನು ರಿಪೇರಿ ಮಾಡಿ ಜೈಲಿಗೆ ದಬ್ಬಿದ್ದರಾದರೂ ಶ್ರೀಧರ ಬುದ್ಧಿ ಕಲಿಯಲಿಲ್ಲ.




ಮಾರಸಂದ್ರ ಮುನಿಯಪ್ಪ


ಏಕೆಂದರೆ ಆತನ ಕೇಬಲ್ ಆದಾಯವೇ ಹಾಗಿತ್ತು, ಸರಿಸುಮಾರು ಇಪ್ಪತ್ತೈದು ಸಾವಿರದಷ್ಟು ಮನೆಗಳಿಗೆ ಶ್ರೀಧರ ಕೇಬಲ್ ಹಾಕಿದ್ದ. ಮನೆಯೊಂದಕ್ಕೆ ಕನಿಷ್ಠ ನೂರು ರೂಪಾಯಿಯಂತೆ ಲೆಕ್ಕ ಹಾಕಿದರೂ ತಿಂಗಳೊಂದಕ್ಕೆ ಅದೇ ಇಪ್ಪತ್ತೈದು ಲಕ್ಷ!

ತನ್ನ ಕೇಬಲ್ ಸಾಮ್ರಾಜ್ಯಕ್ಕೆ ಪೂರಕವಾಗೇ ಶ್ರೀಧರ ಆಯಾ ಏರಿಯಾದ ಪುಡಿ ರೌಡಿಗಳು ನಡೆಸುವ ಗಣೇಶ, ಮೇರಿ ಫೀಸ್ಟ್, ಅಂಬೇಡ್ಕರ್ ಜಯಂತಿಗಳಿಗೆ ದುಡ್ಡು ಕೊಡತೊಡಗಿದ. ಹಾಗೇ ಶ್ರೀಧರನಿಗೆ ಪರಿಚಿತರಾದವರು ಟ್ಯಾನರಿ ರೋಡ್ ಬಾಗಲೂರು ಲೇಔಟಿನ ವೇಲು ಮತ್ತು ಆತನ ತಮ್ಮಂದಿರಾದ ಸತ್ಯವೇಲು ಹಾಗೂ ಏಳುಮಲೈ. ಪ್ರಾರಂಭದಲ್ಲಿ ಟ್ಯಾನರಿ ರೋಡಿನ ಕೌನ್ಸಿಲರ್ ಮಾರಿಮುತ್ತು ಗ್ಯಾಂಗಿನ ವಿರುದ್ಧ ಬಡಿದಾಡಿದ ವೇಲು ರಾಜ್ಯ ಬಹುಜನ ಸಮಾಜ ಪಕ್ಷದ ನಾಯಕ ಮಾರಸಂದ್ರ ಮುನಿಯಪ್ಪನವರ ಅನುಯಾಯಿ. ತಮ್ಮ ಏಳುಮಲೈ ಬೆನ್ನಿಗೆ ಅಷ್ಟಿಷ್ಟು ಹುಡುಗರಿದ್ದದ್ದು ಶ್ರೀಧರನಿಗೆ ಗೊತ್ತಿತ್ತು. ವೇಲು ನೇತೃತ್ವದಲ್ಲಿ ಬಿಎಸ್‌ಪಿಯ ಕಚೇರಿಯೊಂದು ಪಾಟರಿ ಟೌನ್‌ನಲ್ಲಿ ಉದ್ಘಾಟನೆಗೊಂಡಾಗ ಅದಕ್ಕೆ ಶ್ರೀಧರನೇ ನೆರವಾಗಿದ್ದ.

ಕ್ರಮೇಣ ಶ್ರೀಧರ್ ಮತ್ತು ವೇಲು ಸಂಬಂಧ ಹಳಸಿತು. ಪಾಟರಿ ಟೌನ್‌ನಲ್ಲಿ ಬಿಎಸ್‌ಪಿ ಕಾರ್ಯಕರ್ತನೊಬ್ಬನ ಮನೆ ಖಾಲಿ ಮಾಡಿಸಿ ಆಸ್ತಿ ಲಪಟಾಯಿಸಲು ಶ್ರೀಧರ್ ರೌಡಿಗಳನ್ನು ಬಿಟ್ಟಿದ್ದ. ಜೊತೆಗೆ ಬಾಗಲೂರು ಲೇಔಟನಲ್ಲಿ ಇನ್ನೆರಡು ಮನೆಗಳನ್ನು ಕಬಳಿಸಲು ಶ್ರೀಧರ್ ಕೈಹಾಕಿದ್ದ. ಹೀಗೆ ಶುರುವಾದ ವೈಮನಸ್ಯ ಕ್ರಮೇಣ ಆತನ ಕೇಬಲ್ ಸುಲಿಗೆಯ ವಿರುದ್ಧ ಬಿಎಸ್‌ಪಿ ಹೋರಾಟ ಕೈಗೆತ್ತಿಕೊಳ್ಳುವಂತಾಯ್ತು. ಅದೇ ಹೊತ್ತಿಗೆ ವೇಲು ಬಿಎಸ್‌ಪಿಯ ಬೆಂಗಳೂರು ನಗರಾಧ್ಯಕ್ಷನಾದರೆ ಸತ್ಯವೇಲು ಪ್ರಧಾನ ಕಾರ್ಯದರ್ಶಿಯಾಗಿದ್ದ. ತನ್ನ ದುರಾಚಾರದ ವಿರುದ್ಧ ತಿರುಗಿ ಬಿದ್ದಿದ್ದಕ್ಕೆ ಪ್ರತಿಯಾಗಿ ತನ್ನ ರೌಡಿ ಹಿಂಡಿನ ಸಮೇತ ಪಾಟರಿ ಟೌನ್‌ನ ಬಿಎಸ್‌ಪಿ ಕಚೇರಿಯ ಮೇಲೆ ಶ್ರೀಧರ್ ದಾಳಿ ನಡೆಸಿದ್ದ. ಇದಾಗಿದ್ದು 2003ರ ಸೆಪ್ಟೆಂಬರ್ ಇಪ್ಪತ್ತೊಂದರ ರಾತ್ರಿ. ಈ ಬಗ್ಗೆ ಜೆ.ಸಿ. ನಗರ ಪೊಲೀಸ್ ಠಾಣೆಗೆ ದೂರು ಕೊಟ್ಟಾಗಲೂ ಇನ್ಸ್‌ಪೆಕ್ಟರ್ ಬಾಲಾಜಿಸಿಂಗ್ ಶ್ರೀಧರನನ್ನು ಬಂಧಿಸಲಿಲ್ಲ.



ಏಳುಮಲೈ



ಬಿಎಸ್‌ಪಿ ವೇಲು

ಹಾಗಂತ ಬಿಎಸ್‌ಪಿ ಸುಮ್ಮನಾಗಲಿಲ್ಲ. ಅದಾಗಿ ವಾರಕ್ಕೆ ಎರಡು ಸಾವಿರದಷ್ಟಿದ್ದ ಬಿಎಸ್‌ಪಿ ಕಾರ್ಯಕರ್ತರು ಪೊಲೀಸ್ ಕಮಿಷನರ್ ಕಛೇರಿಗೆ ಮುತ್ತಿಗೆ ಹಾಕಿದರು. ಆವತ್ತು ಕಮಿಷನರ್ ಮರಿಸ್ವಾಮಿ ಸ್ಥಳಕ್ಕೇ ಬಂದು ಪರಿಶೀಲಿಸುತ್ತೇನೆಂದು ಮಾತು ಕೊಟ್ಟರು. ಮರುದಿನವೇ ಪಾಟರಿ ಟೌನ್‌ನ ಬಿಎಸ್‌ಪಿ ಕಛೇರಿಗೆ ಬಂದು ವಿಚಾರಣೆಯನ್ನೂ ನಡೆಸಿದರು. ದುರಂತವೆಂದರೆ ಹಾಗೆ ಮರಿಸ್ವಾಮಿ ವಿಚಾರಣೆ ನಡೆಸಿ ಹೋದ ಮರುದಿನಕ್ಕೇ ಬಾಣಸವಾಡಿ ಇನ್ಸ್‌ಪೆಕ್ಟರ್ ಸಿದ್ಧಪ್ಪ ವೇಲು, ಸತ್ಯವೇಲು ಮತ್ತು ಏಳುಮಲೈರನ್ನು ಕರೆದೊಯ್ದು ಏನೇನೋ ಕೇಸು ಹಾಕಿ ಜೈಲಿಗೆ ಸಾಗ ಹಾಕಿದ್ದರು. ಬೆನ್ನಿಗೇ ಕೆ.ಜಿ. ಹಳ್ಳಿ ಇನ್ಸ್‌ಪೆಕ್ಟರ್ ಶ್ರೀನಿವಾಸ್ ಮತ್ತು ಜೆ.ಸಿ. ನಗರ ಇನ್ಸ್‌ಪೆಕ್ಟರ್ ಬಾಲಾಜಿಸಿಂಗ್ ವೇಲು ಹಾಗೂ ತಮ್ಮಂದಿರ ಮೇಲೆ ಇನ್ನಷ್ಟು ಖೊಟ್ಟಿ ಕೇಸು ಹೊರಿಸಿದ್ದರು. ಎಲ್ಲಾ ಕೇಸುಗಳಿಂದ ಜಾಮೀನು ಪಡೆದು ಜೈಲಿಂದ ಹೊರ ಬೀಳುವ ಹೊತ್ತಿಗೆ ಅಣ್ಣತಮ್ಮಂದಿರು ಹೈರಾಣಾಗಿದ್ದರು.

ಫ್ರೇಜರ್ ಟೌನ್ ಎಸಿಪಿ ಡಿಸೋಜಾ ಮತ್ತು ಬಾಣಸವಾಡಿ ಇನ್ಸ್‌ಪೆಕ್ಟರ್ ಲಕ್ಷ್ಮಣ್ ಕೂಡ ಕೇಬಲ್ ಶ್ರೀಧರನ ಹಂಗಿಗೆ ಬಿದ್ದು ತಮಗೆ ಕಾಟ ಕೊಟ್ಟರೆಂದು ಸತ್ಯವೇಲು ದೂರು ಕೊಟ್ಟ. ಇದು ಇಷ್ಟಕ್ಕೇ ನಿಲ್ಲಲಿಲ್ಲ, ಜೈಲಿಂದ ಹೊರಬರುತ್ತಿದ್ದಂತೆ ನಟೋರಿಯಸ್ ರೌಡಿಗಳಾದ ಕುಟ್ಟಿ-ರಾಜರನ್ನು ಶ್ರೀಧರ ಛೂ ಬಿಟ್ಟಿದ್ದ. ಸದ್ಯ ... ರೌಡಿಗಳ ಪೈಕಿ ಅತ್ಯಂತ ಅಪಾಯಕಾರಿಗಳೆಂದರೆ ... ಕಾಟನ್‌ಪೇಟೆಯ ಭಕ್ಷಿಗಾರ್ಡನ್ನಿನ ಕ್ರಿಮಿಗಳಾದ ... ಮತ್ತು ರಾಜ ಎಂಬ ಹಂತಕ ಸಹೋದರರೇ!

ಇತ್ತೀಚೆಗೆ ಕುಟ್ಟಿ-ರಾಜ ಜೋಡಿ ಕಂಟೋ... ಏರಿಯಾದಲ್ಲಿ ವಿಪರೀತ ಆಕ್ಟೀವ್ ಆಗಿದೆ. ... ಅಲ್ಲಿಗೆ ಕರೆತಂದಿದ್ದೇ ಕೇಬಲ್ ಶ್ರೀಧರ. ಟ್ಯಾನರಿ ರೋ... ಗಿಡ್ಡಪ್ಪ ಲೇನ್‌ನ ಮತ್ತೊಬ್ಬ ಕ್ರಿಮಿ ಸೆಲ್ವಾ ... ಬ್ಯಾಡರಹಳ್ಳಿಯ ಕಾಲಾಪತ್ಥರ್ ಶಿಷ್ಯ ಮ್ಯಾಥ್ಯೂ ... ಕುಟ್ಟಿ-ರಾಜರ ಸಹಚರರೇ. ವೇಲು ವಿರುದ್ಧ ಶ್ರೀಧ... ಸುಪಾರಿ ಪಡೆದ ಕುಟ್ಟಿ ಪ್ರಾರಂಭದಲ್ಲಿ ಫೋನ್ ... ನೋಡಿದ್ದಾನೆ. ಅದಕ್ಕೂ ಬಗ್ಗದೇ ಹೋದಾಗ ಸೆ... ಬಿಟ್ಟಿದ್ದಾನೆ. ಸೆಲ್ವಾ ಪೊಲೀಸರ ಎದುರೇ ತಲ... ಹಿಡಿದು ಸತ್ಯವೇಲು ಮನೆಗೆ ನುಗ್ಗಿದ್ದಾನೆ. ಪಾಟರಿ ... ಬಿಎಸ್‌ಪಿ ಕಚೇರಿಯ ಮೇಲೂ ದಾಳಿ ನಡೆ... ಇದಾಗಿ ವಾರಕ್ಕೇ ಮತ್ತೊಬ್ಬ ರೌಡಿ ಮ್ಯಾಥ್ಯೂ ಸರಿಸು... ಇಪ್ಪತ್ತು ಮಂದಿ ಹಂತಕರೊಂದಿಗೆ ಮೋರ್ ರಸ್ತೆ... ಏಳುಮಲೈನ ಮನೆ ಮೇಲೆ ಅಟ್ಯಾಕ್ ಮಾಡಿದ...

ಯಾವತ್ತು ಏಳುಮಲೈ ಸಿಗಲಿಲ್ಲವೋ ... ಗ್ಯಾಂಗ್ ಓಡಿ ಹೋಗಿದೆ. ಹಾಗೆ ಓಡಿ ಹೋ... ಒಬ್ಬಾತನನ್ನು ಕಾವಲಿಗಿದ್ದ ಪೊಲೀಸ್ ಪೇದೆ... ಹಿಡಿದಿದ್ದಾನೆ. ಆಗ ಆತ ಬಾಯಿ ಬಿಟ್ಟಿದ್ದು ಬ್ಯಾಡರಹ... ಮ್ಯಾಥ್ಯೂ, ಆತನ ಅಣ್ಣನ ಮಗ ಬೆನ್ನು, ಲಿಂಗರಾಜ... ಡ್ಯಾಡು; ಮತ್ತಿತರರ ಹೆಸರನ್ನು. ಈ ಪೈಕಿ ಡ್ಯಾಡು ಕೆ... ಶ್ರೀಧರನ ಬಳಿ ಕೆಲಸಕ್ಕಿದ್ದಾತ. ಮ್ಯಾಥ್ಯೂ ... ಸಿಕ್ಕಿಬೀಳುತ್ತಿದ್ದಂತೆ ಸೆಲ್ವಾ ಮಾರುತಿ ವ್ಯಾನ್ ಒ... ಮೂರನೇ ಬಾರಿ ದಾಳಿ ನಡೆಸಿ...

ಈ ಬಗ್ಗೆ ವೇಲು ... ತಮ್ಮಂದಿರು ಪದೇಪದೇ ಪೊ... ಕಮಿಷನರ್ ಕಂಡು ದೂರು ಕೊ... ಜೆ.ಸಿ. ನಗರ, ಕೆ.ಜಿ. ಹಳ್ಳಿ ... ಬಾಣಸವಾಡಿ ಪೊಲೀಸ್ ಠಾಣೆಗೆ ಹೋಗಿ ಬೇಡಿಕೊಂಡರು. ನಯಾಪೈ... ಪ್ರಯೋಜನವಾಗಲಿಲ್ಲ. ಈ ... ಜಂಟಿ ಕಮಿಷನರ್ ನಾರಾಯಣಗೌ... ಈ ಬಗ್ಗೆ ತನಿಖೆ ನಡೆಸುವಂತೆ ಸಿಸಿ... ಎಸಿಪಿ ಶಿವರಾಮ್‌ಗೆ ವಹಿಸಿದ್ದು ... ಅಂಥ ಪ್ರಯೋಜನಕ್ಕೆ ಬರಲಿಲ್ಲ. ಕೆ... ಶ್ರೀಧರನನ್ನು ಕರೆಸಿದ ಶಿವರಾ... ಸ್ಟ್ರಿಕ್ಟಾಗಿಯೇ ವಾರ್ನ್ ಮಾಡಿ... ಆದರೆ ಭಾರತಿನಗರದ ಶಾಸಕ ಸು... ಶ್ರೀಧರನ ಬೆನ್ನಿಗಿದ್ದನಲ್ಲ; ಪೊಲೀ... ಯಾವ ಲೆಕ್ಕ!

ಶ್ರೀಧರನಿಗೆ ತನ್ನ ವಿರುದ್ಧ ... ಬಿದ್ದವರಿಗೆ ಬಿಸಿ ಮುಟ್ಟಿಸಲೇಬೇ... ಈ ಹೊತ್ತಿಗಾಗಲೇ ಕುಟ್ಟಿ-ರಾ... ಗ್ಯಾಂಗಿಗೆ ಸುಪಾರಿಯನ್ನೂ ಕೊಟ್ಟಾ... ಆತನ ಟಾರ್ಗೆಟ್ ಏನಿದ್ದರೂ ... ಏಳುಮಲೈ ಎಂದು ಸತ್ಯವೇಲು... ಹಾಕಿರಬೇಕು. ಅದೇ ಲೆಕ್ಕಾಚಾ... ಜೂನ್ ಇಪ್ಪತ್ತೊಂದರ ರಾತ್ರಿ ಫ್ರೇ... ಟೌನ್‌ನ ಮೋರ್ ರಸ್ತೆಗೆ ಬಂದಿ... ಜೂನ್ 25 ಕ್ಕೆ ಮಾಯಾವತಿ ಬೆಂಗಳೂರಿಗೆ ... ಕಾರ್ಯಕ್ರಮಕ್ಕೆ ಆತ ಕಾರ್ಯಕರ್ತರನ್ನು ಸಂಘಟಿಸ... ಅಲ್ಲಿಗೆ ಬಂದಿದ್ದ.

ಅದು ರೌಂಡ್ಸ್‌ನಲ್ಲಿದ್ದ ಮ್ಯಾಥ್ಯೂಗೆ ಗೊತ್ತಾಗಿದೆ. ... ತಮ್ಮ ಹಂತಕ ಕುಟ್ಟಿ, ಮ್ಯಾಥ್ಯೂ ಅಣ್ಣನ ಮಗ ಅರು... ಬಾಬು ಮುಂತಾದವರೆಲ್ಲ ಮಾರುತಿ ವ್ಯಾನ್ ಒಂ... ಬಂದಿದ್ದೇ ಸತ್ಯವೇಲುವನ್ನು ಕೊಚ್ಚಿ ಹಾಕಿದ್ದಾರೆ. ... ಕೇಬಲ್ ಶ್ರೀಧರನ ಒಂದು ರೌಂಡಿನ ಶಿಕಾರಿ ಮುಗಿ...

ಇಲ್ಲಿ ಪ್ರಶ್ನೆಯಿಷ್ಟೇ; ತಮ್ಮ ಪ್ರಾಣಕ್ಕಾಗಿ ಪೊಲೀಸರ... ಪರಿಪರಿಯಾಗಿ ಗೋಳಾಡಿದಾಗಲೂ, ಅಷ್ಟು... ಧರಣಿ-ಪ್ರತಿಭಟನೆ ನಡೆಸಿದಾಗಲೂ ಪೊಲೀಸ... ಬಿಎಸ್‌ಪಿ ಕಾರ್ಯಕರ್ತರನ್ನು ರಕ್ಷಿಸಲಿಲ್ಲ? ಕೇಬಲ್ ಶ್ರೀ... ದುಡ್ಡಿಗೆ ಅಷ್ಟೊಂದು ತಾಕತ್ತೆ?

-ವರದಿಗಾ...

ಬದುಕೆಂದರೆ ಒಂದಾದ ಮೇಲೊಂದರಂತೆ ಬರುವ ಅನಿಷ್ಟಗಳ ಸರಣಿ -ಫ್ರಾಂಕ್ ವಾರ್ಡ್ ... ಮಲೇ

"ಇನ್ನು ಎರಡು ವರ್ಷದಲ್ಲಿ ಸಂಸ್ಥೆಯ ಟರ್ನ್ ಓವರ್ 250 ಕೋಟಿಗೇರಿಸಿ ವರ್ಷಕ್ಕೆ 30 ಕೋಟಿ ಪ್ರಾಫಿಟ್ ಮಾಡಬೇಕೂಂತ ಇದ್ದೀವಿ."

"ಎಲ್ಲೆಲ್ಲಿ ವಿಜಯ ಕರ್ನಾಟಕ ಇನ್ನೂ ನಂ. 1 ಆಗಿಲ್ಲವೋ ಅಲ್ಲಿ ಗಮನ ಹಾಕಿ ನಂ. 1.ಗೆ ತರ್ತೀವೆ."


"ಸದ್ಯಕ್ಕೆ ಯಾವ ಸಿಬ್ಬಂದಿಯನ್ನೂ ತೆಗೆದು ಹಾಕಲ್ಲ, ಇರೋರೆಲ್ಲಾ ಹಾಗೇ ಮುಂದುವರಿತಾರೆ, ವಾರ್ಷಿಕ ಬಡ್ತಿ etc ಎಂದಿನಂತೆ ಕೊಡ್ತೀವಿ"


-ಈ ಡೈಲಾಗ್‌ಗಳೆಲ್ಲಾ ವಿಕ ಬಳಗದ ಹೊಸ ಬಾಸ್ ಟೈಮ್ಸ್‌ನ ಚಿನ್ನನ್ ದಾಸ್‌ರದ್ದು. ಇತ್ತೀಚೆಗೆ ತಮ್ಮ ಪತ್ರಿಕಾ ಬಳಗದವರ ಸಭೆ ನಡೆಸಿರುವ ಚಿನ್ನನ್ ದಾಸ್ ವಿಜಯ ಕರ್ನಾಟಕ, ಉಷಾ ಕಿರಣ ಹಾಗೂ ವಿಜಯ್ ಟೈಮ್ಸ್‌ಗಳನ್ನು ರಿಪೇರಿ ಮಾಡಿ ಲಾಭದ ಹೈವೆಗೆ ತಂದು ಹೇಗೆ ಓಡಿಸಬಹುದೆಂಬ ತಮ್ಮ ಯೋಚನೆಗಳನ್ನು ವಿವರಿಸಿದ್ದಾರೆ. ಅವರಿಗೆ ಶುಭವಾಗಲಿ.

ಆದರೆ ಅವರು ಮಾತಾಡಿರುವ ವಿಚಾರಗಳೆಲ್ಲಾ ಪತ್ರಿಕೆಯ ಎಂಜಿನ್, ಕಲೆಕ್ಷನ್ನು, ರೂಟಿಗೆ ಸಂಬಂಧಿಸಿದ್ದು ಬಾಡಿಯದ್ದಲ್ಲ. ಚಿನ್ನನ್ ದಾಸ ಪತ್ರಕರ್ತರ ಉಡುಗೆ-ತೊಡುಗೆ ವಿಚಾರ ಮಾತಾಡದೆ ಬಿಟ್ಟಿರುವುದು ಅರ್ಥಾತ್ ವಿಕದ ಒಲವು-ನಿಲುವುಗಳ ಬಗ್ಗೆ ಏನನ್ನೂ ಸ್ಪಷ್ಟವಾಗಿ

ವಿಕ-ಉಷಾಕಿರಣ-ವಿಜಯ್ ಟೈಮ್ಸ್

ಎತ್ತು ಏರಿಗೆ-ಕೋಣ ಕೊಚ್ಚೆಗೆ






ಹೇಳಿಲ್ಲದಿರುವುದು ಕೆಲವರಿಗೆ ಆಶ್ಚರ್ಯ ಮೂಡಿಸಿದೆ. ಏಕೆಂದರೆ ಕನ್ನಡ ಓದುಗ ಸಾಕಷ್ಟು ಸೂಕ್ಷ್ಮ ಹಾಗೂ ಜಾಣನಾಗಿರುವುದರಿಂದ ಪ್ಯಾಂಟು-ಶರ್ಟು ಹಾಕಿಕೊಳ್ಳುವ ಪತ್ರತರ್ಕರನ್ನು ಮಾತ್ರ ನಂಬುತ್ತಾನೆ. ಖಾಕಿ ಚಡ್ಡಿ, ಜನಿವಾರ ತೋರಿಸಿಕೊಂಡು ಪೆನ್ನಿನ ಬದಲು ಲಾಠಿ ಹಿಡಿದಿರುವ ಕೈಯನ್ನು ಅವನು ಮೆಚ್ಚಲಾರ.

ವಿಜಯ ಕರ್ನಾಟಕ ನಂಬರ್ ಒನ್ ಆದ ಮೇಲೂ ಪ್ರಜಾವಾಣಿಯನ್ನು ಸೈಡ್‌ಲೈನ್ ಮಾಡಲು ಅಸಾಧ್ಯವಾಗಿದ್ದು ಇದೇ ಕಾರಣಕ್ಕೇನೆ. ವಿಕ ನಂಬರ್ 1 ಅಂತಾ ಯಾರು ಎಷ್ಟೇ ಬೊಂಬಡ ಬಜಾಯಿಸಿದರೂ ಅದು ಮೇಲ್ಜಾತಿ ಹಿಂದೂಗಳ ಚಡ್ಡಿಗಳ ಪರವಾದ 'ಪತ್ರಿಕೆ' ಎಂಬುದನ್ನು ಕನ್ನಡಿಗ ಅರ್ಥ ಮಾಡಿಕೊಂಡಿದ್ದಾನೆ. ವಿಕಗೆ ಹಿಡಿದಿರುವ ಈ ಗ್ರಹಣ ಬಿಡದಿದ್ದರೆ ಅದಕ್ಕೆ ಯಶಸ್ಸು ಸಿಗುವುದು ಕಷ್ಟ. ಕನಿಷ್ಠ 2006 ನೇ ಇಸವಿಯ ಕನ್ನಡ ಓದುಗ ಬರೀ 'ಚಡ್ಡಿ ಸುದ್ದಿ-ಜಾತಿ ಸುದ್ದಿ'ಯ ಒಂದೇ ರೂಟಿನಲ್ಲಿ ಓಡಾಡುವ ಪತ್ರಿಕಾ ವಾಹನ ಹತ್ತುವುದಿಲ್ಲ. ವಿಕ ಗಾಡಿಯನ್ನು ಏರಿಗೆ ಏರುವ ಎತ್ತಿನ ಜಾಣ ಯೋಚನೆ ಚಿನ್ನನ್ ಅವರದ್ದು. ಆದರೆ ವಿ.ಕ.ವನ್ನು ಕಮಲದ ಮೇಲಿನ ಆಸೆಯಿಂದ ಕೊಚ್ಚೆ ಗುಂಡಿಗೆ ಬೀಳಿಸುವ ಒಂದು ಕೋಣರ ಗುಂಪೇ ಅಲ್ಲಿದೆ.

ಚಿನ್ನನ್ ದಾಸ್ ತಮ್ಮ ಟೇಬಲ್ ಮೇಲಿರುವ ಕ್ಯಾಲ್ಕುಲೇಟರ್ ಪಕ್ಕಕ್ಕಿಟ್ಟು ಚೇಂಬರಿನಿಂದಾಚೆ ಬಂದು ಓದುಗನ ಪಲ್ಸ್ ನೋಡಿದರೆ ಒಳ್ಳೆಯದು.

ಈ ನಡುವೆ ವಿಜಯ್ ಟೈಮ್ಸ್‌ಗೆ ಮೈಸೂರಿನ ಕೃಷ್ಣ ಪ್ರಸಾದ್ ಎಡಿಟರ್ ಆಗಿ ಬರುವುದು ಖಚಿತವಾಗಿದೆ. ವಿಜಯ ಕರ್ನಾಟಕಕ್ಕೂ ಹೊಸ ಸಂಪಾದಕರು ಬರುತ್ತಾರೆ ಎಂಬ ರೂಮರ್‌ಗಳಿವೆ. ಆದರೆ ಹಾಲಿ ಕಾರ್ಯನಿರ್ವಾಹಕ, ವ್ಯವಸ್ಥಾಪಕ, ಸಂಪಾದಕ, ವಿಶ್ವೇಶ್ವರ ಭಟ್‌ರವರ ಕಾಂಟ್ರ್ಯಾಕ್ಟ್ ಇನ್ನೂ 2 ತಿಂಗಳಿದೆ. ಹಾಗಾಗಿ ಭಟ್ ಆ ಅವಧಿ ಮುಗಿಸುತ್ತಾರೆ. ನಂತರ ಏನೆಂದು ಈ ವಿಶ್ವೇಶ್ವರ್ ಭಟ್ಟರಿಗೂ ಗೊತ್ತಿಲ್ಲ. ಅಕಸ್ಮಾತ್ ಯಾರಾದರೂ ಈ ಹುದ್ದೆಯ ಮೇಲೆ ಕಣ್ಣಿಟ್ಟಿದ್ದರೆ ಈಗಿನಿಂದಲೇ ಪ್ರಯತ್ನ ಮಾಡಬಹುದು. ಆದರೆ ಚಡ್ಡಿಯ ಹಾಕಿಕೊಂಡಿದ್ದರೆ ಉತ್ತಮ. ಕನ್ನಡ ಓದುಗ [illegible]

ಕೋ-ಜಾ ಸರ್ಕಾರದ ಹೆಣ ಹೊರೋಕೆ ನಾಲ್ಕೇ ಜನ ಬೇಕಾಗಿತ್ತು



ವಾರದ ಹಿಂದೆ ದೇವೇಗೌಡರ ಮನೆ ಹತ್ತಿರ ಸುಳಿದ ಮಹದೇವ ಪ್ರಸಾದ್, ಅಲಂಗೂರು ಇತ್ಯಾದಿ ಮಂತ್ರಿ ಸ್ಥಾನ ಯಾಚಕ ಸಮೂಹಕ್ಕೆ ದೇವೇಗೌಡರು ಮಾಡುತ್ತಿದ್ದ ಅಂಗ ಚೇಷ್ಟೆಯ ಸ್ಪಷ್ಟ ಫಲಿತಾಂಶ ಸಿಕ್ಕೇಬಿಟ್ಟಿತಂತಲ್ಲಾ. ಸದರಿ ಮಾಜಿಗಳು ಗೌಡರ ಎದುರು ಕೂತು ಕೇಳುತ್ತಿದ್ದ ಪ್ರಶ್ನೆಗಳಿಗೆ ಗೌಡರು "ಆವಾಗ, ಈವಾಗ, ಆ, ಊ," ಎಂದು ಅರೆಗಣ್ಣಿನಿಂದ ಉತ್ತರಿಸುತ್ತಾ, ಟವೆಲ್ ಎಸೆಯುತ್ತಾ ರಿಂಗಾದ ಮೊಬೈಲನ್ನು ಸಿಟ್ಟಿನಿಂದ ತೆಗೆದುಕೊಳ್ಳುತ್ತಾ ಮತ್ತೆ ಆಗಾಗ್ಗೆ ವೈರಾಗ್ಯದ ಮಾತನ್ನಾಡುತ್ತಾ ಸಾಗಿದರಂತಲ್ಲಾ. ಇದನ್ನೆಲ್ಲ ನೋಡಿದ ಅಲಂಗೂರು, ಮಹದೇವ ಪ್ರಸಾದ್, ಪುಟ್ಟೇಗೌಡ ಇತ್ಯಾದಿ ಜನ "ಗೌಡರಿಗೆ ಉಷಾರಿಲ್ಲವೇನೊ, ಅಥವಾ ಮಾತ್ರೆಗಳ ಗರ್ಮಿಯಿಂದ ಅಂಗಚೇಷ್ಟೆ ಜಾಸ್ತಿಯಾಗಿದೆಯೇನೋ" ಎಂದುಕೊಂಡು ಎದ್ದು ಬಂದರಂತಲ್ಲಾ. ಸ್ಥಾನಮಾನ ಯಾಚಕ ಸಮೂಹ ಎದ್ದು ಹೊರಬರುತ್ತಿದ್ದಂತೇ ಗೌಡರ ಸನ್ನೆಯನ್ನರಿತವನಂತೆ ಬಾಗಿಲು ರಕ್ಷಕ ಬಂದು ಬಾಗಿಲು ಹಾಕಿದ ಶಬ್ದಕ್ಕೆ ಅಲಂಗೂರು ಅಂಗ ಅಲುಗಾಡಿತಂತಲ್ಲಾ, ಥೂತ್ತೇರಿ!!

* * * * * * *

ಇದ್ದಕ್ಕಿದ್ದಂತೆ ವಿಸ್ತರಣೆಗೊಂಡ ಸಚಿವರನ್ನು ನೋಡಿ ಹಲವರು ಬಾಯಿ ಬಡಿದುಕೊಂಡರಂತಲ್ಲಾ. ಜೆಡಿಎಸ್ ಹೆಣ ಹೊರಲು ನಾಲ್ಕು ಜನ, ಬಿಜೆಪಿ ಹೆಣ ಹೊರಲು ನಾಲ್ಕು ಜನ. ಅಂತೂ ಈ ವಿಸ್ತರಣೆ ಆ ಪಾರ್ಟಿಗಳು ಮುಂದೆ ಪಡೆಯಬಹುದಾದ ಸನ್ಮಾನದ ಸಂಕೇತದಂತಿತ್ತಂತಲ್ಲಾ. ಇಷ್ಟವಿಲ್ಲದಿದ್ದರೂ ಪಾರ್ಟಿಯಲ್ಲಿ ಉಳಿದೇಬಿಟ್ಟ ಪ್ರಕಾಶರಿಗೆ ಏನನ್ನಾದರೂ ಕೊಡಲೇಬೇಕು ಎಂದು ಗೌಡರು ಚಿಂತಿಸುತ್ತಿರುವಾಗಲೇ "ಏನು ಕೊಟ್ಟರೂ ತೆಗೆದುಕೊಳ್ಳುತ್ತೇನೆ, ಕೊಡದಿದ್ದರೂ ಸುಮ್ಮನಿರುತ್ತೇನೆ" ಎಂದು ಎಂ.ಪಿ. ಪ್ರಕಾಶ್ ಸಿದ್ಧರಾಗಿಬಿಟ್ಟರಂತಲ್ಲಾ. ಅವರ ಈ ಗುಣ ಮೆಚ್ಚಿದ ಗೌಡರು, "ಹಾಳುಬಿದ್ದು ಹೋಗಲಿ, ಹೇಗಿದ್ದರೂ ಆ ಖಾತೆಗಳ ಫೈಲು ನನ್ನ ಬಳಿಯೇ ಇರುತ್ತವಲ್ಲ" ಎಂದು ನಿರ್ಧರಿಸಿ ಎರಡು, ಮೂರು ಬೃಹತ್ ಖಾತೆಗಳನ್ನೇ ಕೊಟ್ಟುಬಿಟ್ಟರಂತಲ್ಲಾ. ಇಂತಹ ಖಾತೆಗಳನ್ನು ತೆಗೆದುಕೊಳ್ಳುವಾಗ "ಆ ಪಟೇಲರ ಹುಡುಗನಿಗೊಂದು ದಯಪಾಲಿಸಿ. ಪಾಪ ತಬ್ಬಲಿ ಹುಡುಗ. ತಾನಾಯಿತು ತನ್ನ ಕಲ್ಕಿ ಜಗತ್ತಾಯಿತು ಎಂಬಂತಿದ್ದಾನೆ," ಎಂಬ ಒಂದು ಸಣ್ಣ ಶಿಫಾರಸನ್ನೂ ಪ್ರಕಾಶ್ ಮಾಡಲಿಲ್ಲವೆಂದು ಬಣಜಿಗ ಲಿಂಗಾಯಿತರು ಜಂಗಮರ ಜನ್ಮ ಜಾಲಾಡುತ್ತಿದ್ದಾರಂತಲ್ಲಾ, ಥೂತ್ತೇರಿ!!


* * * * * * *

ಜೆಡಿಎಸ್ ಮಂತ್ರಿಗಳ ಪೈಕಿ ಜಮೀರ್ ಅಹಮದ್ ಎಂಬುವನು ಕರ್ನಾಟಕದ ಕೀರ್ತಿ ಪತಾಕೆಯನ್ನು ಚಾಮರಾಜಪೇಟೆಯಿಂದ ಬಾಂಬೆಯ ಜೂಹೂ ಬೀಚಿನ ವರೆಗೂ ಹಾರಿಸಿದ್ದಾನಂತಲ್ಲಾ. ಒಂದೇ ಪರ್ಮಿಟ್ಟಿನಿಂದ ಒಂದು ಡಜನ್ ಬಸ್ ಓಡಿಸುವ ಜಮೀರ್ ಬಸ್ಸಿನಲ್ಲಿ ಇಡೀ ದೇಶವನ್ನೇ ಹಾಳು ಮಾಡುವಂತಹ ಸಾಮಗ್ರಿಗಳು ಸಾಗಿಸಲ್ಪಡುತ್ತವೆಂದು ಗುಟ್ಟಾಗಿ ಮಾತನಾಡಿಕೊಳ್ಳುತ್ತಿದ್ದ ಜೆಡಿಎಸ್‌ನವರು ಈಗ ಜಮೀರ್ ಮಂತ್ರಿಯಾದ ಕೂಡಲೇ ಬಹಿರಂಗವಾಗಿಯೇ ಮಾತನಾಡುತ್ತಿದ್ದಾರಂತಲ್ಲಾ. ಈ ಸಂಬಂಧವಾಗಿ ಈಗಾಗಲೇ ಎ.ಕೆ. ಸುಬ್ಬಯ್ಯ ನಾಲಿಗೆ ಮಸೆದುಕೊಂಡು ತಾವು ಹಿಂದೆ ಇಬ್ರಾಹಿಂ ವಿರುದ್ಧ ಹೋರಾಡಿದ್ದ ಹಳೆ ಸಾಮಗ್ರಿಯನ್ನೆಲ್ಲಾ ಈಚೆಗೆ ಹರವಿಕೊಂಡು ಕುಳಿತಿದ್ದಾರಂತಲ್ಲಾ. ಇದರಿಂದ ಹೆದರಿಕೊಂಡ ಜಮೀರ್ ಕುಮಾರಸ್ವಾಮಿ ಬಳಿಗೆ ಹೋಗಿ "ಅಭಿ ಕ್ಯಾ ಕರ್‍ನ ಭಯ್ಯ ಅಲ್ಲ ಬಾಬ. ವೊ ಸುವ್ವರ್ ಸುಬ್ಬಯ್ಯ ಕ್ಯಾ ಕ್ಯಾ ಬೋಲ್ತ ಹೈ ಮಾಲುಮ್?" ಎಂದು ನಿಂತುಕೊಂಡನಂತಲ್ಲಾ, ಆಗ ಕುಮಾರಣ್ಣ ಅನಿತಾರನ್ನು ತಬ್ಬಿದಂತೆಯೇ ತಬ್ಬಿ ಕೆನ್ನೆಗೊಂದು ಮುತ್ತು ಕೊಟ್ಟು "ವೊ ಸುಬ್ಬಯ್ಯಾಕು ಗೋಲಿ ಮಾರೊ, ಜಾ ಜಾ" ಎಂದರಂತಲ್ಲಾ, ಥೂತ್ತೇರಿ!!!

* * * * * * *

ಇತ್ತ ಬಿಜೆಪಿ ಖಾತೆ ಹಂಚಿಕೆ ತುಂಬಾ ತಮಾಷೆಯಾಗಿದೆಯಂತಲ್ಲಾ, ಶಿವಾನಂದ ನಾಯ್ಕ ಎಂಬುವನಿಗೆ ಗ್ರಾಮಗಳ ನಲ್ಲಿಗೆ ನೀರು ಹಾಯಿಸಲು ಹೇಳಿ, ರವೀಂದ್ರನಾಥನಿಗೆ ತೋಟ ಕಾಯಲು ಹೇಳಿ, ಸಕ್ಕರೆ ಕಾಯಿಲೆಯಿರುವ ಶಶಿಕಾಂತ ಅಕ್ಕಪ್ಪ ನಾಯ್ಕನಿಗೆ ನಿಂತು ಹೋಗಿರುವ ಸಕ್ಕರೆ ಕಾರ್ಖಾನೆಗಳ ರಿಪೇರಿ ಕೆಲಸ ಕೊಟ್ಟು, ರೇವುನಾಯಕನಿಗೆ ಲಗತ್ತಾದ ದನ ಮೇಯಿಸುವ ಕೆಲಸವನ್ನು ಸಂಬಳದ ಮಾತನಾಡದೆ ವಹಿಸಲಾಗಿದೆಯಂತಲ್ಲಾ, ಇದನ್ನು ಅಳುಗಣ್ಣಿನಿಂದಲೇ ನೋಡಿದ ಶಂಕರಲಿಂಗೇಗೌಡ ಕಡೆಗೆ ಬಾಯಿ ಬಡಿದುಕೊಂಡು ಊರ ದಾರಿ ಹಿಡಿದನಂತಲ್ಲಾ, ಶಂಕರಲಿಂಗೇಗೌಡ ಅಳುತ್ತ ಹೋಗುವುದನ್ನು ನೋಡಿದ ಹಲವು ಸಾರ್ವಜನಿಕರು, "ಪಾಪ ಯಾರೋ ಸಂಬಂಧಿ ತೀರಿಕೊಂಡಿರಬೇಕು" ಎಂದರೆ, ಮತ್ತೆ ಕೆಲವರು "ತೀರ ಆಪ್ತರೇ ತೀರಿಕೊಂಡಿರಬೇಕು. ಇಲ್ಲವಾದರೆ ಇಂತಹ ವೇಷದಲ್ಲಿ ಇಷ್ಟೊಂದು ಅಳಲು ಸಾಧ್ಯವೇಯಿಲ್ಲ, ಹೇಗಾದರಾಗಲಿ ಅವರನ್ನು ಮಾತನಾಡಿಸಿ ಅವರ ದುಃಖದಲ್ಲಿ ಭಾಗಿಯಾಗೋಣ" ಎಂದು ನಿರ್ಧರಿಸಿದ್ದರಂತಲ್ಲ, ಆಗ ಗೌಡರ ಹತ್ತಿರ ಹೋದ ಜನ "ಗೌಡರೇ, ಏನಾಗಿದೆ ಹೇಳಿ. ನಾವೂ ನಿಮ್ಮ ದುಃಖದಲ್ಲಿ ಭಾಗಿಯಾಗ್ತಿವಿ" ಎಂದರಂತಲ್ಲಾ, ಅದಕ್ಕೆ ಗೌಡರು "ನನಿಗೆ ಅನ್ಯಾಯವಾಗಿದು, ನಾನು ಪಾರ್ಟಿ ಬಿಡಲ್ಲ, ಹೋಗ್ರಿ" ಎಂದಾಗ ಜನ "ರಾಜಕಾರಣದ ಹುಚ್ಚು ಕೆರಳಿದೆ" ಎಂದು ಜಾಗ ಖಾಲಿ ಮಾಡಿದರಂತಲ್ಲಾ, ಥೂತ್ತೇರಿ!!

* * * * * * *



ನಂಬಿಕೆ ದ್ರೋಹಕ್ಕೆ ತುತ್ತಾಗಿರುವ ಮಹಿಮಾ ಪಟೇಲರನ್ನು ಮಾತನಾಡಿಸಬೇಕೆನಿಸಿತಲ್ಲಾ, ಸದಾ ಮೊಬೈಲ್ ಫೋನ್ ಆಫ್ ಮಾಡಿಕೊಂಡಿರುವ ಮಹಿಮಾ ಇಂದು ಸಿಕ್ಕೇಬಿಟ್ಟರು

"ಹಲೋ ಸಾರ್, ನಾನು ಯಾಹು. ಗೌರಿ ಲಂಕೇಶ್ ಕಡೆಯವನು."

"ಅಂದ್ರೆ ಕೊನಗವಳ್ಳಿಯವರ?"

"ಅಲ್ಲಾ ಸಾರ್."

"ಹಾಗಾದ್ರೆ ಕೊಕ್ಕನೂರು ಕಡೆಯವರಾ?"

"ಅಲ್ಲ ಸಾರ್, ಅವ್ರುರ ಪತ್ರಿಕೆಲಿದ್ದುಕೊಂಡು ನಿಮ್ಮಂಥೋರ ಮಾತಾಡಿಸಿ ಅವನ್ನೇ ಬರಿತಿನಿ."

"ಈಗ ನನಿಗೆ ಯಾರ ಜೊತೆ ಮಾತಾಡಕ್ಕೂ ಮೂಡಿಲ್ಲ"

"ನಿಮಗೆ ಅಭಿನಂದಸಕ್ಕೆ ಫೋನ್ ಮಾಡಿದೆ ಸಾರ್."

"ನನ್ನನ್ಯಾಕ್ರಿ ಅಭಿನಂದಿಸುತ್ತೀರಿ? ತಮಾಸಿ ಮಾಡ್ತಿರ?"

"ಈ ಟೈಮಲ್ಲಿ ತಮಾಸಿನೆ ವಳ್ಳೆದು ಸಾರ್."

"ಹಾಗಂತಿರ?"

"ಹೌದು. ಪಟೇಲ್ರು ಎಂಥಾ ಟೈಮಲ್ಲೂ ತಮಾಸಿ ಮಾಡತಿದ್ರು. ತಪ್ಪು ಮಾಡಿ ಹೆಂಡತಿ ಕೈಗೆ ಸಿಕ್ಕಿದಾಗ್ಲು ತಮಾಸಿ ಮಾಡತಿದ್ರು. ಹೆಗಡೆ ಗೌಡ ದುರಂತ ನಾಯಕರಂಗೆ ಹೆಣದ ಮುಖ ಮಾಡಿಕೊಂಡಿದ್ದಾಗ್ಲು ಪಟೇಲ್ರು ಒಂದಿಷ್ಟು ನಗರಯ್ಯ ಅಂತಿದ್ರು, ಗೊತ್ತಾ?"

"ಹೌದು ಅವರು ಯಾವುದನ್ನೂ ಸೀರಿಯಸ್ಸಾಗಿ ತಗೊಳ್ಳಲೇಯಿಲ್ಲ. ಸಾವನ್ನ ಕೂಡ ತಮಾಸಿಯಾಗೆ ತಗೊಂಡ್ರು."

"ಹೌದು. ರಾಜ್ಯಪಾಲ, ಬೊಮ್ಮಾಯಿ ಸರ್ಕಾರನ ವಜಾ ಮಾಡಿದಾಗ ಪಟೇಲ್ರು 'ಅಲೆ ಇವನು ಜೀವಂತ ಇದ್ದ ಮನುಸುನ್ನೆ ಹುಗದಾಕಿದನಲ್ಲಯ್ಯ' ಅಂದಿದ್ರು."

"ನಿಜ, ನಾನು ಕೇಳಿದ್ದೆ."

"ಅಂಥೋರ ಮಗ ಮಂತ್ರಿಯಾಗಲಿಲ್ಲ ಅಂತ ಬೇಸರ ಮಾಡಿಕೋಬಾರದಲ್ಲವೆ?"

"ಬೇಸರ ಅಲ್ಲ. ನನ್ನವೇ ಆದ ಕನಸಿದ್ವೊ. ಅವನ್ನ ಮಂತ್ರಿಯಾದ ಮೇಲೆ ಜಾರಿ ಮಾಡನ ಅಂತ ಇದ್ದೆ."

"ಇದೇನ್ ಸಾರ್ ಹಿಂಗಂತಿರಿ? ದೇವೇಗೌಡ್ರು ನೈಡುಸ್ತಾಯಿರೊ ಈ ಸರ್ಕಾರದಲ್ಲಿ ನಿಮ್ಮಂಥೋರ ಕನಸು ನನಸಾಯ್ತವಾ?"

"ಹಂಗಂತೀರಾ?"

"ಹೌದು ಸಾರ್. ನಿಮಗೆ ಒಂದು ಬಲಾಢ್ಯ ಕೋಮಿನ ಬೆಂಬಲ ಇದೆ, ಮಾತುಗಾರಿಕೆ ಇದೆ, ತುಂಬ ಓದಿಕೊಂಡೂ ಇದ್ದೀರಿ. ಅಂತ ನಿಮ್ಮಂತವರನ್ನು ದೇವೇಗೌಡ್ರು ಮಂತ್ರಿ ಮಾಡ್ತರೆ ಅಂತ ಹ್ಯಾಗೆ ತಿಳಕೊಂಡಿದ್ರಿ?"

"ಮಂತ್ರಿಯಾಗೋಕೆ ಅವೆಲ್ಲಾ ಯೋಗ್ಯತೆ ಅಲ್ಲವಾ?"

"ನೀವಂದುಕೊಂಡಿರೋದಂಗೆ! ದೇವೇಗೌಡರ ಲೆಕ್ಕದಲ್ಲಿ ಮಂತ್ರಿಯಾಗಬೇಕಾದ್ರೆ ಚಲುವರಾಯಸ್ವಾಮಿ, ಜಮೀರ, ಚನ್ನಿಗಪ್ಪ, ಜಯಕುಮಾರನಂಗಿದ್ರಾಯ್ತು."

"ಹಾಗಂತೀರಾ?"

"ಹೌದು, ಸನ್‌ಸ್ಟ್ರೋಕ್ ಜನಗಳತ್ರ ನೀವು ಅವ್ರುರ ಮಕ್ಕಳಿಗಿಂತ್ಲೂ ಪ್ರಭೆಯಾಗಿ ಕಂಡ್ರೆ ಸಯಿಸಕ್ಕಾಗುತ್ತ ಸಾರ್?"

"ಹೋಗ್ಲಿ, ಅಭಿನಂದುಸಬೇಕು ಅಂದ್ರಲ್ಲ ಯಾಕೆ?"

"ಇಂತ ಸರ್ಕಾರದೊಳಗೆ ಸೇರೊ ಯೋಗ್ಯತೆ ನನಗಿಲ್ಲವೇನೋ ಅಂದದ್ದಿರಲ್ಲ, ಅದ್ಕೆ ಅಭಿನಂದನೆಗಳು."

"ಥ್ಯಾಂಕ್ಸ್!"

"ಮಂತ್ರಿಯಾದ್ರೆ ಜನಗಳು ತುಂಬ ಗೌರವ ಕೊಡ್ತರೆ ಅನ್ನೋ ಕಾಲ ಹೋಗಿದೆ. ಹಾಗೆ ನಿಮ್ಮ ಪಾರ್ಟಿನ ಕೆಲವರು ಮೂರು ಬಾರಿ ಗೆದ್ದು ಮಂತ್ರಿಯಾಗಿಲ್ಲ, ಮಂತ್ರಿಯಾಗೊ ಹಕ್ಕನ್ನ ಪ್ರತಿಪಾದಿಸೊ ದೇವೇಗೌಡರ ಮಕ್ಕಳ ಗುಂಪಿನಿಂದ ಹೊರಬಂದು, ಒಂದೇ ಒಂದು ಗಂಟೆ ನಿಮ್ಮ ಏರಿಯಾದ ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮಿ ಬಗ್ಗೆ ಯೋಚನೆ ಮಾಡಿ, ಎಲ್ಲಾ ಸರಿಹೋಗುತ್ತೆ."

"ಥ್ಯಾಂಕ್ಸ್ ಇವರೆ."

"ಥೂತ್ತೇರಿ!!!"

-ಯಾಹೂ

ಹಾ.ರಾ. ನಾಗರಾಜ್ ಕೊಲೆ: ಕೇಸ್ ಖಲಾಸ್!

ಹಾಸನದ ಮಾಜಿ ರೌಡಿ, ಹತ್ತಾರು ಜನಪರ ಹೋರಾಟಗಳ ಸೂತ್ರಧಾರ, ಪತ್ರಕರ್ತ ಕಂ ಸಂಪಾದಕ, ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ.... ಹೀಗೆ ಹತ್ತಾರು ಅವತಾರಗಳ ಮನುಷ್ಯ ಹಾ.ರಾ. ನಾಗರಾಜ್ ಕೊಲೆಯಾಗಿ ಒಂಬತ್ತು ತಿಂಗಳಾಯಿತು. ಈ ಅವಧಿಯಲ್ಲಿ ಪೊಲೀಸರು ಏನೇನು ತನಿಖೆ ಮಾಡಿದರೋ ಏನೋ ಕೊಲೆಯಾದ ಒಂಭತ್ತನೇ ತಿಂಗಳಲ್ಲಿ ಚಾರ್ಜ್‌ಶೀಟ್‌ನ ಹೆರಿಗೆಯಾಗಿದೆ. 2005ರ ಸೆಪ್ಟೆಂಬರ್‌ನಲ್ಲಿ ಪೊಲೀಸರು ಸಲ್ಲಿಸಿದ್ದ FIRನಲ್ಲಿ A1 ಆಗಿದ್ದ ಗ್ಯಾರಳ್ಳಿ ತಮ್ಮಯ್ಯ ಅದೇ ಪೊಲೀಸರು ಚಾರ್ಜ್‌ಶೀಟ್ ಹಾಕುವ ಹೊತ್ತಿಗೆ A7 ಆಗಿ ಹಿಂಬಡ್ತಿ ಪಡೆದಿದ್ದಾನೆ. ಈ ಕೇಸು ಯಾವ ಯಾವ ಸ್ವರೂಪ ಪಡೆದು ಇದೀಗ ಎಲ್ಲಿಗೆ ಬಂದು ನಿಂತಿದೆ ಎಂಬುದರ ವಿವರವೇ ಈ ವರದಿ.





ಕೊಲೆಯಾದ ಹಾ.ರಾ.ನಾಗರಾಜ್ ಮತ್ತು ಅಂತಿಮ ದರ್ಶನ ಪಡೆಯುತ್ತಿರುವ ಸಾರ್ವಜನಿಕರು

ಹಾ.ರಾ. ನಾಗರಾಜ್ ಹತ್ಯೆಯ ಪ್ರಮುಖ ರೂವಾರಿಯಾಗಿದ್ದ ಆರೋಪಿ ಹಾಸನದ ಬಡ್ಡಿ ದೊರೆ ಕಂ SVM ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎಂಬ ಅಪವಾದ ಹೊತ್ತ ಗ್ಯಾರಳ್ಳಿ ತಮ್ಮಯ್ಯ ಇದೀಗ ಜಾಮೀನಿನ ಮೇಲೆ ಹೊರಬಂದು ಸಂತೃಪ್ತನಾಗಿದ್ದಾನೆ.

ನ್ಯಾಯಾಲಯದ ಕಟಕಟೆಯಲ್ಲಿ ನಿಂತು "ನಾವು ಸತ್ಯವನ್ನು ಹೇಳುತ್ತೇವೆ. ಸತ್ಯವನ್ನಲ್ಲದೇ ಬೇರೇನು ಹೇಳುವುದಿಲ್ಲ" ಎಂದು ಪ್ರಮಾಣ ಮಾಡಿದ ಅಷ್ಟೂ ಸಾಕ್ಷಿಗಳು ಸಹ ಕಬ್ಬಿಣದ ಕಡಲೆಯಂತಹ ಸತ್ಯವನ್ನು ಹೇಳಿದರಾ ಎಂಬ ಪ್ರಶ್ನೆ ಹಾಗೇ ಉಳಿದುಬಿಟ್ಟಿದೆ.

ಅದು 61 ಸಾಕ್ಷಿಗಳ ಕೇಸು

ಹಾ.ರಾ.ನಾಗರಾಜ್‌ನನ್ನು ಕಾರಣವೇ ಅಲ್ಲದ ಕಾರಣಕ್ಕೆ ಕೊಲೆ ಮಾಡಿ ತಲೆ ತಪ್ಪಿಸಿಕೊಂಡ ಗ್ಯಾರಳ್ಳಿ ತಮ್ಮಯ್ಯ ಮತ್ತು ಆತನ ಪಾತಕಿ ಪಡೆಯನ್ನು ಅಕ್ಷರಶಃ ಕಾಪಾಡಿದ್ದು ಮಾತ್ರ ಈ ಜಿಲ್ಲೆಯ ನಟೋರಿಯಸ್ ರಾಜಕಾರಣಿಗಳು ಎಂಬುದು ಬಹಿರಂಗ ಸತ್ಯ.

ಅದಕ್ಕಾಗಿ ಸೃಷ್ಟಿಸಿದ್ದು ಕೇವಲ 61 ಸಾಕ್ಷಿಗಳನ್ನು. ಹಾ.ರಾ. ನಾಗರಾಜ್ ವಿರೋಧಿಗಳೂ ಸೇರಿದಂತೆ ಗ್ಯಾರಳ್ಳಿ ತಮ್ಮಯ್ಯನ ಮನೆಯ ಕೆಲಸಗಾರರನ್ನು ಒಳಗೊಂಡ ಹಾಗೂ ನಂಬಿಕಸ್ತ ಪೊಲೀಸರನ್ನೊಳಗೊಂಡ ಪಟ್ಟಿಯೇ ಆ ಸಾಕ್ಷಿಗಳು.

ಈಗಾಗಲೇ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿರುವ ಎಲ್ಲರೂ "ಆ ಸರಿ ರಾತ್ರಿಯಲ್ಲಿ ಯಾರು ಕೊಲೆ ಮಾಡಿದರು ಎಂದು ತಮಗೆ ಗೊತ್ತಿಲ್ಲ. ತಮ್ಮಯ್ಯ ಅಂತಹ ಮನುಷ್ಯನೇ ಅಲ್ಲ. ಅವರು ಎಲ್ಲಿ? ಕೊಲೆ ಎಲ್ಲಿ? ಅಕಟಕಟ. ಅವರು ತುಂಬಾ ಮರ್ಯಾದಸ್ಥರು" ಎಂದು ಹೇಳಿದ್ದಾರೆ. ಒಂದು ಹಂತದಲ್ಲಿ ಸಾಕ್ಷಿ ನುಡಿಯುತ್ತಾ "ಯಾರನ್ನು ಕೊಲೆ ಮಾಡಿದ್ದಾರೆ ಎಂಬುದೇ ಕಾಣುತ್ತಿರಲಿಲ್ಲ, ಸದ್ಯ ನಾವು ಬದುಕಿದೆವು" ಎಂಬಂತೆ ಸಾಕ್ಷಿ ಹೇಳುತ್ತಿದ್ದರೆ, ಸತ್ತ ಹಾ.ರಾ.ನಾಗರಾಜನ ಆತ್ಮ ತನ್ನ ಕೊಲೆಯ ನ್ಯಾಯಕ್ಕೆ ಇಂತಹ ಹೀನಾಯ ಸ್ಥಿತಿ ಬಂದಿತಲ್ಲಾ ಎಂದು ರೋಧಿಸಿರಬೇಕು.


ಈ ಕೇಸು ಹಳ್ಳ ಹತ್ತಲಿದೆ ಎಂಬ ಮೆಸೇಜು ರವಾನೆಯಾಗಿದ್ದೆ ಪೊಲೀಸ್ ಠಾಣೆಯಿಂದ ದೋಷಾರೋಪ ಪಟ್ಟಿ ಹೊರಬಿದ್ದಾಗ. ತಮ್ಮಯ್ಯ ಹಾಗೂ ಆತನ ಗ್ಯಾಂಗನ್ನು ರಕ್ಷಿಸುವ ಪ್ರಥಮ ಪ್ರಯತ್ನ ಪೊಲೀಸ್ ಇಲಾಖೆಯಿಂದ ಪ್ರಾರಂಭವಾದಾಗ.

ಹಾ.ರಾ. ನಾಗರಾಜ್ ಹತ್ಯೆಯ ರೂವಾರಿಗಳನ್ನು ಬಂಧಿಸುವಂತೆ ಒತ್ತಡ ಹೆಚ್ಚಾದಾಗ ಮೊದಲು ಮೂವರು ಆರೋಪಿಗಳನ್ನು ಬಂಧಿಸಿ ಅವರ ಫೋಟೋ ತೆಗೆಸಿ ಪತ್ರಕರ್ತರೆದುರು ಪೋಸು ಕೊಡಿಸಿತ್ತು ಪೊಲೀಸ್ ಇಲಾಖೆ. ಅನಂತರ ಪ್ರಮುಖ ಆರೋಪಿ ಗ್ಯಾರಳ್ಳಿ ತಮ್ಮಯ್ಯನನ್ನು ನಾಟಕೀಯವಾಗಿ ಕರೆತಂದು, ಆತನಿಗೆ ರಾಜೋಪಚಾರ ನೀಡಿ, ಸ್ವತಂತ್ರ ಹೋರಾಟಗಾರರನ್ನು ಜೈಲಿಗೆ ಕಳುಹಿಸುತ್ತಿರುವಂತೆ ವರ್ತಿಸಿತ್ತು ಇದೇ ಇಲಾಖೆ. ಕೊನೆ ಪಕ್ಷ ಆತನ ಒಂದು ಫೋಟೋವನ್ನು ಪತ್ರಿಕೆಗಳಿಗೆ ನೀಡದೆ ತಮ್ಮಯ್ಯನ ಬೆಂಗಾವಲಿಗೆ ನಿಂತಿತ್ತು. ಮಾತ್ರವಲ್ಲ ಕೊಲೆಯಾದವನ ಕುಟುಂಬಕ್ಕೆ ನೀಡಬೇಕಿದ್ದ ಪೊಲೀಸ್ ರಕ್ಷಣೆಯನ್ನು ತಮ್ಮಯ್ಯನ ಆಸ್ತಿಗಳಿಗೆ ನೀಡಿತ್ತು.



ಎಚ್.ಡಿ.ರೇವಣ್ಣ

ಅತ್ತ ಜೈಲಿಗೆ ಹೋದ ಗ್ಯಾರಳ್ಳಿ ತಮ್ಮಯ್ಯ ನೇರವಾಗಿ ಆಸ್ಪತ್ರೆ ಪಾಲಾದ. ಸುಮಾರು ಎರಡು ತಿಂಗಳು ಆಸ್ಪತ್ರೆಯಲ್ಲಿ ರಾಜೋಪಚಾರ ಪಡೆದ ತಮ್ಮಯ್ಯ ಮುಂಜಾನೆ ಐದು ಗಂಟೆಗೆ ನಗರದಲ್ಲಿ ವಾಕಿಂಗ್ ಹೋಗುತ್ತಿದ್ದ. ಹೀಗಿತ್ತು ಪೊಲೀಸ್ ವ್ಯವಸ್ಥೆ!



ಗ್ಯಾರಳ್ಳಿ ತಮ್ಮಯ್ಯ

ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿದ್ದ FIR ಪ್ರಕಾರ ಇಡೀ ಕೇಸಿಗೆ ಗ್ಯಾರಳ್ಳಿ ತಮ್ಮಯ್ಯ ಪ್ರಮುಖ ಆರೋಪಿ. ಆತ A1. ಆದರೆ ಕೊಲೆಯಾದ ಮೂರು ತಿಂಗಳ ನಂತರ ಇಲಾಖೆ ನ್ಯಾಯಾಲಯಕ್ಕೆ ಸಲ್ಲಿಸಿದ ದೋಷಾರೋಪಣ ಪತ್ರದಲ್ಲಿ ಅದೇ ಗ್ಯಾರಳ್ಳಿ ತಮ್ಮಯ್ಯ A7! ಅಷ್ಟೇ ಅಲ್ಲ "ಆತ ಕೊಲೆಗೆ ಕುಮ್ಮಕ್ಕು ನೀಡಿರಲಿಲ್ಲ ಮತ್ತು ಆತ ಬಂದು ಹಾ.ರಾ. ನಾಗರಾಜ್‌ಗೆ ಚಾಕುವಿನಿಂದ ತಿವಿಯಲಿಲ್ಲ. ಆತ ಕೇವಲ ನಾಗರಾಜನ ಕಾಲಿಗೆ ಹೊಡೆಯಿರಿ, ಕಾಲಿಗೆ ಹೊಡೆಯಿರಿ ಎಂದು ಉತ್ತೇಜನ ನೀಡುತ್ತಿದ್ದ" ಎಂದು ದೋಷಾರೋಪಣ ಪಟ್ಟಿಯಲ್ಲಿ ಶರಾ ಬರೆದುಬಿಟ್ಟಿದ್ದಾರೆ. ಒಂದು ಕೊಲೆ ಕೇಸು ಸಾಯಲು ಇದಕ್ಕಿಂತ ಮತ್ತೇನು ಬೇಕು.

ನಾಗರಾಜ್ ಬೆಲೆ 29 ಲಕ್ಷ

ಯಾವಾಗ ಇಡೀ ವ್ಯವಸ್ಥೆಯೇ ಒಬ್ಬ ಕೊಲೆ ಆರೋಪಿಯೊಂದಿಗೆ ಕೈ ಮಿಲಾಯಿಸುತ್ತದೋ ಆಗ ಯಾರ ಹೋರಾಟ, ಯಾರ ಕೂಗು ಎಲ್ಲಿಗೆ ಮುಟ್ಟುತ್ತದೆ. ಹಾ.ರಾ. ನಾಗರಾಜ್ ಕುಟುಂಬದ ಕತೆಯೂ 'ನರಿಯ ಕೂಗು ಗಿರಿಗೆ ಮುಟ್ಟುತ್ತಾ' ಎಂಬಂತಾಗಿದೆ. ಆದ್ದರಿಂದ ಅವರಿಗೆ ಉಳಿದ ಕೊನೆಯ ದಾರಿ ಸಂಧಾನ.

ನ್ಯಾಯಾಲಯದಲ್ಲಿ ಸಾಕ್ಷಿ ಹೇಳುವ ಸಮಯ ಬಂದಿತ್ತು. ಪೊಲೀಸ್ ವ್ಯವಸ್ಥೆ ಎಷ್ಟೆಲ್ಲಾ ಪ್ರಯತ್ನ ಪಟ್ಟರೂ ಗ್ಯಾರಳ್ಳಿ ತಮ್ಮಯ್ಯನನ್ನು ಕಾಪಾಡಲು ಹೆಣಗುತ್ತಿದ್ದರು. ಸಾಕ್ಷಿಗಳ ಸಾಕ್ಷಿ ಎಲ್ಲಿ ತನ್ನನ್ನು ಮುಳುಗಿಸುತ್ತದೋ ಎಂಬ ಭಯ ಸ್ವತಃ ತಮ್ಮಯ್ಯನಿಗೆ ಕಾಡಲಾರಂಭಿಸಿತ್ತು. ಆಗ ತನ್ನ ಆತ್ಮೀಯರ ಮುಖಾಂತರ ತಮ್ಮಯ್ಯ ಸಂಧಾನಕ್ಕೆ ಆಹ್ವಾನಿಸಿದ್ದು ಹಾ.ರಾ.ನಾಗರಾಜನ ಗಳಸ್ಯ ಕಂಠಸ್ಯ ಎಂಬಂತಿದ್ದ ಹಾಗೂ ಕೊಲೆ ಕೇಸಿನಲ್ಲಿ ಸಾಕ್ಷಿಯಾಗಿದ್ದ ಬಾಳ್ಳು ಗೋಪಾಲ್ ಎಂಬುವವರನ್ನು. ಅಂತಿಮವಾಗಿ ನಗರದ ಹೋಟೇಲ್ 'ಸುಮುಖ'ದಲ್ಲಿ ಸಭೆ ನಡೆದು ರಾಜಿ ಸಂಧಾನವಾದಾಗ ಹಾ.ರಾ. ನಾಗರಾಜನ ಮಕ್ಕಳಾದ ಪ್ರಶಾಂತ್ ಮತ್ತು ನವೀನ್ ಗ್ಯಾರಳ್ಳಿ ತಮ್ಮಯ್ಯನ ಅಕ್ಕಪಕ್ಕ ಕುಳಿತಿದ್ದರು ಮತ್ತು ಡೀಲು 29 ಲಕ್ಷಕ್ಕೆ ತೀರ್ಮಾನವಾಗಿತ್ತು.

ಈ ಆಶ್ಚರ್ಯಕರ ತಿರುವಿಗೆ ಸ್ವತಃ ಹಾ.ರಾ. ನಾಗರಾಜನ ಅಭಿಮಾನಿಗಳು ದಂಗಾಗಿದ್ದರು. ಸಾಕ್ಷಿಗಳು ತಮ್ಮ ಪಾಲು ಪಡೆದರೆಂಬ ಗುಮಾನಿಯೂ ಆವರಿಸಿತು. ಅಂದು ನಾಗರಾಜನ ಕೊಲೆಯಾದಾಗ ಇಡೀ ಊರು ಬಂದ್ ಆಗಿತ್ತು. ಹಾಸನ ಉದ್ವಿಗ್ನವಾಗಿತ್ತು. ರಾಜ್ಯ ಮಟ್ಟದಲ್ಲಿ ಪ್ರತಿಕ್ರಿಯೆಗಳು ವ್ಯಕ್ತವಾಗಿದ್ದವು. ಅಂತಹ ಒಂದು ಕೊಲೆ ಕೇಸು 29 ಲಕ್ಷಕ್ಕೆ ಮಾರಾಟವಾಗಿತ್ತು!



ಇನ್ಸ್‌ಪೆಕ್ಟರ್ ಜಗದೀಶ್

ಹುಂಬನಾಗಿದ್ದ ಹಾ.ರಾ. ನಾಗರಾಜನ ಸಾವಿನ ಬೆಲೆ 29 ಲಕ್ಷ! ಇದೇಕೆ ಹೀಗೆ ಎಂದು ಹುಡುಕುತ್ತಾ ಹೊರಟ ಪತ್ರಿಕೆಗೆ ತಿಳಿದ ವಿಚಾರ ಆಶ್ಚರ್ಯಕರವಾದರೂ ನಗ್ನ ಸತ್ಯವಾಗಿತ್ತು.

ಹಾ.ರಾ. ನಾಗರಾಜ್ ರೌಡಿಸಂನಿಂದ ಹೊರ ಬಂದಿದ್ದರೂ, ಹೋರಾಟಗಳನ್ನು ಮಾಡುತ್ತಿದ್ದರೂ ಆತನನ್ನು ಕಂಡ ಜನ ಇವ ಕೆಟ್ಟವ, ಇವ ಕೆಟ್ಟವ ಎಂದೇ ಹೇಳುತ್ತಿದ್ದರು. ಅದಕ್ಕಾಗಿ ಸರಿಯಾಗಿ ಸ್ವತಃ ಹಾ.ರಾ. ನಾಗರಾಜ್ ಮೈತುಂಬ ಒಡವೆಗಳನ್ನು ಹಾಕಿಕೊಂಡು, ಕೈಯಲ್ಲಿ ದಪ್ಪ ದಪ್ಪ ಚಿನ್ನದ ಚೈನು ಹಾಕಿಕೊಂಡು ಪೋಸು ಕೊಡುತ್ತಿದ್ದ. ದುರಂತದ ವಿಚಾರವೆಂದರೆ ಆಯಪ್ಪ ಮೈತುಂಬ ಚಿನ್ನದ ಒಡವೆ ಹಾಕುತ್ತಿದ್ದರೂ ಮೈ ತುಂಬ ಬೆಟ್ಟದಷ್ಟು ಸಾಲವಿತ್ತು. ಹೋಗಲಿ ಆಸ್ತಿ ಮಾಡಿದನಾ ಎಂದರೆ ಅದೂ ಇಲ್ಲ. ಮೂವರು ಗಂಡು ಮಕ್ಕಳಿಗೆ ಹಾ.ರಾ. ನಾಗರಾಜ್ ಬಿಟ್ಟು ಹೋಗಿದ್ದು ಬರೋಬರಿ ಮೂವತ್ತು ಲಕ್ಷಗಳ ಸಾಲ!

ಇದ್ದ ಮನೆ ಮೇಲೆಯೇ 22 ಲಕ್ಷದಷ್ಟು ಸಾಲ. ಅದೂ ಸಾಲ ಕೊಟ್ಟಿದ್ದ ಬ್ಯಾಂಕಿನವರು ಮನೆಯನ್ನು ಹರಾಜಿಗೆ ತಂದು ನಿಲ್ಲಿಸಿದ್ದರು. ಇದ್ದ ಕಾರು, ಸ್ಕಾರ್ಪಿಯೋ ಜೀಪು ಎಲ್ಲವೂ ಸಾಲ. ಹಾ.ರಾ.ನಾಗರಾಜ್ ಕೊಲೆಯಾದಾಗ ಅವನ ಬಳಿಯಿದ್ದದ್ದು ಕೇವಲ 10 ಸಾವಿರ ಮಾತ್ರ.

ಹಾ.ರಾ.ನಾಗರಾಜ್ ಹತ್ಯೆಯಾಗಿ 11ನೇ ದಿನಕ್ಕೆ ನಡೆಯಬೇಕಾದ ಕಾರ್ಯಕ್ಕೆ ಹಣವಿಲ್ಲದಿದ್ದಾಗ ಹಣ ನೀಡಿ ಸಹಾಯ ಮಾಡಿದವರು ನಗರದ ಪಿಕ್ಚರ್ ಪ್ಯಾಲೇಸ್ ಮಾಲೀಕರಾದ ಗುರುಪ್ರಸಾದ್, ನಗರಸಭೆಯ ಅಂದಿನ ಅಧ್ಯಕ್ಷ ಜಿ.ಟಿ.ಕುಮಾರ್ ಹಾಗೂ ಚನ್ನಪಟ್ಟಣದ ಶಂಕರ್.



ಗಂಡಸಿ ಶಿವರಾಮ್

ಇದ್ದ ಜ್ಞಾನದೀಪ ಪತ್ರಿಕೆಯ ಮಾಲೀಕತ್ವವನ್ನು ಹಾ.ರಾ.ನಾಗರಾಜ್ ಸತ್ತ ಮರುದಿನವೇ ಕಿತ್ತುಕೊಂಡವನು ಅವನ ಅಂದಕಾಲತ್ತಿನ ಗೆಳೆಯ ಬಿ.ಜಿ.ಮಣಿ. ಇತರೆ ಸ್ನೇಹಿತರು ನಾಗರಾಜನಿಂದ ಪಡೆದಿದ್ದ ದುಡ್ಡಿಗೆ ಪಂಗನಾಮ ಇಟ್ಟರು. ಹೀಗೆ ಮೇಲಿಂದ ಮೇಲೆ ಹೊಡೆತ ತಿಂದ ನಾಗರಾಜನ ಕುಟುಂಬ ಬೇರೆ ದಾರಿ ಇಲ್ಲದೆ ಇಂತಹದೊಂದು ರಾಜಿ ಸಂಧಾನ ಮಾಡಿಕೊಂಡಿತಾ? ಇವರ ಈ ಕಷ್ಟಗಳೇ ಗ್ಯಾರಳ್ಳಿ ತಮ್ಮಯ್ಯನಿಗೆ ವರವಾಯಿತಾ?

ಸಧ್ಯದ ಪರಿಸ್ಥಿತಿಯಲ್ಲಿ ಹಾ.ರಾ. ನಾಗರಾಜ್ ಕುಟುಂಬ ತಣ್ಣಗಾಗಿದೆ. ಆದರೆ ಗ್ಯಾರಳ್ಳಿ ತಮ್ಮಯ್ಯ ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡರೆ ನೂರುವರ್ಷ ಆಯಸ್ಸು ಎಂಬಂತೆ ಲಕಲಕ ಹೊಳೆಯುತ್ತಿದ್ದಾನೆ.

ಗ್ಯಾರಳ್ಳಿ ನೆತ್ತಿಯ ಮೇಲೆ ತೂಗು ಕತ್ತಿ

ಹಾಸನದ ಬಡ್ಡಿ ದೊರೆ ಗ್ಯಾರಳ್ಳಿ ತಮ್ಮಯ್ಯ ಹಾ.ರಾ. ನಾಗರಾಜನ ಹತ್ಯೆ ಮಾಡಿರುವ ಆರೋಪ ಹೊತ್ತಿದ್ದರೂ ನ್ಯಾಯಾಲಯದಿಂದ ಹಾಗೂ ಹಾ.ರಾ. ನಾಗರಾಜ್ ಕುಟುಂಬದಿಂದ ಬಚಾವಾಗಬಹುದು. ಹಾ.ರಾ.ನಾಗರಾಜ್ ಕುಟುಂಬದೊಂದಿಗೆ ಮಾಡಿಕೊಂಡಿರುವ ರಾಜೀ ಸಂಧಾನದ 29 ಲಕ್ಷ ಹಣ ತಮ್ಮಯ್ಯನಿಗೆ ಭವಿಷ್ಯದಲ್ಲಿ ಯಾವುದೇ ಸಮಸ್ಯೆ ತಂದೊಡ್ಡದೇ ಇರಬಹುದು. ಆದರೆ ಅಸಲಿ ತೊಂದರೆಯಿರುವುದು ಗ್ಯಾರಳ್ಳಿ ತಮ್ಮಯ್ಯನ ಹಂತಕರ ಪಡೆಯಿಂದಲೇ ಎಂಬುದೀಗ ಇಂಟರೆಸ್ಟಿಂಗ್ ಸ್ಟೋರಿ.

ತಮ್ಮಯ್ಯನೊಂದಿಗೆ ನಾಗರಾಜನ ಕೊಲೆ ಕೇಸಿನಲ್ಲಿ ಜೈಲು ಪಾಲಾದವರು ಸರಿಸುಮಾರು 14 ಜನ. ಅವರಲ್ಲಿ ತಮ್ಮಯ್ಯ ಮತ್ತು ಆತನ ಅಕ್ಕನ ಮಗ ಇಬ್ಬರಿಗೆ ಮಾತ್ರ ಜಾಮೀನು ಸಿಕ್ಕಿ ಹೊರಬಂದಿದ್ದಾರೆ. ಇದು ಉಳಿದವರಲ್ಲಿ ಅಸಮಾಧಾನದ ಕಿಡಿ ಸಿಡಿಯುವಂತೆ ಮಾಡಿದೆ. ಅವರೆಲ್ಲ ತಮ್ಮಯ್ಯನ ಮೇಲೆ ಕುದಿಯುತ್ತಿದ್ದಾರೆ.

ಇದ್ದ 14 ಜನ ಹಂತಕರಲ್ಲಿ ಎಲ್ಲರೂ ಹಂತಕರಲ್ಲ, ಹಾಗೂ ಯಾರೊಬ್ಬರೂ ಗ್ಯಾರಳ್ಳಿ ತಮ್ಮಯ್ಯನ ಮೇಲೆ ಅಭಿಮಾನವಿಟ್ಟು ಅವನೊಂದಿಗೆ ಹತ್ಯೆಗೆ ಹೋದವರಲ್ಲ. ಎಲ್ಲರೂ ಬಹುತೇಕ ಹಣದ ಆಸೆಗೆ ಬಿದ್ದು ಈ ಕೇಸಿನಲ್ಲಿ ಫಿಟ್ ಆಗಿ ಜೈಲು ಸೇರಿದವರು. ಯಾವಾಗ ತಮ್ಮಯ್ಯ ಜೈಲಿನಿಂದ ಜಾಮೀನು ಪಡೆದು ಹೊರಬಂದನೋ ಅಂದೇ ಉಳಿದ 14 ಜನ ಆರೋಪಿಗಳಲ್ಲಿ ಎರಡು ಬಣಗಳಾಗಿವೆ. ಒಂದು ಬಣ ವಲ್ಲಭ್‌ಬಾಯಿ ರಸ್ತೆ ಹುಡುಗರದ್ದಾಗಿದ್ದರೆ, ಮತ್ತೊಂದು ಬಣ ದಾಸರಕೊಪ್ಪಲು ಹುಡುಗರದ್ದಾಗಿದೆ. ಎರಡೂ ಕಡೆಯವರು ಮಾರಾಮಾರಿ ಮಾಡಿಕೊಂಡು ಜೈಲಿನಿಂದ ಆಸ್ಪತ್ರೆಗೆ ಬಂದು ಹೋಗಿದ್ದಾರೆ.

ತಮ್ಮಯ್ಯನ ಮನೆಗೆ ಕಲ್ಲು

ಅಸಲಿಗೆ ತಮ್ಮಯ್ಯನಿಗೆ ಜೀವ ಬೆದರಿಕೆ ಇರುವುದು ನಾಗರಾಜ್ ಕುಟುಂಬದಿಂದಲ್ಲ. ಏಕೆಂದರೆ ಅವರನ್ನು ಸರಿದೂಗಿಸಿಯಾಗಿದೆ. ಇದೀಗ ತೊಂದರೆಯಿರುವುದು ತನ್ನದೇ ಹುಡುಗರಿಂದ. ಏಕೆಂದರೆ ಸಾವಿರಾರು ಜನರಿಗೆ ಬಡ್ಡಿಗೆ ಹಣ ಕೊಟ್ಟು, ಅದೆಷ್ಟೋ ಮನೆ, ಮಠ, ಮಾನ, ಪ್ರಾಣ ಎಲ್ಲವನ್ನು ಕಿತ್ತು ತಿಂದವನನ್ನು ಮುಕ್ಕಲು ಅವನದೇ ಪಡೆ ಸಜ್ಜಾಗಿ ಕುಳಿತಿದೆ. ಬಹುಶಃ ಅವರ ಬೇಡಿಕೆಗಳನ್ನು ಈಡೇರಿಸುವುದು ನಾಗರಾಜ್ ಕುಟುಂಬವನ್ನು ತಣ್ಣಗಾಗಿಸಿದ್ದಕ್ಕಿಂತ ಹೆಚ್ಚು ಕಷ್ಟಕರವೆಂಬುದು ಇದೀಗ ತಮ್ಮಯ್ಯನಿಗೆ ಅರಿವಾಗಿರಬೇಕು.

ಜೈಲಿನಲ್ಲಿರುವ ಹುಡುಗರ ಮನೆಗಳಿಗೆ ಪ್ರತಿ ತಿಂಗಳು 10 ಸಾವಿರ ಕೊಡುವುದಾಗಿ ತಮ್ಮಯ್ಯ ಭರವಸೆ ಕೊಟ್ಟಿದ್ದ. ಇತ್ತೀಚೆಗೆ ಪ್ರಕರಣದಲ್ಲಿ ಆರೋಪಿಯಾಗಿ ಜೈಲಿನಲ್ಲಿರುವ ದಾಸರಕೊಪ್ಪಲಿನ ರಘು ಉರುಫ್ ಬಕಾಡಿಯ ತಂದೆ ಕೃಷ್ಣೇಗೌಡರು ತಮ್ಮ ಮನೆಯ ಸಮಸ್ಯೆ ಹೇಳಿಕೊಂಡು 10 ಸಾವಿರ ಕೇಳಲು ಹೋದರೆ ತಮ್ಮಯ್ಯ ಅವರ ವಿರುದ್ಧವೇ ತಿರುಗಿ ಬಿದ್ದಿದ್ದಾನೆ. "ನಿನ್ನ ಮಗನನ್ನು ಸರಿಯಾಗಿ ಸಾಕಲು ಯೋಗ್ಯತೆ ಇಲ್ಲದೆ ನನ್ನ ಬಳಿಗೆ ಕಳುಹಿಸಿ ಈಗ ಹಣ ಕೇಳಲು ಬಂದಿದ್ದೀಯಾ" ಎಂದು ಹೀನಾಮಾನವಾಗಿ ಬೈದು ಕಳುಹಿಸಿದ್ದಾನೆ. ಈ ವಿಷಯ ಜೈಲಿನಲ್ಲಿರುವ ಬಕಾಡಿಗೂ ಇತರ ಚೇಲಾಗಳಿಗೂ ತಿಳಿದಿದೆ. ಈ ವಿಚಾರ ರಘು ಸಹೋದರ ಜಗ್ಗನಿಗೆ ತಿಳಿದು ಕೂಡಲೇ ಅವನು ತಮ್ಮಯ್ಯನ ಮನೆಗೆ ಬಂದರೆ ಅಲ್ಲಿ ಮನೆಯೊಳಗಿದ್ದರೂ ಇಲ್ಲ ಎನಿಸಿಕೊಂಡಿದ್ದಾನೆ. ಕೈಗೆ ಸಿಕ್ಕ ಕಲ್ಲುಗಳಿಂದ ತಮ್ಮಯ್ಯನ ಮನೆಯ ಕಿಟಕಿಗಳನ್ನು ಒಡೆದು ಬಂದಿದ್ದಾನೆ ಜಗ್ಗ.

ಈ ವಿಚಾರಕ್ಕೂ ಪೊಲೀಸರಿಗೆ

(13 ನೇ ಪುಟಕ್ಕೆ)

ಒಂದೆಡೆ ಲೋಕಾಯುಕ್ತ ವೆಂಕಟಾಚಲ ರೇಡು ನಡೆಸಿ ಕೋಟಿ ಕೋಟಿ ಆಸ್ತಿ ಪತ್ತೆ ಹಚ್ಚುತ್ತಿದ್ದಾರೆ. ಮತ್ತೊಂದೆಡೆ ಅವರ ಮಗ ವಕೀಲ ವೇದಾಚಲ ಇತ್ತೀಚೆಗೆ ಸದಾಶಿವನಗರದಲ್ಲಿ ಒಂದು ಬಂಗಲೆ ಖರೀದಿಸಿದ್ದಾರೆ. ಅದರ ಮಾರುಕಟ್ಟೆ ಬೆಲೆ 4.5 ಕೋಟಿ ರೂಪಾಯಿಗಳು! ಇಷ್ಟು ಹಣ ವೇದಾಚಲರಿಗೆ ಎಲ್ಲಿಂದ ಬಂತು?



ವೆಂಕಟಾಚಲರ 'ಮಕ್ಕಳ ರಾಜ್ಯ'!

ಸುಪ್ರೀಂಕೋರ್ಟ್ ನ್ಯಾಯಪೀಠದಿಂದ ನಿವೃತ್ತಿ ಪಡೆದುಕೊಂಡು ಬೆಂಗಳೂರಿಗೆ ಮರಳಿದ ಜಸ್ಟೀಸ್ ವೆಂಕಟಾಚಲರು ತಮ್ಮ ಸ್ವಯಾರ್ಜಿತ ನಿವಾಸವಾದ 'ವೆಂಕಟಾದ್ರಿ', ನಂ. 38/39, ಲೋಯರ್ ಪ್ಯಾಲೇಸ್ ಆರ್ಚಿಡ್ಸ್ ವಿಳಾಸದಲ್ಲಿ ನೆಲೆಯೂರಿದ್ದರು. ವಕೀಲಿ ವೃತ್ತಿಗೆ ಸಮರ್ಪಿಸಿಕೊಂಡಿರುವ ಅವರ ಇಬ್ಬರು ಗಂಡುಮಕ್ಕಳ ಪೈಕಿ ಈ ವೇದಾಚಲ ಯಾವತ್ತೂ ತಂದೆಯ ಜೊತೆಗೆ ವಾಸಿಸುತ್ತಾ ಬಂದಿದ್ದು ಬಹುತೇಕ ರಿಯಲ್ ಎಸ್ಟೇಟ್ ವ್ಯವಹಾರಗಳ ಸೆಟ್ಲ್‌ಮೆಂಟ್ ಕೇಸುಗಳನ್ನು ಅಥವಾ arbritration ವಹಿವಾಟುಗಳನ್ನೇ ಹೆಚ್ಚಾಗಿ ಹಚ್ಚಿಕೊಂಡಿದ್ದರು. ಅವರ ಸೋದರ ಶೇಷಾಚಲ ಮಾತ್ರ ಅದೇ ಬಂಗ್ಲೆಯ ಒಂದು ಮೂಲೆಯಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಿದ್ದು ಸಾಂಪ್ರದಾಯಿಕ ವಕೀಲಿಗಿರಿಯನ್ನೇ ಪಾಲಿಸುತ್ತಾ ಬಂದಿದ್ದಾರೆ. ನವೀಕರಿಸಲ್ಪಟ್ಟ ಹಳೆಯ ಬಂಗ್ಲೆಯೇ ವೆಂಕಟಾಚಲರ ಮನೆ ಮತ್ತು ಕಚೇರಿ ಎರಡೂ ಆಗಿತ್ತು.

ಕಂಟ್ರಾಕ್ಟರ್ ನಾಗರಾಜ್ ಎಂಬ ಆವಾಂತರಕಾರಿ ಗುತ್ತಿಗೆದಾರನೊಬ್ಬ ಕಳೆದ 5 ವರ್ಷಗಳಿಂದಲೂ ನಿರಂತರವಾಗಿ ಲೋಕಾಯುಕ್ತ ಕಟ್ಟಡದ ವಿವಿಧ ರಿಪೇರಿ ಕೆಲಸಗಳನ್ನು ನಿರ್ವಹಿಸುತ್ತಾ ಅವರ ಅಧಿಕೃತ ಕಾರಿನಲ್ಲೇ ಓಡಾಡುವಷ್ಟು ನಿಕಟವರ್ತಿ ಎನಿಸಿರುವುದು ಲೋಕಾಯುಕ್ತರ ಆಪ್ತ ವಲಯದಲ್ಲಿ ನಿತ್ಯ ಕಿರಿಕಿರಿ ಉಂಟು ಮಾಡುತ್ತಾ ಬಂದ ನಿಗೂಢ ಸಂಬಂಧವಾಗಿತ್ತು.

ಹಣ ಎಲ್ಲಿಂದ ಬಂತು

ವೆಂಕಟಾಚಲರ ಮಗ ಖರೀದಿಸಿದ ಬಂಗಲೆ 4.5 ಕೋಟಿ!

...ವಿರುವ ಜೂನ್ 30 ಕ್ಕೆ ಅವಧಿ ತೀರಿಸಲಿರುವ ...ನ್ನ ಲೋಕಾಯುಕ್ತ ಜಸ್ಟೀಸ್ ವೆಂಕಟಾಚಲರ ...ಂಬ ವಿದಾಯದ ಅವಸರದಲ್ಲಿ ಮಾಡಿದ ಹೊಸ ...ಖರೀದಿಯ ವೃತ್ತಾಂತವಿಲ್ಲಿದೆ.

...ನ್ನೆಯಷ್ಟೇ ಮೂವರು ಭ್ರಷ್ಟ ಅಧಿಕಾರಿಗಳ 35 ...ಟಿ ರೂಪಾಯಿ ಅಕ್ರಮ ಆಸ್ತಿ ಪತ್ತೆಹಚ್ಚಿ ಯಥಾ ...ತೆ ಮಾಧ್ಯಮಗಳಲ್ಲಿ ರೋಮಾಂಚನವನ್ನುಂಟು ...ದ ಜಸ್ಟೀಸ್ ವೆಂಕಟಾಚಲರ ಕಟ್ಟಕಡೆಯ ರೇಡ್ ... ಸ್ಫೋಟಗೊಳ್ಳುತ್ತಿದ್ದಂತೆಯೇ, 'ಪತ್ರಿಕೆ' ಇಲ್ಲಿ ...ಸುತ್ತಿರುವ ಅವರದ್ದೇ ಕುಟುಂಬದ ಈ ರಿಯಲ್ ...ಟ್ ವ್ಯವಹಾರ ರೋಚಕವಾಗಿದೆ, ಅಷ್ಟೇ ಅಲ್ಲ ...ತ ಮಯವೂ ಆಗಿದೆ.

...ಮತ್ತು ಕರ್ನಾಟಕದ ಮಾಧ್ಯಮಗಳಲ್ಲಿ ...ಂತ ದಂತಕತೆ (Living legend)ಯಾಗಿ, ...ಶಾ ವರ್ಷದ ...ಗನಾಗಿ, ...ಕರ ಬಿರುದು ...ಲಿಗಳ ಸಮೇತ ...ಜನಿಕರ ...ದರಗಳನ್ನು ...ವಿಸಿ ...ಯಾಗುತ್ತಿರುವ ... ಲೋಕಾಯುಕ್ತರು ತಮ್ಮ ...ದರೆಗಿನ ಲೋಯರ್ ...ಸ್ ಆರ್ಚಿಡ್ಸ್‌ನಲ್ಲಿದ್ದ ...ರ್ಜಿತ ಆಸ್ತಿಗೆ ಅಪ್ಪರ್ ...ಸ್ ಆರ್ಚಿಡ್ಸ್‌ನ ಸುಮಾರು ...ವರೆ ಕೋಟಿ ರೂಪಾಯಿ ...ಕಟ್ಟೆ ಮೌಲ್ಯದ ಹೊಚ್ಚ ... ಆಸ್ತಿ ...ಕೊಂಡಿರುವುದು ಅವರ ...ಚಾರ ವಿರೋಧಿ ಪ್ರಚಂಡ ...ಚರಣೆಯ ಕ್ಲೈಮ್ಯಾಕ್ಸ್ ಸೀನ್‌ನಂತಿದೆ.

...ನಾಂಕ 1.6.2006 ರಂದು ಗಾಂಧಿನಗರದ ...ಜಿಸ್ಟ್ರಾರ್ ಕಚೇರಿಯಲ್ಲಿ ನೊಂದಣಿ ಮಾಡಲ್ಪಟ್ಟ ...ಕೆ ಸಂಖ್ಯೆ 961/2006-07 ಮಾಹಿತಿಯ ಪ್ರಕಾರ ...ಸ್ ವೆಂಕಟಾಚಲರವರ ಕಿರಿಯ ಸುಪುತ್ರ ...ಕೇಟ್ ವೇದಾಚಲ ಮತ್ತು ಅವರ ಪತ್ನಿ ಶ್ರೀಮತಿ ...ಮಾ ವೇದಾಚಲ ಇವರ ಹೆಸರಲ್ಲಿ 3 ಕೋಟಿ ...ಯಿ ಮೌಲ್ಯ ನಮೂದಿಸಿ ಆಸ್ತಿ ಪರಭಾರೆ ...ರ ನಡೆದಿದೆ.

...ತಿಷ್ಠಿತ ಸದಾಶಿವನಗರದ 14 ನೇ ಕ್ರಾಸ್, 4 ನೇ ...ರಸ್ತೆಯ ಬಂಗ್ಲೆ ನಂ. 17 (ಹಳೆದು ನಂ. 330) ...ಖ್ಯೆಯ 60x90 ಅಡಿ ವಿಸ್ತೀರ್ಣದ ನಿವೇಶನ ...ಅದರ ಹಳೆಯ ಮಾಲೀಕರಾದ ಎಚ್.ಕೆ. ಪುಷ್ಪಾ ...ವರಿಂದ ವೇದಾಚಲ ದಂಪತಿಗಳು ಖರೀದಿಸಿ ...ದಾಖಲೆ ಪತ್ರವನ್ನು ಜೂನ್ 1 ರಂದು ಗಾಂಧಿ ... ಉಪನೊಂದಣಾಧಿಕಾರಿಗಳು ದೃಢೀಕರಿಸಿದ್ದಾರೆ. ...4 ಸಾವಿರ ಚದರ ಅಡಿಯಷ್ಟು ವಿಶಾಲವಾದ ...ದಲ್ಲಿ 27 ಸ್ಕೇರ್‌ಯಾರ್ಡ್ ವಿಸ್ತೀರ್ಣದ ಹಳೆಯ ...ಎದೆ. ಪೂರ್ವಕ್ಕೆ ಸೈಟ್ ನಂ. 325, ಪಶ್ಚಿಮಕ್ಕೆ ...ಕ್ಷಿಣಕ್ಕೆ ಸೈಟ್ ನಂ. 331 ಹಾಗೂ ಉತ್ತರ ... ಸೈಟ್ ನಂ. 329 ಎಂಬ ಕ್ಷೇತ್ರ ವಿವರಣೆಯುಳ್ಳ ...ಮೂಲ್ಯ ನಿವೇಶನ ಸದಾಶಿವನಗರ ಕ್ಲಬ್‌ನ ...ದಲ್ಲಿದೆ. ಅಂದರೆ ಬೆಂಗಳೂರಿನ ಗಣ್ಯಾತಿಗಣ್ಯರು



ವೇದಾಚಲ ಖರೀದಿಸಿರುವ ಸದಾಶಿವನಗರದ ಬಂಗಲೆ

ವಾಸಿಸುವ ಸದಾಶಿವನಗರ ಅಪ್ಪರ್ ಪ್ಯಾಲೇಸ್ ಆರ್ಚಿಡ್ಸ್ ಬಡಾವಣೆಯ ಹೃದಯಸ್ಥಾನದಲ್ಲಿದೆ. ವರನಟ ರಾಜ್‌ಕುಮಾರ್, ರಾಜಕಾರಣಿಗಳಾದ ಎಸ್.ಎಂ. ಕೃಷ್ಣ ಬಂಗಾರಪ್ಪ, ರಾಜಶೇಖರಮೂರ್ತಿ ಮತ್ತು ಇತ್ತೀಚಿನ ಉದಯೋನ್ಮುಖ ನಾಯಕ ಡಿ.ಕೆ. ಶಿವಕುಮಾರ್‌ರಂತಹ ಶ್ರೀಮಂತ ಗಣ್ಯರ ಬಂಗ್ಲೆಗಳಿಂದ ಸುತ್ತುವರೆಯಲ್ಪಟ್ಟಿರುವ ಈ ನಿವೇಶನ ಇದೀಗ ಕರ್ನಾಟಕದ ಭ್ರಷ್ಟ ಅಧಿಕಾರಿ ಗಣಕ್ಕೆ ಸಿಂಹಸ್ವಪ್ನರಾಗಿರುವ ಜಸ್ಟೀಸ್ ವೆಂಕಟಾಚಲ ಕುಟುಂಬದ ವಶಕ್ಕೆ ಬಂದಿದೆ.

ಸಬ್ ರಿಜಿಸ್ಟ್ರಾರ್‌ರವರ ಅಧಿಕೃತ ಮೌಲ್ಯ ನಿಷ್ಕರ್ಷೆ ಸೂತ್ರದ ಪ್ರಕಾರವೇ ಸದರಿ ಆಸ್ತಿಯ ಸರ್ಕಾರಿ ಮೌಲ್ಯ 1 ಕೋಟಿ 81 ಲಕ್ಷ 52 ಸಾವಿರದ ಆರುನೂರಾ ನಲವತ್ತು ರೂಪಾಯಿಯಂತೆ. ವೇದಾಚಲ ದಂಪತಿಗಳು ತಮ್ಮ ಸೇಲ್ ಡೀಡ್‌ನಲ್ಲಿ (ಕ್ರಯಪತ್ರ) ದಾಖಲಿಸಿರುವ ಮೌಲ್ಯವೇ 3 ಕೋಟಿ ರೂ. ಆದರೆ ರಿಯಲ್ ಎಸ್ಟೇಟ್ ಬ್ರೋಕರ್‌ಗಳ ಲೆಕ್ಕಾಚಾರದ ಪ್ರಕಾರ ಸದಾಶಿವನಗರದ ಬಡಾವಣೆಯಲ್ಲಿ ಚಾಲ್ತಿಯಲ್ಲಿರುವ ಮಾರುಕಟ್ಟೆ ದರ ಚದರಡಿಗೆ 8 ಸಾವಿರದಿಂದ 10 ಸಾವಿರ ರೂ.!

ಜೂನ್ 1 ರಂದು ನೋಂದಾಣಿಸಿದ ಆಸ್ತಿಯ ನೊಂದಣಿ ಪ್ರಕ್ರಿಯೆ ಓಡುಗುತ್ತಿದ್ದಂತೆ ಸಹಜವಾಗಿಯೇ ಗಾಂಧಿನಗರ ಸಬ್‌ರಿಜಿಸ್ಟರ್ ಕಚೇರಿಯಲ್ಲಿ ಇಷ್ಟೊಂದು [illegible] ಖರೀದಿಸಿದ [illegible] ಊಹಾಪೋಹಗಳು ಹಾರಾಡತೊಡಗಿದವು. ನೊಂದಾಯಿತ ಬೆಲೆ 3 ಕೋಟಿಯಿದ್ದರೂ, ಅಸಲಿ ವ್ಯವಹಾರ [illegible] ಚದರಡಿಗೆ 8 [illegible] [illegible] ಲೋಕಾಯುಕ್ತ ಕುಟುಂಬದ ಆಸ್ತಿ [illegible]

ವಹಿವಾಟಿನ ಶುಷ್ಕ ಅಂಕಿ ಅಂಶಗಳಷ್ಟೇ. ಪಾಪ, ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿ ಮತ್ತು ಕರ್ನಾಟಕದ ಅತ್ಯಂತ 'ಜನಪ್ರಿಯ' ಲೋಕಾಯುಕ್ತ ಹುದ್ದೆಗಳಲ್ಲಿ ಪ್ರಾಮಾಣಿಕತೆಯಿಂದ, ನಿಷ್ಠೆಯಿಂದ ಹಾಗೂ ದಿಟ್ಟತನದಿಂದ ಸೇವೆ ಸಲ್ಲಿಸಿ ರಿಟೈರ್ ಆಗಲಿರುವ ಜಸ್ಟೀಸ್ ವೆಂಕಟಾಚಲರು ತಮ್ಮ ಬದುಕಿನ ಸಂಧ್ಯಾಕಾಲದಲ್ಲಿ ರಾಜಧಾನಿಯ ಅತೀಪ್ರತಿಷ್ಠಿತ ಬಡಾವಣೆಯ ಅತೀ ಶ್ರೀಮಂತ ಗಣ್ಯಾತಿಗಣ್ಯರೊಡನೆ ಶ್ರೀಮಂತ ಪರಿಸರದಲ್ಲಿ ನೆಮ್ಮದಿಯಿಂದ ಬಾಳಬೇಕೆಂಬ ಆಕಾಂಕ್ಷೆ ಇಟ್ಟುಕೊಂಡಿರುವುದು ಸಹಜವೇ! ಅದಕ್ಕೋಸ್ಕರ ಯಾರೂ ಹೊಟ್ಟೆಕಿಚ್ಚು ಪಡಬೇಕಿಲ್ಲ. ಆದರೆ ನದಿಮೂಲ, ಗುರುಮೂಲ ಹುಡುಕಬಾರದೆಂಬ ಸಾಂಪ್ರದಾಯಿಕ ನಂಬಿಕೆಯಂತೆ ಭ್ರಷ್ಟಾಚಾರ ನಿಷೇಧ ದಳದ ಮುಖ್ಯಸ್ಥರಾಗಿದ್ದ ಲೋಕಾಯುಕ್ತರ ಆದಾಯ ಮೂಲವನ್ನು ಪ್ರಶ್ನಿಸಬಾರದೆಂಬ ಕಟ್ಟುಪಾಡೇನೂ ಇಲ್ಲ ತಾನೆ? ಬಹುಶಃ ದಿನನಿತ್ಯವೂ ಲೋಕಾಯುಕ್ತರ ರೋಮಾಂಚಕಾರಿ ರೇಡ್‌ಗಳ ಸುದ್ದಿ ಬಿತ್ತರಿಸುತ್ತಾ ಧನ್ಯರಾಗುವ ಪತ್ರಿಕಾ ಬಾಂಧವರಿಗೆ ಮಾತ್ರ ಜಸ್ಟೀಸ್ ವೆಂಕಟಾಚಲರ ಈ ಆಸ್ತಿ ಖರೀದಿ ವೃತ್ತಾಂತ [illegible]!

[illegible]



ಹಿಡಿದ ಮಾಲು ಸಮೇತ ಅದ್ದೂರಿಯ ಪತ್ರಿಕಾಗೋಷ್ಠಿ ನಡೆಸುವ ವೆಂಕಟಾಚಲರು ಪ್ರಾಮಾಣಿಕತೆ, ಸಜ್ಜನಿಕೆಯ ನೀತಿಪಾಠ ಬಿತ್ತರಿಸುತ್ತಾರೆ. ಆಸೆಯೇ ದುಃಖಕ್ಕೆ ಮೂಲ ಎಂದು ತಮ್ಮ ಬಲೆಗೆ ಸಿಕ್ಕಿಬಿದ್ದಿರುವ 'ನತದೃಷ್ಟ' ಖೂಳರನ್ನು ಹಂಗಿಸಿ ಹೀಯಾಳಿಸುತ್ತಾರೆ. ಪ್ರತಿ ಬಾರಿಯೂ ಇಂತಹದೊಂದು ರೇಡ್‌ಶೋ ಜರುಗಿಸಿದಾಗಲೂ ಮಾಧ್ಯಮಗಳಲ್ಲಿ ಬಿಂಬಿಸಲ್ಪಡುವ ಲೋಕಾಯುಕ್ತರ ಸಾಹಸಗಾಥೆಯನ್ನು ಓದಿ ಅಥವಾ ಕಿರುತೆರೆಯಲ್ಲಿ ವೀಕ್ಷಿಸಿ ಅಮಾಯಕ ಜನಸಾಮಾನ್ಯರು ಪುಳಕಿತರಾಗುತ್ತಾರೆ. ಜಸ್ಟೀಸ್ ವೆಂಕಟಾಚಲ ಮತ್ತು ಅವರ ತಂಡವನ್ನು ದುಷ್ಟಮರ್ದನ ಮತ್ತು ಶಿಷ್ಟ ರಕ್ಷಣೆಗಾಗಿ ಈ ಭೂಮಿ ಮೇಲೆ ಜನ್ಮ ತಾಳಿದ ದೈವ ಸ್ವರೂಪರೆಂದು ಕೊಂಡಾಡುತ್ತಾರೆ.

ಲೋಕಾಯುಕ್ತ ವೆಂಕಟಾಚಲರ ಕಳೆದ ಐದು ವರ್ಷಗಳ ಕಾರ್ಯವೈಖರಿ, ಸಾಧನೆ ಮತ್ತು ಸಾರ್ವಜನಿಕ ಇಮೇಜುಗಳ ಬಗ್ಗೆ ನಮಗೂ ಅದೆಷ್ಟೇ ಹೆಮ್ಮೆ, ಅಭಿಮಾನಗಳಿದ್ದರೂ ಮೇಲಿನ ಆಸ್ತಿ ಖರೀದಿ ವ್ಯವಹಾರ, ಅವರ ಕುಟುಂಬದ ಖಾಸಗಿ ಖಯಾಲಿಗಳ ಬಗ್ಗೆ, ಗಣ್ಯಾತಿಗಣ್ಯರ ಜೊತೆ ಬದುಕಬೇಕೆಂಬ ಒಣಪ್ರತಿಷ್ಠೆಯ ಆಕಾಂಕ್ಷೆಗಳ ಬಗ್ಗೆ ದಿಗ್ಭ್ರಮೆಗೊಳ್ಳುವಂತೆ ಮಾಡುತ್ತದೆ.

ಭ್ರಷ್ಟಾಚಾರ ಮುಕ್ತ ಸಮಾಜ ಸ್ಥಾಪನೆಯೇ ತಮ್ಮ ಬದುಕಿನ ಸಂಕಲ್ಪವೆಂದು ಸಾರುವ ಜಸ್ಟೀಸ್ ವೆಂಕಟಾಚಲರಂತಹ ಗಣ್ಯರು ಸರಳತೆ, ನಿರಾಡಂಬರತೆ ಮತ್ತು ಪಾರದರ್ಶಕತೆಯ ಸಾಕಾರಮೂರ್ತಿಗಳಂತಿರಬಹುದು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಪ್ರತಿಷ್ಠಿತ ಬಡಾವಣೆ, ದುಬಾರಿ ಆಸ್ತಿ ಗಳಿಕೆ ಮತ್ತು ಗಣ್ಯಾತಿಗಣ್ಯರ ಸಹವಾಸದ ವ್ಯಾಮೋಹಗಳಿಗೆ ಶರಣಾಗುತ್ತಿರುವುದು ನಮ್ಮ ಸಾರ್ವಜನಿಕ ಬದುಕಿನ ಘೋರ ವಿಪರ್ಯಾಸ ಮತ್ತು ವೈರುಧ್ಯಗಳಿಗೆ ಕನ್ನಡಿ ಹಿಡಿದಂತಿದೆ. ತಮಗೆ ಮತ್ತೊಂದು ಅವಧಿಯ ಅಧಿಕಾರ ವಿಸ್ತರಿಸಿ ಹಾಗೂ ತಾನೇ ತನಿಖಾಧಿಕಾರಿ, ವಿಚಾರಣಾಧಿಕಾರಿ ಮತ್ತು ಶಿಕ್ಷೆ ವಿಧಿಸುವ ನ್ಯಾಯಾಧೀಶ ಹೀಗೆ ಸರ್ವತಂತ್ರ ಸ್ವತಂತ್ರ ಸರ್ವಾಧಿಕಾರವನ್ನೇ ವಹಿಸಿಕೊಡಿ ಎಂದು ಬಹಿರಂಗ ವೇದಿಕೆಗಳಿಂದ ಬೇಡಿಕೆ ಮಂಡಿಸುತ್ತಿರುವ ಜಸ್ಟೀಸ್ ವೆಂಕಟಾಚಲರ ಸಾರ್ವಜನಿಕ ನಡವಳಿಕೆಯೇ ಪ್ರಜ್ಞಾವಂತರಲ್ಲಿ ಅಚ್ಚರಿ ಮೂಡಿಸುತ್ತಿರುವಾಗ, ಸದ್ದಿಲ್ಲದೇ ಜರುಗಿ ಹೋದ ಅವರ ಈ ಆಸ್ತಿ ಖರೀದಿ ವ್ಯವಹಾರ ಮತ್ತಷ್ಟು [illegible]

[illegible]

4.5 ಕೋಟಿ ಮೂಲ ಯಾವುದು?

ಲೋಕಾಯುಕ್ತ ವೆಂಕಟಾಚಲರು ಬಹುಶಃ ... ಕರ್ನಾಟಕದ ಅತೀ ಜನಪ್ರಿಯ ವ್ಯಕ್ತಿ, ಅವರ ...ವೈಖರಿ, ಛಲ ಎಲ್ಲವನ್ನೂ ಜನ ಮೆಚ್ಚಿಕೊಂಡಿ... ಲೋಕಾಯುಕ್ತರು ಯಾರ ಮೇಲಾದರೂ ದಾಳಿ [illegible] ?


... ವೆಂಕಟಾಚಲರ ಮಗ 4.5 ಕೋಟಿ ರೂ. [illegible] ?

ಖಂಡ್ರೆ-ಜತ್ತಿ-ಮುದ್ನಾಳ್

ಬಸವ ನಾಣ್ಯ ಮೋಸ ಕಾಣ!

ಮೊನ್ನೆ ಶುಕ್ರವಾರ ಪ್ರಧಾನಮಂತ್ರಿ ಮನಮೋಹನ ಸಿಂಗ್ ಬಸವಣ್ಣನ 100 ರೂ. ಹಾಗೂ 5 ರೂ. ನಾಣ್ಯ ಬಿಡುಗಡೆ ಮಾಡಿದ ಚಿತ್ರಗಳು ಟಿವಿ ನ್ಯೂಸ್ ಹಾಗೂ ಪೇಪರ್‌ಗಳಲ್ಲಿ ಪ್ರಕಟವಾಗಿವೆ. ಅವತ್ತು ಅಲ್ಲಿ ಸಿಂಗ್ ಜೊತೆ ಮುಖ್ಯಮಂತ್ರಿ ಕುಮಾರಸ್ವಾಮಿ, ಯಡಿಯೂರಪ್ಪ ಗವರ್ನರ್ ಚತುರ್ವೇದಿ. ಎಂ.ವಿ. ರಾಜಶೇಖರನ್ ಎಲ್ಲಾ ಇದ್ದರಲ್ಲವೆ. ಇವರ ನಡುವೆ ನೆಟ್ಟಗಿನ ಹಣೆ ಮೇಲೆ ಬೊಟ್ಟಗೆ ವಿಭೂತಿ ಬಳಿದುಕೊಂಡಿದ್ದ ಎತ್ತರದ ಆಕೃತಿಯೊಂದೂ ನಿಂತಿತ್ತು.


ಅಭಿನವ ಬಸವಣ್ಣನಂತೆಯೇ ಭಕ್ತಿ ಪರವಶತೆಯ ಪೋಜು ಕೊಡುವ ಅರವಿಂದ ಜತ್ತಿ ಎಂಬ ಆಕೃತಿ ಅದು. ಬಿ.ಡಿ. ಜತ್ತಿಯವರ ಮಗನಾದ ಈ ಶರಣ ಗುಣ ಸಂಪನ್ನ ಹಾಲಿ ಬಸವ ಸಮಿತಿಯ ಅಧ್ಯಕ್ಷ. ತಾನು ಬದುಕಿರುವವರೆಗೂ ಅಧ್ಯಕ್ಷನಾಗೇ ಇರಲು ಏನೇನು ಬೇಕೋ ಅದೆಲ್ಲಾ ವ್ಯವಸ್ಥೆ ಮಾಡಿಕೊಂಡಿರುವ ತ್ಯಾಗಜೀವಿ. ಈತನೊಂದಿಗೆ ಅಖಿಲ ಭಾರತ ವೀರ ಶೈವ ಮಹಾಸಭಾ ಅಧ್ಯಕ್ಷ ಭೀಮಣ್ಣ ಖಂಡ್ರೆ ಹಾಗೂ ಬಸವ ಸಮಿತಿ ಟ್ರಸ್ಟ್‌ನ ಅಧ್ಯಕ್ಷ ವಿಶ್ವನಾಥ ರೆಡ್ಡಿ ಮುದ್ನಾಳ್ ಗಳನ್ನ ಗಂಟನ್ನ ಸಂಬಂಧ ಹೊಂದಿದ್ದಾರೆ.


ಭೀಮಣ್ಣ ಖಂಡ್ರೆ


ಈ ತ್ರಿಮೂರ್ತಿಗಳೇ ಹಾಲಿ ಬಸವನಾಣ್ಯ ಬಿಡುಗಡೆಗೆ ಶ್ರಮಿಸಿದ ವರೆಂಬ ಹೆಗ್ಗಳಿಕೆ ಹೊಂದಿರುವವರು. ಇವರೆ ಇವತ್ತಿನ ಕರ್ನಾಟಕದ ಸಮಸ್ತ ಲಿಂಗಾಯತ ಸಂಘಟನೆಗಳ ನಾಯಕರಾಗಿ ಮೆರೆಯುತ್ತಿದ್ದಾರೆ. ಆದರೆ ಬಸವಣ್ಣ 'ಕಾಯಕವೇ ಕೈಲಾಸ' ಎಂದಿದ್ದರೆ ಈ ತ್ರಿಮೂರ್ತಿಗಳು 'ಕಾಸಿದ್ರೆ ಕೈಲಾಸ' ಎನ್ನುತ್ತಾರೆ. 'ದೇಹವೇ ದೇಗುಲ' ಎಂಬುದನ್ನು 'ಬಿಲ್ಡಿಂಗ್ ಆಸ್ತಿಗಳೇ ದೇಗುಲ' ಎಂದು ಬದಲಾಯಿಸಿಬಿಟ್ಟದ್ದಾರೆ. ಬಸವಣ್ಣ ಪಾಪ, 'ನನಗಿಂತಾ ಕಿರಿಯರಿಲ್ಲ' ಎಂದು ಸಾರಿ ಸಾರಿ ಹೇಳಿದ್ದನ್ನು ತಿರುಚಿ 'ನಮಗಿಂತಾ ಸೀನಿಯರ್‌ಗಳಿಲ್ಲ' ಎಂದು ಡಂಗುರ ಹೊಡೆದುಕೊಂಡು ತಿರುಗುತ್ತಿದ್ದಾರೆ. ಸರ್ಕಾರ ಬಸವ ನಾಣ್ಯ ಬಿಡುಗಡೆ ಮಾಡುವಂತೆ ಪ್ರಯತ್ನಿಸಿದ್ದು ಇವರ ಸಾಧನೆಯಾದರೂ ಅಂತರಂಗದಲ್ಲಿ ಇವರೆಲ್ಲಾ ಬಸವ ತತ್ವಕ್ಕೆ ಎಳ್ಳು ನೀರು ಬಿಟ್ಟಿರುವ ಕಾರಣದಿಂದ 'ಇದೆಲ್ಲಾ ಮೋಸ ಕಾಣ' ಎನ್ನಬೇಕಾಗಿದೆ.

ಮುದ್ನಾಳ್, ಜತ್ತಿ - ಬಸವಣ್ಣನಿಗೇ ಬತ್ತಿ

ಈಗ ಅರವಿಂದ ಜತ್ತಿ ಅಧ್ಯಕ್ಷನಾಗಿರುವ ಬಸವ ಸಮಿತಿಯನ್ನು 1964 ರಲ್ಲಿ ಬಿ.ಡಿ. ಜತ್ತಿ ಹಾಗೂ ಕೆಲ ವೀರಶೈವ ಸಮಾಜದ ಗಣ್ಯರು ಸೇರಿ ಸ್ಥಾಪಿಸಿದ್ದರು. ಅಷ್ಟರಲ್ಲಾಗಲೇ ಬಿಜಾಪುರ ಜಿಲ್ಲೆಯ ಜಮಖಂಡಿಯ ಬಸಪ್ಪ ದಾನಪ್ಪ ಜತ್ತಿ ಮಹಾರಾಷ್ಟ್ರ ಹಾಗೂ ಕರ್ನಾಟಕ ಸರ್ಕಾರದಲ್ಲಿ ಮಂತ್ರಿಯಾಗಿ, ಲಿಂಗಾಯತ ಲೀಡರ್ ಆಗಿ ಸಾಕಷ್ಟು ಪ್ರಭಾವಶಾಲಿಯಾಗಿದ್ದರು. ಅವತ್ತು ಮುಖ್ಯಮಂತ್ರಿಯಾಗಿದ್ದ ನಿಜಲಿಂಗಪ್ಪ ನವರ ಮನ ಒಲಿಸಿ ತಮ್ಮ ಬಸವ ಸಮಿತಿಗೆಂದು ಅತ್ಯಂತ ಬೆಲೆಬಾಳುವ ಜಾಗವೊಂದನ್ನು 99 ವರ್ಷಗಳ ಲೀಸ್‌ಗೆ ಗಿಟ್ಟಿಸಿದರು. ಅದೇ ಈಗ ವಿಧಾನಸೌಧದ ಹಿಂಭಾಗದ ಹೈಗ್ರೌಂಡ್ಸ್ ಪೊಲೀಸ್ ಠಾಣೆ ಹತ್ತಿರದ ಬಸವ ಭವನ ಕಟ್ಟಡವಿರುವ ಜಾಗ. ಬಸವ ತತ್ವ ಪ್ರಚಾರ, ಪುಸ್ತಕ ಪ್ರಕಟಣೆ, ವಿಚಾರಗೋಷ್ಠಿ ಇತ್ಯಾದಿ ಚಟುವಟಿಕೆ ನಡೆಸಿಕೊಂಡು ಬಂದ ಈ ಬಸವ ಸಮಿತಿ ಒಂದಷ್ಟು ಉತ್ತಮ ಕೆಲಸ ಮಾಡಿದೆಯಾದರೂ, ಅದೀಗ ಜತ್ತಿ ಕುಟುಂಬದ ಖಾಸಗಿ ಆಸ್ತಿಯಂತಾಗಿ ಹೋಗಿದೆ. ಈ ಬಸವ ಸಮಿತಿಯ ಸದಸ್ಯತ್ವ ಎಂಬುದು ಜತ್ತಿ ಹಾಗೂ ಮುದ್ನಾಳ್ ಕುಟುಂಬದ ಸದಸ್ಯರಿಗೆ ಮಾತ್ರ ಎಂಬಂತಾಗಿ ಹೋಗಿದೆ. ಜತ್ತಿ ಕುಟುಂಬದಿಂದ ಸಿದ್ಧರಾಮ ಜತ್ತಿ, ಶೇಖರ್ ಜತ್ತಿ, ದಾನಪ್ಪ ಜತ್ತಿ, ಗುಲ್ಬರ್ಗಾದ ವಿಲಾಸವತಿ ಖೂಬಾ ಮುಂತಾದವರು ತುಂಬಿಕೊಂಡಿದ್ದಾರೆ. ಶರಣ ಮುದ್ನಾಳ್ ಸುಮ್ಮನಿರಲು ಸಾಧ್ಯವೆ? ಆತನ ಕಡೆಯಿಂದಲೂ ಮಕ್ಕಳಾದ ಹನುಮಂತ ರೆಡ್ಡಿ ಮುದ್ನಾಳ್, ವೆಂಕಟ ರೆಡ್ಡಿ, ರಾಚಪ್ಪ ಗೌಡ, ಭಾಮೈದನ ಮಗ, ತಮ್ಮನ ಮಗ, ತಮ್ಮನ ಷಡ್ಡಕನ ಮಗ ಹೀಗೆ ವಿಶ್ವನಾಥ ರೆಡ್ಡಿ ಮುದ್ನಾಳರ ಕುಟುಂಬದ 12 ಮಂದಿ ಬಸವ ಸಮಿತಿಯೊಳಗೆ ತೂರಿಕೊಂಡಿದ್ದಾರೆ. ಇವರೆಲ್ಲಾ ನಾಮಿನೇಟೆಡ್ ಸದಸ್ಯರು. ಬಸವ ಸಮಿತಿಯೊಳಗೆ 180 ರಷ್ಟು ಮಾತ್ರ


ವಿಶ್ವನಾಥ ರೆಡ್ಡಿ ಮುದ್ನಾಳ್

ಮೆಂಬರ್‌ಗಳಿದ್ದು ಅವರ ಪೈಕಿ 90 ಜನ ನಾಮಿನೇಟೆಡ್ ಮೆಂಬರ್‌ಗಳೇ ಇದ್ದಾರೆ. ಇವರಲ್ಲಿ ಅರ್ಧಕ್ಕರ್ಧ ಈ ಜತ್ತಿ-ಮುದ್ನಾಳ್-ಖಂಡ್ರೆ ಕುಟುಂಬದವರೇ ಸೇರಿಕೊಂಡಿದ್ದಾರೆ. ಹಾಗಾಗಿ ಬಸವ ಸಮಿತಿ ಪದಾಧಿಕಾರಿಗಳ ಆಯ್ಕೆ ಇವರ ಕೈಲೇ ಇರುತ್ತದೆ. ಈ ಸಮಿತಿಗೆ ಕಳೆದ ನಲವತ್ತು ವರ್ಷಗಳಿಂದ ನೆಟ್ಟಗೆ ಚುನಾವಣೆಯೇ ನಡೆದಿರಲಿಲ್ಲ, ಬಿ.ಡಿ. ಜತ್ತಿ ಬಸವ ಸಮಿತಿಗೆ ಆಜೀವ ಅಧ್ಯಕ್ಷರಾಗಿದ್ದರು. ಅವರ ನಂತರ ಮಗ ಅರವಿಂದ ಜತ್ತಿ ನುಗ್ಗಿದ. ಇತ್ತೀಚೆಗೆ ಕೆಲ ಸದಸ್ಯರು ಸಮಿತಿಯ ಬೈಲಾ ಮತ್ತಿತರ ಕಾನೂನು ವಿಚಾರ ಎತ್ತಿ ದೇಟಗೆ ಅರ್ಜೆಂಟಾಗಿ ಎಲೆಕ್ಷನ್ ಮಾಡಿದ್ದಾರೆ. ಮುದ್ನಾಳ್ ತಾನೇ 50 ರಷ್ಟು ಬ್ಯಾಲೆಟ್ ಪೇಪರ್ ತೆಗೆದುಕೊಂಡು ಸದಸ್ಯರ ಮನೆಮನೆಗೆ ಹೋಗಿ ತನಗೆ ಬೇಕಾದವರ ಪರವಾಗಿ ಓಟು ಹಾಕಿಸಿಕೊಂಡು ಬಂದಿದ್ದರು. ಉಳಿದಂತೆ ಅವರ ಫ್ಯಾಮಿಲಿಗಳವರೇ ಓಟರುಗಳಾದ್ದರಿಂದ ಬಸವ ಸಮಿತಿಗೆ ಅರವಿಂದ ಜತ್ತಿ ಹಾಗೂ ಬಸವ ಸಮಿತಿ ಟ್ರಸ್ಟ್‌ಗೆ ವಿಶ್ವನಾಥ ರೆಡ್ಡಿ ಮುದ್ನಾಳ್ ಅಧ್ಯಕ್ಷರಾಗಿ ಬಂದು ಠಿಕಾಣಿ ಹೂಡಿದ್ದಾರೆ.


ಅರವಿಂದ ಜತ್ತಿ

ಈ ಬಸವ ಸಮಿತಿ ಲೀಸ್ ಪಡೆದಿರುವ ಜಾಗದಲ್ಲಿ ಬೃಹತ್ ಕಟ್ಟಡಗಳನ್ನು ಕಟ್ಟಿ ಬಾಡಿಗೆಗೆ ಬಿಡಲಾಗಿದೆ. ಸಮಿತಿಗೆ ಲಕ್ಷಾಂತರ ರೂಪಾಯಿ ಆದಾಯವಿದ್ದರೂ, ಹಾಲಿ 30 ಲಕ್ಷ ಹಣ ಉಳಿತಾಯವಿದ್ದಾಗಲೂ ವೀರಶೈವ ಸಮಾಜದ ವಿದ್ಯಾರ್ಥಿಗಳಿಗಾಗಲಿ, ಸಾಮಾನ್ಯರಿಗಾಗಲಿ, ಯುವಕರಿಗಾಗಲಿ ನಯಾಪೈಸೆ ಉಪಯೋಗದ ಕೆಲಸ ಆಗುತ್ತಿಲ್ಲ. ಜತ್ತಿಯ-ಮುದ್ನಾಳರ ಚೇಲಾ ಚಟಗೇರಿ ಎಂಬಾತನಿಗೆ ಚಿಲ್ಲರೆ ಕಾಸಿನ ಬಾಡಿಗೆಗೆ ಒಳ್ಳೇ ಜಾಗ ಬಿಟ್ಟುಕೊಟ್ಟ... ಸ್ವತಃ ಮುದ್ನಾಳ್ ಪುಗಸಟ್ಟೆಯಾಗಿ ವಾಸವಿರುವ... ಅಲ್ಲೇ!

ಈ ಸಮಿತಿಗೆ ಕೆಂಗೇರಿ ಹತ್ತಿರ... ರಾಮೋಹಳ್ಳಿಯಲ್ಲಿ 130 ಎಕರೆ ಸರ್ಕಾರಿ ಭೂಮಿ ಮಂಜೂರಾಗಿದ್ದು... ಒಂದು ನ್ಯಾಚುರೋಪತಿ ಆಸ್ಪತ್ರೆ ಹಾಗೂ ಶಾಲೆ ಕಟ್ಟಲಾಗಿದೆ. ಆದರೆ... ಎರಡನ್ನೂ ನಷ್ಟದಲ್ಲಿರುವಂತೆ ನೋಡಿಕೊಳ್ಳಲಾಗಿದೆ. ಆದಕ್ಕಿಂತಾ ಮುಖ್ಯವಾಗಿ ಬಿ.ಡಿ. ಜತ್ತಿ ತೀರಿಕೊಂಡಾಗ ಅವರ ದೇಹವನ್ನು... ಟ್ರಸ್ಟ್‌ನ ಈ ಜಾಗದಲ್ಲೇ ಹೂಳಿದ್ದಾರೆ... ಇದು ಸರ್ಕಾರಿ ಕಾಯ್ದೆಯ ನೇರ ಉಲ್ಲಂಘನೆ. ಈ ಅಮೂಲ್ಯ ಜಾಗವನ್ನು ಲಪಟಾಯಿಸುವ ಜತ್ತಿ ಕುಟುಂಬದ ಪ್ಲಾನ್... ಭಾಗವಾಗಿಯೇ ಅವರ ಮನೆಯಲ್ಲಿ ಯಾರೇ ಸತ್ತರೂ... ಸಮಾಧಿಯನ್ನು ಟ್ರಸ್ಟ್ ಜಾಗದಲ್ಲಿ ಹೂಳುವ ತು... ಮಾಡಿಕೊಂಡು ಹೋಗುತ್ತಿದ್ದಾರೆ. ಇಡೀ ಬಸವ ಸಮಿತಿ... ಯನ್ನು ಕುಟುಂಬದ ಖಾಸಗಿ ಆಸ್ತಿ ಮಾಡಿಕೊಳ್ಳ... ಕಾಯುತ್ತಿದ್ದಾರೆ.

'ಬಾಯಲ್ಲಿ ವಚನ, ಮನಸಲ್ಲಿ ಕಾಂಚಾಣ' ಎ... ಸಿಂಗಲ್ ಫಾರ್ಮುಲಾದ ಈ ಮುದ್ನಾಳ್-... ಬಸವಣ್ಣನವರ ಆಶಯಗಳಿಗೆ ಬತ್ತಿ ಇಡುತ್ತಿದ್ದಾರೆ.

ಬಿ.ಡಿ. ಜತ್ತಿ ಅಧ್ಯಕ್ಷರಾಗಿದ್ದಾಗ 1967 ರಲ್ಲಿ ಕೇಂ... ಸರ್ಕಾರ ಬಸವಣ್ಣನವರ ಒಂದು ಅಂಚೆ ಚೀಟಿ ಬಿಡು... ಮಾಡಿತ್ತು. ಈಗ ನಲವತ್ತು ವರ್ಷಗಳ ನಂತರ ಬ... ನಾಣ್ಯ ಬಿಡುಗಡೆಯಾಗಿದೆ. ಈ ನಾಣ್ಯದ ಒಂದು... ಬಸವಣ್ಣ ಮತ್ತೊಂದೆಡೆ ರೇಟ್ ಮುದ್ರಿಸಿದ್ದಾರೆ. ಒಂ... ನಾಣ್ಯದ ಎರಡು ಮುಖದಂತೆ ಬಸವ ಸಮಿತಿ... ಈಗ ಎರಡು ಮುಖ. ಒಂದು ಕಡೆ ಬಸವ... ಮುಖ ಇನ್ನೊಂದು ಕಡೆ ದುಡ್ಡು-ಆಸ್ತಿ.

-ವರದಿಗಾ...


ವಕೀಲರ ಎಲೆಕ್ಷನ್

ಜೂನಿಯರ್ಸ್ Vs ಸೀನಿಯರ್ಸ್

ಕೊಪ್ಪಳ

ಕೊಪ್ಪಳದ ಕರಿಕೋಟುಗಳು ಈಗ ಮತ್ತೊಮ್ಮೆ ನೇರ ಫೈಟಿಗೆ ಇಳಿದಿವೆ. ಅಂದರೆ ಕೊಪ್ಪಳ ವಕೀಲರ ಸಂಘದ ಎಲೆಕ್ಷನ್ ಬಂದಿದೆ. ಹೊರಗೆ ಇದು ಜಿಲ್ಲಾ ವಕೀಲರ ಸಂಘದ ಚುನಾವಣೆ ಎಂದೇ ಪ್ರಚಾರ ಆಗುತ್ತಿದ್ದರೂ ಇದು ಕೊಪ್ಪಳ ಬಾರ್ ಅಸೋಸಿಯೇಷನ್ ಚುನಾವಣೆ. ಹಾಗೆ ನೋಡಿದರೆ 260 ವಕೀಲರು ಇರುವ ಕೊಪ್ಪಳ ವಕೀಲರ ಸಂಘದ ಚುನಾವಣೆ ಜೂನಿಯರ್ಸ್ ವರ್ಸಸ್ ಸೀನಿಯರ್‌ಗಳ ನಡುವಿನ ಹೋರಾಟ. ಆಳದಲ್ಲಿ ಇದು ಆಸೀಫ್ ಅಲಿ-ಸಂಧ್ಯಾ ಮಾದಿನೂರ್ ಗ್ಯಾಂಗ್ ನಡುವಿನ ಹಣಾಹಣೆಯೂ ಹೌದು.

ಇದೇ ಜುಲೈ 2 ರಂದು ಎಲೆಕ್ಷನ್ ನಿಗದಿಯಾಗಿದ್ದು ಜೂನ್ 23 ರ ಸಂಜೆ ಅಂತಿಮ ಕಣ ಸಿದ್ಧವಾಗಿ ಆಸೀಫ್ ಅಲಿ (ಸಿನಿಯರ್ಸ್) ಪ್ಯಾನಲ್‌ನಿಂದ ಅಧ್ಯಕ್ಷ ಸ್ಥಾನಕ್ಕೆ ಜಿ.ಆರ್. ಆರೇರ್, ಉಪಾಧ್ಯಕ್ಷಗೆ ಐ.ವಿ. ಪತ್ತಾರ, ಕಾರ್ಯದರ್ಶಿಗೆ ಸೋಮಶೇಖರ ದೇಸಾಯಿ, ಜಂಟಿ ಕಾರ್ಯದರ್ಶಿಗೆ ಆರ್.ವಿ. ಮಠದ, ಮಹಿಳಾ ಪ್ರತಿನಿಧಿಗೆ ಸುಮಂಗಲಾ ರೆಡ್ಡಿ ಇದ್ದರೆ ಸಂಧ್ಯಾ ಮಾದಿನೂರ (ಜೂನಿಯರ್ಸ್) ಪ್ಯಾನಲ್‌ನಿಂದ ಅಧ್ಯಕ್ಷ ಸ್ಥಾನಕ್ಕೆ ಎಸ್.ಪಿ. ಗೋನಾಳ, ಉಪಾಧ್ಯಕ್ಷ-ಎ.ವಿ. ಕಣವಿ, ಕಾರ್ಯದರ್ಶಿ ರವಿ ಶಿಗಿನಹಳ್ಳಿ, ಜಂಟಿ ಕಾರ್ಯದರ್ಶಿ ಸುನಿಲ್ ಜಾಧವ, ಮಹಿಳಾ ಪ್ರತಿನಿಧಿಗೆ ಸಾವಿತ್ರಿ ಬಾವಿ ಕಣದಲ್ಲಿ ಉಳಿದಿದ್ದು ಅಂದಿನ ರಾತ್ರಿಯಿಂದಲೇ ಮತದಾರ ವಕೀಲರ ಪಾರ್ಟಿಗಳು ಆರಂಭವಾಗಿವೆ.


ಆಸೀಫ್ ಅಲಿ

ಸುಸಜ್ಜಿತವಾದ ಲೈಬ್ರರಿ, ಕುಡಿಯುವ ನೀರಿನ ಕೊರತೆ ಮಧ್ಯೆಯೂ ಒಂದು ಸಮಾಧಾನದ ಸಂಗತಿ ಎಂದರೆ ಈಗ ವಕೀಲರ ಸಂಘ ಅಧಿಕೃತ ನೋಂದಣಿಯಾಗಿ ಮೊದಲ ಚುನಾವಣೆ ನಡೆಯುತ್ತಿದ್ದು ಎರಡು ವರ್ಷದ ಅವಧಿಗೆ ಪದಾಧಿಕಾರಿಗಳು ಆಯ್ಕೆಯಾಗಬೇಕಿದೆ.

ಆದರೆ ಎರಡು ವರ್ಷಗಳ ಹಿಂದೆ ಇದೇ ವಕೀಲರ ಸಂಘದವರ ನಿತ್ಯ ಕೆಸರೆರಚಾಟ ಮಾತ್ರ ಕೊಪ್ಪಳಕ್ಕೆ ಹೇಸಿಗೆ ತರಿಸಿ ಕೆಲ ಸಂಘ ಸಂಸ್ಥೆಯವರು 'ದಯವಿಟ್ಟು ನಿಮ್ಮ ಜಗಳ ನಿಲ್ಲಿಸಿ' ಅಂತ ಬುದ್ಧಿವಾದ ಹೇಳಿದ್ದರು. ಅದಕ್ಕೆ ಕಾರಣ ಆಸೀಫ್ ಅಲಿ, ರಾಘವೇಂದ್ರ ಪಾನಗಂಟಿ, ಭೂಸನೂರ ಮಠದ ಸಿನಿಯರ್ ಗುಂಪುಗೆ ಬೇಡವಾದೆವು ಎಂಬ ನೋವು ಸಂಧ್ಯಾ ಮಾದಿನೂರಗೆ ಬೆಂಬಲಿಸಿ ಗೆಲ್ಲಿಸಿದ್ದ ಜೂನಿಯರ್‌ಗಳದಾಗಿತ್ತು. ಕಾರಣ ಉತ್ತರ ಕರ್ನಾಟಕದ ಹೈಕೋರ್ಟ್ ಪೀಠ! ಸಂಧ್ಯಾ ಅಧ್ಯಕ್ಷೆಯಾಗಿದ್ದ ಸಭೆಯಲ್ಲಿ ಉತ್ತರ ಕರ್ನಾಟಕದ ಯಾವ ಸ್ಥಳದಲ್ಲಿ ಹೈದರಾಬಾದ್ ಕರ್ನಾಟಕ ಪೀಠ ಆರಂಭವಾಗಬೇಕು ಎಂಬ ವಿಷಯದ ಬಗ್ಗೆ ಸಹಮತ ಸಿಗಲಿಲ್ಲ. ಕೊನೆಗೆ ಅದು ಎಲ್ಲಿಗೆ ಹೋಯಿತೆಂದರೆ ಕೆಲ ಜೂನಿಯರ್‌ಗಳು ಬೆಂಬಲಿಸಿ ಆಸೀಫ್ ಅಲಿಯವರನ್ನು ಕೊಪ್ಪಳ ಜಿಲ್ಲಾ ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿಗೆ ಅಧ್ಯಕ್ಷರನ್ನಾಗಿಸಿದರು. ಅದಕ್ಕೆ ಆಸೀಫ್ ಅಲಿ ಆಗಿನ ಕಾಂಗ್ರೆಸ್ ಸರ್ಕಾರದ ಹೈಕಮಾಂಡ್ ಜೊತೆ ಗುರುತಿಸಿಕೊಂಡವರು ಎಂಬ ಕಾರಣ. ಹೀಗಾಗಿ ಆಸೀಫ್ ಅಲಿ ಕರೆದ ಸಭೆಗಳಿಗೆ ಕೊಪ್ಪಳದ ಮಾಜಿಗಳು ಹಾಜರಾಗಿ ಹೋರಾಟಕ್ಕೆ ಬೆಂಬಲಿಸಿದರು.

ಆದರೆ ಮರುದಿನವೇ ಆಗಿದ್ದೇನು ಗೊತ್ತೇ? ವಕೀಲರ ಸಂಘದ ಅಧ್ಯಕ್ಷೆ ಸಂಧ್ಯಾ ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿಯ ಆಸೀಫ್ ಅಲಿಯನ್ನು ಉಚ್ಛಾಟಿಸಿದರು. ಆವತ್ತೆ ಸಂಜೆ ಸಂಘದ ಉಪಾಧ್ಯಕ್ಷ, ಎಂ.ಸಿ. ಸಜ್ಜನಿನ ಅಧ್ಯಕ್ಷೆ ಸಂಧ್ಯಾರನ್ನು ಉಚ್ಛಾಟಿಸಿ ತಾವೇ ಅಧ್ಯಕ್ಷ ಎಂದು ಆಸೀಫ್ ಅಲಿ ಬೆಂಬಲಕ್ಕೆ ನಿಂತರು. "ಕಾನೂನು ಪ್ರಕಾರ ಆಯ್ಕೆಯಾದ ನನ್ನನ್ನು ಕಿತ್ತು ಹಾಕಲು ಸಜ್ಜನ ಯಾರು? ಸಂಘದ ಬಗ್ಗೆ ಅನವಶ್ಯಕ ಹೇಳಿಕೆ ನೀಡಿ ಮರ್ಯಾದೆ ಕಳೆಯುತ್ತಿದ್ದಾರೆ" ಎಂದು ಸಂಧ್ಯಾ ಮಾದಿನೂರರು ಸಜ್ಜನರನ್ನು ಸಂಘದಿಂದಲೇ ಹೊರ ಹಾಕಿದರು. ಎರಡು ಗುಂಪಾಗಿದ್ದ ಸಂಘ ನಮ್ಮದೇ ನಿಜವಾದ ಸಂಘ ಎಂದು ನೊಂದಣಿ ಕಚೇರಿಗೆ ಹೋದರೆ ಅಲ್ಲಿ ವಕೀಲರ ಸಂಘ ನೋಂದಣಿಯೇ ಆಗಿರಲಿಲ್ಲ.

2004 ಆಗಸ್ಟ್ 31 ರಂದು ಈ ಹಿರಿಯರ ಜಗಳಕ್ಕೆ ಅಂತ್ಯ ಹೇಳಲು ಜೂನಿಯರ್‌ಗಳೇ ಮೀಟಿಂಗ್ ಕರೆದರೆ ಅಲ್ಲಿ ಭರ್ಜರಿ ಯುದ್ಧ! ಒಂದು ಹಂತದಲ್ಲಿ ಆಸೀಫ್ ಅಲಿಯನ್ನು ಸಂಧ್ಯಾ ಬೆಂಬಲಿಗನೊಬ್ಬ ಹೊಡೆಯ... ಲೆಂದೇ ಹೋಗಿದ್ದ. ಇದಕ್ಕೆ ಕಾರಣವಾ... ಗಿದ್ದು ಕೆಲ ಸೀನಿಯರ್ಸ್‌ಗಳ ಹಮ್ಮು... ಅದಕ್ಕೆ ತುಪ್ಪವಾಗಿದ್ದು ಸಂಧ್ಯಾರ ಒಂದಿಷ್ಟು... ಅಹಂಕಾರ! ಇದೆಲ್ಲ ಮರೆಯುತ್ತಿರುವ... ಈ ಹೊತ್ತಿನಲ್ಲಿ ಮತ್ತೊಂದು ಹಣಾ... ಹಣೆಗೆ ವಕೀಲರ ಸಂಘ ರೆಡಿಯಾಗಿದೆ.


ಸಂಧ್ಯಾ

ಸಂಧ್ಯಾ ಪ್ಯಾನಲ್‌ನಲ್ಲಿ ಮೊದಲಿ... ನಿಂದ ಅಧ್ಯಕ್ಷಸ್ಥಾನದ ಅಭ್ಯರ್ಥಿ ಎನ್ನಲಾ... ಗಿದ್ದ ಎ.ವಿ. ಕಣವಿಯವರನ್ನು ಹಿಂದಿಕ್ಕಿ... ಸ್ವಜಾತಿಯ ಎಸ್.ಪಿ. ಗೋನಾಳರನ್ನು... ಅಭ್ಯರ್ಥಿ ಮಾಡಿದ್ದರ ಬಗ್ಗೆ ವಕೀಲ... ರಲ್ಲೇ ಅಸಮಾಧಾನ ಇದೆ. ಈಗ... ಕಣವಿ ಅನಿವಾರ್ಯವಾಗಿ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ.


ಜುಲೈ 2 ರಂದು ನಡೆಯುವ ಚುನಾವಣೆ... ಯಲ್ಲಿ ಯಾರ ಪ್ಯಾನಲ್‌ರವರು ಸಾರಾಸಗಟು... ಗೆಲ್ಲುವ ಲಕ್ಷಣಗಳೇ ಇಲ್ಲ, ಅಧ್ಯಕ್ಷ ಸ್ಥಾನದ... ಗೋನಾಳ್ ಸಂಖ್ಯೆಯಲ್ಲಿ ಮುಂದಿದ್ದರೂ ಕೊನೇ... ಘಳಿಗೆಯಲ್ಲಿ ಆರೇರ್ ಗೆದ್ದರೆ ಆಶ್ಚರ್ಯವಿಲ್ಲ, ಉಪಾ... ಧ್ಯಕ್ಷ ಸ್ಥಾನದ ಕಣವಿಯನ್ನು ಹಿಂದಿಕ್ಕಿ ಪತ್ತಾರ್‌ರ ಓಟ... ಫಾಸ್ಟಾಗಿದೆ. ಕಾರ್ಯದರ್ಶಿ ಹುರಿಯಾಳುಗಳಾದ ಸೋಮ... ಶೇಖರ ದೇಸಾಯಿ, ರವಿ ಶಿರಿಗಿಹಳ್ಳಿಯ ಸ್ಪರ್ಧೆಯಲ್ಲಿ... ರವಿ ಗೆಲ್ಲಲಿದ್ದಾರೆ. ಜಂಟಿ ಕಾರ್ಯದರ್ಶಿ ಹುದ್ದೆಯ... ಮಠದ, ಸುನಿಲ್ ಜಾಧವ ಸಮಬಲರಾಗಿದ್ದು ಜಾಧವ... ರತ್ತ ತೂಕ ಹೆಚ್ಚುತ್ತಿದೆ. ಇನ್ನು ಮಹಿಳಾ ಪ್ರತಿನಿಧಿಯಾಗಿ... ಕ್ರಿಯಾಶೀಲ ಎನಿಸಿಕೊಂಡಿರುವ ಸಾವಿತ್ರಿ ಬಾವಿ... ಗೆದ್ದರೆ ಉತ್ತಮ. ಸುಮಂಗಲಾ ರೆಡ್ಡಿ ಗೆದ್ದರೆ ... loss! ಸದ್ಯಕ್ಕೆ ಭಯಂಕರ ಜಿದ್ದಿಯಲ್ಲಿ ಪ್ರಚಾರ ನಡೆದಿದೆ... ವಕೀಲರ ಓಲೈಕೆಗೆ ಕಸರತ್ತು ನಡೆದಿದೆ.

-ಹುಸೇನ್ ಪಾಷಾ

ಬದುಕೆಂದರೆ ಬರಿ ಆಟಗಾರರನೆಲ್ಲ ಹಿಂಬಾಲಿಸುವ ನೆರಳು. -ಶೇಕ್ಸ್‌ಪಿಯರ್

ಬೀದಿ ಹೆಣವಾದ ಬ್ಲೂಫಿಲ್ಮ್ ಉಡುಪ!

ಲೋಕಲ್ ಬ್ಲೂಫಿಲ್ಮ್ ಸಿಡಿಗಳ ದಂಧೆ, ವೇಶ್ಯಾವಾಟಿಕೆ ದಂಧೆಗಳಿಂದ ಕಂತ್ರಿ ಹಣ ಸಂಪಾದಿಸುತ್ತಿದ್ದ ವಿಶ್ವನಾಥ್ ಉಡುಪ ಎಂಬ ತಲೆಹಿಡುಕನನ್ನು ಅವನ [illegible] ಮಾಡಿದ್ದಾರ [illegible] ಒಂದು ಬಲಿ ತೆಗೆದುಕೊಂಡಿದೆ. ಕೊಲೆಯಾದ ಉಡುಪನಷ್ಟೇ ಹರಾಮಿಗಳಾದ ಸಂತೋಷ್, ಹಂಗಾರಕೂಡಿಗೆ ಗ್ರಾಮದ ಬಾಲು ಎಂಬ ಕೊಲೆಗಡುಕರೀಗ ಜೈಲು ಪಾಲಾಗಿದ್ದಾರೆ.


ವಿಶ್ವನಾಥ್ ಉಡುಪ

ಹೆಂಗುಸರೆಂದರೆ ತೆವಲು ತೀರಿಸುವ ಮಾಂಸದ ಮುದ್ದೆಗಳೆಂದೇ ನಂಬಿದ್ದ ಬದ್ಮಾಷ್ ವಿಶ್ವನಾಥ್ ಉಡುಪ ಬೀದಿ ಹೆಣವಾಗಿದ್ದಕ್ಕೆ ತೀರ್ಥಹಳ್ಳಿಯಲ್ಲಿ ಯಾರಿಗೂ ದುಃಖವಾಗಿಲ್ಲ, ಅಂತಾ ತಲೆಹಿಡುಕನಾಗಿದ್ದ ಈ ಉಡುಪನೆಂಬ ಉಪಾದ್ವಾಪಿ! ಬ್ಲೂಫಿಲ್ಮ್ ಸಿಡಿಗಳು ಬೇಕೆಂದರೆ ಸೀದಾ ವಿಶ್ವನಾಥ್ ಉಡುಪನ ಬಳಿಗೆ ಬಂದು ಬಿಡುತ್ತಿದ್ದವು ಪಡ್ಡೆ ಹೈದರು. ಅಷ್ಟೊಂದು ರಿಚ್ ಕಲೆಕ್ಷನ್ನು ಮಾಡಿದ್ದ ಉಡುಪ. ಜೊತೆಗೆ ನೌಕರಿ ಕೊಡಿಸುವ ನೆಪದಲ್ಲಿ ಹುಡುಗಿಯರನ್ನು ವೇಶ್ಯಾವಾಟಿಕೆಗೆ ತಳ್ಳುವ ಜಾಲದಲ್ಲೂ ಉಡುಪನೇ ಪ್ರಮುಖನಾಗಿದ್ದ.

'ಸಿಡಿ' ತಲೆ!

ಕೆಲ ತಿಂಗಳುಗಳ ಹಿಂದೆಯಷ್ಟೇ ತೀರ್ಥಹಳ್ಳಿ ತಾಲೂಕಿನಾದ್ಯಂತ ಗಬ್ಬು ಸುದ್ದಿಯೊಂದು ಹಬ್ಬಿತ್ತು. ಸ್ಥಳೀಯ ಹುಡುಗಿಯೊಬ್ಬಳು ಕಾಮಕೇಳಿಯಲ್ಲಿ ನಿರತಳಾದ ದೃಶ್ಯಗಳಿರುವ ಸಿ.ಡಿ. ಬಂದಿದೆ ಎಂದು ತಾಲೂಕು ತುಂಬಾ ಪಡ್ಡೆಗಳೆಲ್ಲ ಜೊಲ್ಲು ಸುರಿಸುವಂತಾಗಿತ್ತು.

ತನ್ನ ಮಾಸ್ಟರ್‌ಮೈಂಡ್‌ಗೆ ಸಿಗದೇ ಹೇಗೆ ಹೋಯ್ತು ಈ ಸಿ.ಡಿ. ಎಂದುಕೊಂಡ ಉಡುಪ ಸಿಕ್ಕಸಿಕ್ಕಲ್ಲಿ ಆ ಸಿಡಿಗಾಗಿ ಹುಡುಕಾಡಿ, ಸಿಗದೇ ಸುಸ್ತಾಗಿಬಿಟ್ಟ. ಆಗ ಅವನಿಗೆ ಸಿಕ್ಕ ಲಫಂಗರೇ ಇವತ್ತಿನ ಆರೋಪಿಗಳಾದ ಸಂತೋಷ್ ಅಲಿಯಾಸ್ ಸಂತು, ಹಂಗಾರಕೂಡಿಗೆ ಗ್ರಾಮದ ಬಾಲುಗಳು! ಆ ಕಾಮಕೇಳಿಯ ಸಿ.ಡಿ. ತಂದು ಕೊಟ್ಟರೆ ಎಷ್ಟಾದರೂ ಹಣ ಕೊಡುತ್ತೇನೆ ಎಂದು ಉಡುಪ ಪ್ರಾಮೀಸ್ ಮಾಡಿದ.

ಉಡುಪನ ಬ್ಲೂ ಸಿ.ಡಿ. ವ್ಯವಹಾರದ ಅಗಾಧ ಲಾಭ ನೋಡಿದ ಸಂತೋಷ್, ಬಾಲುಗಳಿಗೆ ಹಡಬೆ ದುಡ್ಡು ಎತ್ತುವ ಆಶೆಯಾಯ್ತು. ಇನ್ನು ಮುಂದೆಲ್ಲ ಲೋಕಲ್ ಸೆಕ್ಸ್ ಸಿಡಿಗಳನ್ನು ತಂದು ಕೊಡುವುದಾಗಿ ಹೇಳಿದ ಸಂತೋಷ್, ಬಾಲುಗಳು ಉಡುಪನಿಗೆ ಒಂದಿಷ್ಟು ಅಡ್ವಾನ್ಸ್ ಕೇಳಿದರು. ಮೈಮೇಲೆ ಸದಾ 30 ರಿಂದ 40 ಸಾವಿರ ರೂಪಾಯಿ ಬೆಲೆ ಬಾಳುವ ಚಿನ್ನದ ಸರ, ಕಿಸೆಯಲ್ಲಿ ಸದಾ ಬಡ್ಡಿ ವ್ಯವಹಾರದ 20 ಸಾವಿರ ರೂಪಾಯಿ ಇಟ್ಟುಕೊಂಡೇ ತಿರುಗುತ್ತಿದ್ದ ಉಡುಪ 'ನೋ ಮನಿ' ಎಂದಿದ್ದೇ ಅವನ ನರಕಯಾತ್ರೆಗೆ ಕಾರಣವಾಗಿಬಿಟ್ಟಿತು. ಈ ಮೊದಲು ಸಂತೋಷ್, ಬಾಲುಗಳು ಹಡಬೆ ವ್ಯವಹಾರಗಳಿಗೆ ಕೈ ಹಾಕಿ ಸಾಕಷ್ಟು ಸಾಲ ಮಾಡಿಕೊಂಡಿದ್ದರು. ಉಡುಪನನ್ನು ಎತ್ತಿಬಿಟ್ಟರೆ ಸಲೀಸಾಗಿ 60-70 ಸಾವಿರ ಕೈಗೆ ಬರುತ್ತೆ; ಉಡುಪ ಹೇಗಿದ್ದರೂ ಹಲವಾರು ಹಲ್ಕಟ್ ದಂಧೆಗಳಿಂದ ಹಲವಾರು ಶತ್ರುಗಳನ್ನು ಕಟ್ಟಿಕೊಂಡಿದ್ದರಿಂದ ಕೊಲೆಯ ಆರೋಪ ತಮ್ಮ ಮೇಲೆ ಬರುವುದಿಲ್ಲವೆಂದೇ ಲೆಕ್ಕಾಚಾರ ಹಾಕಿಬಿಟ್ಟರು. ಜೂನ್ 6 ರಂದು ತೀರ್ಥಹಳ್ಳಿಯ ಕುಲುಮೆಯೊಂದರಲ್ಲಿ ಎರಡು ಹೊಸ ಮಚ್ಚುಗಳು ರೆಡಿಯಾಗಿಯೇ ಬಿಟ್ಟವು. ಅಂದೇ ಸಂಜೆ ಉಡುಪನನ್ನು ಭೇಟಿ ಮಾಡಿದ ಕಿರಾತಕರು "ಸಿಕ್ಕೇಬಿಡ್ತು ಲೋಕಲ್ ಸಿ.ಡಿ.! ಸಖತ್ತಾಗಿದೆ, ಸೂಪರ್ ಸೇಲ್ ಆಗುತ್ತೆ... ರಾತ್ರಿ ಕೊಡ್ತಿವಿ" ಎಂದ ಕ್ಷಣದಿಂದಲೇ ಉಡುಪ ಖುಷಿಗೊಂಡು ಕುಣಿಯತೊಡಗಿದ. ತಾನು ಮೃತ್ಯುನರ್ತನದಲ್ಲಿ ಸಿಕ್ಕಿ ಸಾಯುತ್ತೇನೆಂದು ಈ ಹಲ್ಕಟ್‌ನಿಗೇನು ಗೊತ್ತಿತ್ತು? ರಾತ್ರಿ 8.15ರ ಸುಮಾರಿಗೆ ಉಡುಪನಿಗೆ ಫೋನ್ ಮಾಡಿ ಭೇಟಿ ಮಾಡಿದ ಸಂತೋಷ್, ಸಿ.ಡಿ. ಇರುವ ಸ್ಪಾಟ್‌ಗೆ ಹೋಗೋಣವೆಂದು ಬೈಕ್ ಮೇಲೆ ಹತ್ತಿಸಿಕೊಂಡು ಕೊಪ್ಪ ಸರ್ಕಲ್‌ಗೆ ತಂದ. ಅಲ್ಲಿ ಬಾಲು ಸೇರಿಕೊಂಡ. ಇಬ್ಬರೂ ಸೇರಿ ಇಂದಾವರ ಗುಡ್ಡದ ಬಳಿಗೆ ಉಡುಪನನ್ನು ಉಪಾಯದಿಂದ ಕರೆತಂದರು. ಉಡುಪನಿಗೆಲ್ಲಿ ತಿಳಿಯಬೇಕು ಈ ಕಳ್ಳರ ಸ್ಕೆಚ್? ಅವನ ಕಣ್ಣಮುಂದೆ ಲಕ್ಷಲಕ್ಷ ಹಡಬೆ ದುಡ್ಡು ತಂದುಕೊಡುವ ಮನೆಹಾಳ ಸಿ.ಡಿ.ಯೇ ಕಾಣುತ್ತಿತ್ತು. ಇಂದಾವರ ಗುಡ್ಡದ ಬಳಿಯೇ ಸಂತೋಷ್, ಬಾಲು ಇಬ್ಬರೂ ಹಠಾತ್ ದಾಳಿ ಮಾಡಿ, ಮಚ್ಚುಗಳೇಟಿನಿಂದ ಉಡುಪನ ಹೆಣ ಕೆಡವಿ ಹಾಕಿಬಿಟ್ಟರು. ಉಡುಪನ ಬಾಡಿಯನ್ನು ತೀರ್ಥಹಳ್ಳಿಯ ತುಂಗಾ ಕಾಲೇಜು ಹಿಂದೆ ಎಸೆದು 'ರೈಟ್' ಹೇಳಿ, ಎಸ್ಕೇಪ್ ಆದೆವು ಎಂದುಕೊಂಡರು. ಆದರೆ ಕೊನೆಗೂ ಪೊಲೀಸರು ಒಂದು ಮೊಬೈಲ್ ಫೋನ್ ಆಧಾರದ ಮೇಲೆ ಈ ಇಬ್ಬರು ಕೊಲೆಗಡುಕರನ್ನು ಎಳೆದು ತಂದಿದ್ದಾರೆ.

ಶಿವಮೊಗ್ಗ


ಆರವಿಂದ್


ಸಂತೋಷ್

ಚಿಲ್ರೆ ಬುದ್ಧಿಯ ಉಡುಪ

ತೀರ್ಥಹಳ್ಳಿಯ ಸಮೀಪದ ತುಪ್ಪದ ಮನೆಯ ಸೀತಾರಾಮ್ ಉಡುಪರ ಮಗನಾದ ವಿಶ್ವನಾಥ್ ಉಡುಪನಿಗೆ ಚಿಕ್ಕಂದಿನಿಂದ ಬಿ.ಎಫ್. ನೋಡೋ ಚಟ ಹತ್ತಿಬಿಟ್ಟಿತ್ತು. ಬಿ.ಎಫ್. ನೋಡುನೋಡುತ್ತಲೇ ಬೆಳೆದ ವಿಶ್ವನಾಥ್, ಮೆಲ್ಲಗೆ ಬಿ.ಎಫ್. ಸಿ.ಡಿ.ಗಳನ್ನು ಮಾರತೊಡಗಿದ. ನಂತರ ಸಣ್ಣದಾಗಿ ವೇಶ್ಯಾವಾಟಿಕೆಗೂ ಕೈ ಇಟ್ಟ. ಅಪ್ಪ ಸೀತಾರಾಮ್ ಎಲ್ಲ ಗೊತ್ತಿದ್ದೂ ಸುಮ್ಮನಿದ್ದ. ಹಲವಾರು ಸಲ ಜನರೇ ವಿಶ್ವನಾಥನಿಗೆ ಇಕ್ಕಿಯೂ ಬಿಟ್ಟಿದ್ದರು. ಇದೇ ಜೂನ್ ತಿಂಗಳ ಆರಂಭದಲ್ಲಿ ತೀರ್ಥಹಳ್ಳಿ ತಾಲೂಕು ಮಾಳೂರು ಸಮೀಪದ ಗೋದೂರಿನ ಸುಮಾ ಎನ್ನುವ ಪಿಂಪ್ ಒಬ್ಬಳನ್ನು ಪೊಲೀಸರು ಬಂಧಿಸಿದ್ದರು. ನಂತರ ಹುಬ್ಬಳ್ಳಿಯ ಅಶ್ವಿನಿ, ಜಯಶ್ರೀ ಎಂಬ ಇನ್ನಿಬ್ಬರು ಪಿಂಪ್‌ಗಳು ಜೈಲು ಪಾಲಾಗಿವೆ. ಇವರೆಲ್ಲ ತೀರ್ಥಹಳ್ಳಿ ಸುತ್ತಮುತ್ತಲಿನ ಹುಡುಗಿಯರನ್ನು ವೇಶ್ಯಾವಾಟಿಕೆಗೆ ದೂಡುತ್ತಿದ್ದರು. ಇಲ್ಲೆಲ್ಲಾ ಉಡುಪನ ಕೈ ಇತ್ತೇ ಇತ್ತು.

ಎಣ್ಣೆ ನಾಗಪ್ಪ ಎನ್ನೋ ಬಿಕನಾಸಿ ಇಲ್ಲಿಗೆ ಸಬ್ ಇನ್ಸ್‌ಪೆಕ್ಟರ್ ಆಗಿ ಬಂದಾಗಿನಿಂದ ವಿಶ್ವನಾಥನ ದಂಧೆಯೂ ಜೋರಾಗಿತ್ತು, ಸಿ.ಡಿ. ವ್ಯವಹಾರ, ಬಡ್ಡಿ ವ್ಯವಹಾರದ ದುಡ್ಡಿನಿಂದ ಮಂಗಳೂರಿನ ವೇಶ್ಯಾವಾಟಿಕೆಯ ಲಿಂಕ್ ಪಡೆದ ಉಡುಪ ಪೂರ್ತಿ ದಾರಿ ತಪ್ಪಿದ್ದ. ಮಂಗಳೂರಲ್ಲಿ ಪ್ರವೀಣ್ ಎಂಬ ಸಿ.ಡಿ. ಸುಬ್ಬನೊಬ್ಬ ಪರಿಚಯವಾಗಿದ್ದ. ಇಬ್ಬರ ನಡುವೆ ಪಕ್ಕಾ ಡೀಲು ಕುದುರಿತು. ಉಡುಪ ತೀರ್ಥಹಳ್ಳಿಯ ಕಡೆಯ ಅಮಾಯಕ ಹುಡುಗಿಯರನ್ನು ಮೋಸಗೊಳಿಸಿ ಮಂಗಳೂರಿಗೆ ಸಾಗಿಸತೊಡಗಿದ್ದ. ಅಲ್ಲಿ ಪ್ರವೀಣ್ ದಂಧೆ ನಡೆಸತೊಡಗಿದ್ದ. ಕೊನೆಗೆ ಸಂತೋಷ್, ಬಾಲು ಎಂಬ ಚಿಲ್ಲರೆಗಳಿಂದ ಉಡುಪ ಮಟಾಷ್ ಆಗಿದ್ದಾನೆ. ತೀರ್ಥಹಳ್ಳಿಯ ಸುತ್ತಮುತ್ತ ಇಂತಹ ಹಲವಾರು ಕ್ರಿಮಿಗಳಿವೆ. ಸರ್ಕಲ್ ಇನ್ಸ್‌ಪೆಕ್ಟರ್ ಬಾಲರಾಜ್ ಅವರೆಲ್ಲರನ್ನು ಹಿಡಿಯುವ ಸಾಹಸ ಮಾಡುವರೊ?

-ರಮೇಶ್

ಹಾ.ರಾ.ನಾಗರಾಜ್ ಕೊಲೆ

(10 ನೇ ಪುಟದಿಂದ)

ದೂರು ನೀಡಿದ ತಮ್ಮಯ್ಯ ನಂತರ ಊರಿನವರ ಮಧ್ಯಸ್ಥಿಕೆಗೆ ಒಪ್ಪಿ ಕೇಸು ಹಿಂತೆಗೆದುಕೊಂಡಿದ್ದಾನೆ.

ಭರ್ತಿ ಕಾಸು ಕೇಳಲು ತಯಾರಿ

ಇಷ್ಟಾದ ನಂತರ 14 ಜನರಲ್ಲಿ ತಮ್ಮಯ್ಯನ ಬಗ್ಗೆ ಇದ್ದ ವಿಶ್ವಾಸ ಮಂಗಮಾಯವಾಗಿದೆ. ಇದೀಗ ಜೈಲಿನಲ್ಲಿರುವವರು ಹೊರಬಂದಾಗ ಅವರು ಪ್ರತಿಯೊಬ್ಬರೂ ತಲಾ ಎರಡು, ಮೂರು ಲಕ್ಷ ಕೇಳುವ ಕುರಿತು ತಮ್ಮತಮ್ಮಲ್ಲೇ ಒಪ್ಪಂದ ಮಾಡಿಕೊಂಡಿದ್ದಾರೆ. ಇಲ್ಲವಾದರೆ ತಮ್ಮಯ್ಯ 'ಹ' ಎಂಬ ಸುದ್ದಿ ಜೈಲಿನಿಂದ ಹೊರಬಿದ್ದಿದೆ.


ಎಚ್.ಎಸ್. ಪ್ರಕಾಶ್

ಯಾವ ಪಾಪದ ಫಲವೋ, ಬಡ್ಡಿಗೆ ಸೋತವರ ಶಾಪವೋ ಸದ್ಯಕ್ಕಂತೂ ತಮ್ಮಯ್ಯ ನೆಮ್ಮದಿಯ ನಿಟ್ಟುಸಿರು ಬಿಡುವ ಕಾಲ ಗೋಚರಿಸುತ್ತಿಲ್ಲ.

ಗ್ಯಾರಳ್ಳಿ ತಮ್ಮಯ್ಯ ಬಡ್ಡಿಕೋರ ನಿಜ. ಹಾಗೆಯೇ ಆತನ ಬಡ್ಡಿ ಎಷ್ಟೋ ಅಮಾಯಕರನ್ನು ಬಲಿ ತೆಗೆದುಕೊಂಡಿದೆ ನಿಜ. ಕೆಲವರಂತೂ ತಮ್ಮ ಆತ್ಮಹತ್ಯೆ ಪತ್ರದಲ್ಲಿ ತಮ್ಮಯ್ಯನ ಹೆಸರು ಬರೆದಿಟ್ಟೇ ಸತ್ತರು. ಆಗೆಲ್ಲ ಪೊಲೀಸರಿಗೆ ಪೇಡಾ ತಿನ್ನಿಸಿ ಬಚಾವಾದ ತಮ್ಮಯ್ಯ ಇದೀಗ "ಅಯ್ಯೋ ಪಾಪ ಬದುಕಿಕೋ ಪಾಪಿ" ಎಂದು ಎರಡು ಕುಟುಂಬದೊಂದಿಗೆ ರಾಜಿ ಮಾಡಿಸಿದ ತಮ್ಮಯ್ಯನ ಆಪ್ತೀಯ ಸ್ನೇಹಿತ ಗಿರ್ರ ಕುಮಾರ ಮತ್ತು ಆತನ [illegible] ಬಗ್ಗೆ ಹೇಳುವುದೇನು ಗೊತ್ತಾ, "ಗಿರ್ರ ಕುಮಾರ [illegible] ಸುಂಗಿದರು" ಅಂತ.

ಸದ್ಯ ರಾಜಿ ಮಾಡಿರುವ ಹಣ ಇದೇ ಗಿರ್ರ ಕುಮಾರ ಮತ್ತು ಮಾಜಿ ನಗರಸಭಾ ಸದಸ್ಯ ಮೂಡಿಸಹಳ್ಳಿ ವಾಸು ಅವರ ಜಂಟಿ ಖಾತೆಯಲ್ಲಿದೆ. ಕೇಸು ಸಂಪೂರ್ಣ [illegible] ನಂತರ ಆ ಹಣ ಹಾ.ರಾ. ನಾಗರಾಜನ [illegible] ಸೇರುತ್ತದೆ. ಅಷ್ಟರಲ್ಲಿ ಗ್ಯಾರಳ್ಳಿ ತಮ್ಮಯ್ಯ [illegible] ಹೊಸ ವರಸೆ ತೆಗೆಯುತ್ತಾನೋ ಕಾದು ನೋಡಬೇಕು.

ಘಟನೆಯ ವಿವರ

ಅದು ಸೆಪ್ಟೆಂಬರ್ 10 ನೇ ತಾರೀಖು, ಶನಿವಾರ. ಹಾಸನದಿಂದ ಕೂಗಳತೆಯ ದೂರದಲ್ಲಿರುವ ಬೇಬಾರು ರಸ್ತೆಯ ಹೆರಿಟೇಜ್ ಕ್ಲಬ್ ಬಳಿ ಮಾರಕಾಸ್ತ್ರಗಳನ್ನು ಹಿಡಿದು ತಮ್ಮಯ್ಯ ತನ್ನ ಪುಂಡ ಪಡೆಯೊಂದಿಗೆ ಕಾದಿದ್ದ. ಕ್ಲಬ್‌ನಿಂದ ತನ್ನ ಮಕ್ಕಳು ಮತ್ತು ಹಿಂಬಾಲಕರೊಂದಿಗೆ ಬಂದ ನಾಗರಾಜ್ ತನ್ನ ಟಾಟಾ ಸುಮೋದಲ್ಲಿ ಬರುತ್ತಿದ್ದಾಗ ಹಾಸನದ ಬಳಿ ದಾಳಿಯಿಟ್ಟ ಗುಂಪು ಆತನ ಮಕ್ಕಳು ಮತ್ತು ಹಿಂಬಾಲಕರ ಕಣ್ಮುಂದೆಯೇ ಅತ್ಯಂತ ಅಮಾನುಷವಾಗಿ ಕೊಲೆ ಮಾಡಿ ಹೋಗಿತ್ತು. ಆವತ್ತು ಆ ಕೊಲೆಯಿಂದ ಆಘಾತಕ್ಕೆ ಒಳಗಾದ ಹಾಸನ ನಗರ ಬಂದ್ ಆಚರಿಸಿತ್ತು. ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಜನರು ಹಾ.ರಾ. ನಾಗರಾಜನ ಪಾರ್ಥಿವ ಶರೀರದ ಮೆರವಣಿಗೆಯಲ್ಲಿ ಭಾಗವಹಿಸಿ ಆರೋಪಿ ಗ್ಯಾರಳ್ಳಿ ತಮ್ಮಯ್ಯ ಮತ್ತು ಹಂತಕರ ಪಡೆಯನ್ನು ಬಂಧಿಸುವಂತೆ ಒತ್ತಾಯಿಸಿದ್ದರು. ಆಗ ಹಾಸನದ ಗ್ರಾಮಾಂತರ ಠಾಣೆಯ ಇನ್ಸ್‌ಪೆಕ್ಟರ್ ವೇಣುಗೋಪಾಲ್ ಒಂದು FIR ದಾಖಲಿಸಿದರು. ಐಪಿಸಿ 143, 147, 148, 427, 324, 307 ಮತ್ತು 302 ಸೆಕ್ಷನ್‌ಗಳನ್ನು ತಾತ್ಕಾಲಿಕವಾಗಿ ದಾಖಲಿಸಿಕೊಂಡು ಕೇಸಿಗೆ ತೇಪೆ ಹಚ್ಚುವ ಕೈಂಕರ್ಯವನ್ನು ಪ್ರಾರಂಭಿಸಿದರು.

ರಾಜಕಾರಣಿಗಳ ದೌಡು

ಕಡ್ಡಿ ನಾಗರಾಜ್‌ನಿಂದ ಹಾ.ರಾ. ನಾಗರಾಜ್‌ವರೆಗೆ ಬೆಳೆದಿದ್ದ ನಾಗರಾಜ್ ಹಲವಾರು ಹೋರಾಟಗಳಲ್ಲಿ ಸಕ್ರಿಯವಾಗಿದ್ದ. ಡಾ. ರಾಜ್‌ಕುಮಾರ್ ಸಂಘದ ಅಧ್ಯಕ್ಷನಾಗಿದ್ದಲ್ಲದೆ, ಕಾವೇರಿ ಹೋರಾಟ, ರೈತ ಸಂಘದ ಹೋರಾಟ, ನೀರಾ ಚಳವಳಿ, ಹೇವಿನ್ ಚಳವಳಿಗಳಲ್ಲಿ ಭಾಗವಹಿಸಿ ಹತ್ತಾರು ಕೇಸುಗಳನ್ನು ಹಾಕಿಸಿಕೊಂಡಿದ್ದ. ಜ್ಞಾನದೀಪ ಎಂಬ ದಿನಪತ್ರಿಕೆಯನ್ನು ಹೊರ ತರುತ್ತಿದ್ದ. ಅದರೊಂದಿಗೆ ನಾಲ್ಕು ಬಾರಿ ನಗರಸಭೆ ಸದಸ್ಯನಾಗಿ ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾಗಿದ್ದ.

ಯಾವಾಗ ಹಾ.ರಾ. ನಾಗರಾಜ್ ಕೊಲೆ [illegible] ಆಸ್ಪತ್ರೆಯವರೆಗೆ ನಿರ್ಧಾರವಸ್ಥೆಯಲ್ಲಿದ್ದ [illegible] ಶ್ರೀಕಂಠಯ್ಯ, ಮಾಜಿ ಲೋಕಸಭಾ ಸದಸ್ಯ ಜಿ. ಪುಟ್ಟಸ್ವಾಮಿಗೌಡ ಮತ್ತು ಅವತ್ತಿನ ಮಂಕು ಮಂತ್ರಿ ವಾರ್ತಾ ಸಚಿವ ಬಿ. ಶಿವರಾಂ ಎಂಬ ಕಾಂಗ್ರೆಸ್ ನಾಯಕರು ಜ್ಞಾನೋದಯವಾದಂತಾಗಿ ಹಾಸನಕ್ಕೆ ಬಂದಿದ್ದರು. ಹಾಗೆ ಬಂದವರೇ ಜೆಡಿಎಸ್ ತಲೆಗೆ ಕೊಲೆಯ ಆರೋಪವನ್ನು ಕಟ್ಟಿ ಕೆಪಿಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೇಸಿನ ತನಿಖೆಯನ್ನು ಸಿಓಡಿಗೆ ವಹಿಸುವಂತೆ ಮಾಡಿದ್ದರು. ಆದರೆ ಇದೇ ರಾಜಕಾರಣಿಗಳು ಈಗ ಹಾ.ರಾ. ನಾಗರಾಜ್ ಕೇಸ್ ಬಿದ್ದರೂ ಕೇರ್ ಮಾಡುತ್ತಿಲ್ಲ ಯಾಕೆ ಎಂದು ಕಾಂಗ್ರೆಸ್‌ನಲ್ಲಿಯೇ ಚರ್ಚೆಗೆ ಗ್ರಾಸವಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಕಣ್ಣೀರಿಟ್ಟಿದ್ದ ಮನುಷ್ಯ

[illegible] ಬಂದವರೆ ಹೋದರ ಘೇಲ್ಗೊಂದರಂತೆ ಬರುತ್ತವೆ ಎಂಬ ಮಾತು ನಾಗರಾಜ್ ವಿಚಾರದಲ್ಲಿ ಅಕ್ಷರಶಃ ಸತ್ಯವಾಗಿತ್ತು. [illegible] ದಿನಪತ್ರಿಕೆ ಸಾಲದು ಎಂಬಂತೆ 'ಬಂಡಾಯ'ವೆನ್ನುವ ವಾರಪತ್ರಿಕೆ ಪ್ರಾರಂಭಿಸಿ ಅದಕ್ಕೆ ತಲೆ ಮಾಸಿದ ಪತ್ರಕರ್ತರನ್ನು ನೇಮಿಸಿಕೊಂಡಿದ್ದ. ಅವರೆಲ್ಲ ಜನತಾದಳದ ಮುಖಂಡ ಎಚ್.ಡಿ. ರೇವಣ್ಣ ಹಾಗೂ ಸ್ಥಳೀಯ ಶಾಸಕ [illegible] ಸಭಾ ಸದಸ್ಯ ಎಚ್.ಕೆ. [illegible] ವರಿಷ್ಠ ಪ್ರಕಾಶ್ ಅವರ [illegible] ಪದಗಳನ್ನು ಬಳಸಿ ಪತ್ರಿ [illegible]

[illegible] ಅವರ ಬೆಂಗಾವಲಿಗೆ ಬರಲು ಅವರದೇ ಪಕ್ಷದ ನಾಯಕರು ಯೋಚಿಸುವಂತೆ ಮಾಡಿತ್ತು. ನಂತರದ ದಿನಗಳಲ್ಲಿ ನಡೆದ ಗಿರಿಜಾ ಶಂಕರ್ ಹತ್ಯೆ, ಅದರ ದ್ವೇಷಕ್ಕೆ ಬಲಿಯಾದ ದ್ಯಾವಲಾಪುರ ಬೆಂಕಿ ಪ್ರಕರಣದಲ್ಲಿ ಇದೇ ಹಾ.ರಾ. ನಾಗರಾಜ್ ಮತ್ತು ಮಕ್ಕಳನ್ನು ಆರೋಪಿಗಳನ್ನಾಗಿ ಮಾಡಿ ಜೈಲಿಗೆ ಕಳುಹಿಸಲಾಗಿತ್ತು. ಸತತ ಮೂರು ತಿಂಗಳು ಜೈಲುವಾಸ ಅನುಭವಿಸಿ ಹೊರಬಂದ ನಾಗರಾಜ್ ಪುನಃ ದೇವೇಗೌಡರ ವಿರುದ್ಧ ದ್ವೇಷ ಸಾಧಿಸಲು ವಿರೋಧಿ ಡಿ.ಕೆ. ಶಿವಕುಮಾರ್ ಮತ್ತು ಕನಕಪುರ ಸಂಸದೆ ತೇಜಸ್ವಿನಿಯವರನ್ನು ಕರೆದು ಅದ್ದೂರಿ ರಾಜ್ಯೋತ್ಸವ ಮಾಡಿದ್ದ. ಅದಾದ ಕೆಲ ದಿನಗಳಲ್ಲಿ ನಾಗರಾಜ್ ಮಾರ್ಕೆಟ್ ತೆರವು ಗೊಳಿಸುವುದಕ್ಕೆ [illegible] ಮಾಡಿದ ಎಂಬ ನೆಪವೊಡ್ಡಿ ಪೊಲೀಸ್ [illegible] ಕೇಸ್ ದಾಖಲಿಸಿತು. ಅಂದು [illegible] ಹಾ.ರಾ.ನಾ. ಪತ್ರಿಕಾಗೋಷ್ಠಿ ಕರೆದು ತನ್ನನ್ನು ಮತ್ತು ತನ್ನ ಮಕ್ಕಳನ್ನು ಮುಗಿಸಲು ಜಿಲ್ಲೆಯ ಜೆಡಿಎಸ್ ಧುರೀಣರು ಪ್ರಯತ್ನಿಸುತ್ತಿದ್ದಾರೆ ಎಂದು ಕಣ್ಣೀರು ಸುರಿಸಿದ್ದ. ಹೀಗೇ ಮುಂದುವರೆದರೆ ರೇವಣ್ಣ ಅವರ [illegible] ಎದುರು ಕುಟುಂಬ ಸಮೇತರಾಗಿ ಆತ್ಮಹತ್ಯೆ [illegible]

-[illegible]

ದಾಸ ಒಕ್ಕಲಿಗರ ಏಕೈಕ ವಿದ್ಯಾ ಸಂಸ್ಥೆ

ಹಾಸನದ ಪ್ರತಿಯೊಂದು ವಿಚಾರಕ್ಕೆ ಹೇಗೆ ರಾಜಕೀಯ ಆವರಿಸುತ್ತದೋ ಹಾಗೆಯೇ ಇಲ್ಲಿಯ ಪ್ರತಿಯೊಂದು ಸಂಸ್ಥೆಗೆ ಒಕ್ಕಲಿಗರ ದಾಸ ಒಕ್ಕಲಿಗ ಹಾಗೂ ಮುಳ್ಳು ಒಕ್ಕಲಿಗ ಪಂಗಡಗಳ ಹೆಸರು ಲೇಪಿತವಾಗಿ ಪ್ರತಿಷ್ಠೆಯ ಪ್ರಶ್ನೆಗಳಾಗುತ್ತವೆ. ಬಡ್ಡಿ ದೊರೆ ಗ್ಯಾರಳ್ಳಿ ತಮ್ಮಯ್ಯ ಹಾಸನದಲ್ಲಿ ಕೆಲ ವರ್ಷಗಳ ಹಿಂದೆ ಪ್ರಾರಂಭಿಸಿದ್ದ ಎಸ್.ವಿ.ಎಂ. ಶಿಕ್ಷಣ ಸಂಸ್ಥೆಯ ಶ್ರೀ ವರಲಕ್ಷ್ಮಿ ಮಹಾವಿದ್ಯಾಲಯವೂ ಇದಕ್ಕೆ ಹೊರತಲ್ಲ.

ಹಾಸನದಲ್ಲಿ ಇರುವ ಹತ್ತಾರು ವಿದ್ಯಾಸಂಸ್ಥೆಗಳಿಗಿಂತ ವಿಭಿನ್ನವಾಗಿ ತಳವೂರುತ್ತಿದ್ದ ವಿದ್ಯಾಸಂಸ್ಥೆ ಇದಾಗಿತ್ತು ಮಾತ್ರವಲ್ಲ ಹಾಸನದ ದಾಸ ಒಕ್ಕಲಿಗರ ಏಕೈಕ ವಿದ್ಯಾಸಂಸ್ಥೆಯಾಗಿತ್ತು, ಅದನ್ನು ಹಾಳು ಮಾಡಲು ಅವರದೇ ಒಂದು ಸ್ವಂತ ಶಾಲೆಯಿದ್ದ ಜನತಾದಳದ ಮತ್ತೊಂದು ಒಕ್ಕಲಿಗ ಪಂಗಡದ ನಾಯಕರು ಸಂಚು ಹಾಕಿದ್ದರು. ಹಾಗಾಗಿ ಹಾ.ರಾ. ನಾಗರಾಜ್ ಹತ್ಯೆಯನ್ನು ಈ ಗ್ಯಾರಳ್ಳಿ ತಮ್ಮಯ್ಯನ ಉಪಸ್ಥಿತಿಯಲ್ಲಿ ನಡೆಯುವಂತೆ ನೋಡಿಕೊಂಡು ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆದರು ಎಂಬ ಮಾತು ನಗರದಲ್ಲಿ ವ್ಯಾಪಕವಾಗಿ ಹರಡಿಕೊಂಡಿದೆ.

ತಮ್ಮಯ್ಯನಿಗೆ ಒಂದು ತಿಳಿಯಬೇಕಾದ ವಿಚಾರವೆಂದರೆ ಒಂದು ಕ್ಲಬ್ಬು ಪ್ರಾರಂಭಿಸಿ ಅದನ್ನು ಬೆಳೆಸಬಹುದು. ಒಂದು ಬಾರು ಪ್ರಾರಂಭಿಸಿ ಅದನ್ನು ಉಳಿಸಿಕೊಳ್ಳಬಹುದು. ತೀರಾ ಬಡ್ಡಿ ದಂಧೆ ಮಾಡಿ ಅದನ್ನೂ ಗೆಲ್ಲಿಸಿಕೊಳ್ಳಬಹುದು. ಆದರೆ ಶಿಕ್ಷಣ ಸಂಸ್ಥೆಯೊಂದನ್ನು ಕಟ್ಟಿ ಅದನ್ನು ತನ್ನ ಸ್ವಂತ ಹಿತಾಸಕ್ತಿಗೆ ಬಲಿ ಕೊಟ್ಟರೆ ಆತನ ಪಂಗಡದ ಒಕ್ಕಲಿಗರೂ ಕ್ಷಮಿಸಲಾರರು.

ಕೌಮುದಿ-ತುಮಾಲು ಕೃಷ್ಣಯ್ಯನವರ ಕೊಲೆ ನೆನಪು ಇನ್ನೂ ಹಸಿಯಾಗಿರುವಾಗಲೇ, ಅಲ್ಲಿಗೆ ಹತ್ತಿರದ ಕೋಟದ ಪಡುಕರೆ ಎಂಬಲ್ಲಿ ಭಜರಂಗಿಗಳು ಮೊನ್ನೆ ತಾ. 11.6.2006 ಭಾನುವಾರ ರಾತ್ರಿ ಮುಸ್ಲಿಮರ ಜೊತೆ ಕಾಲು ಕೆರೆದು ಜಗಳವಾಡಿ ಇನ್ನೊಂದು ಭೀಕರ ಪ್ರಕರಣಕ್ಕೆ ಕಾರಣರಾಗಿದ್ದಾರೆ. ಪಡುಕರೆ ಕೋಟದ ಬಳಿ ಕಡಲದಂಡೆಯ ಮೇಲೆ ಇರುವ ಒಂದು ಹಳ್ಳಿ. ಉಡುಪಿಯಿಂದ ಉತ್ತರಕ್ಕೆ ಸೀತಾನದಿ ಕಡಲನ್ನು ಕೂಡುವಲ್ಲಿ ಈ ಕಡೆ ಹಂಗಾರಕಟ್ಟೆ, ಆ ಕಡೆ ಕೋಡಿ.

ಕೆಲವು ವರ್ಷಗಳ ಕೆಳಗೆ, ಕೇಂದ್ರದಲ್ಲಿ ಎನ್‌ಡಿಎ ಸರ್ಕಾರವಿದ್ದ ಸಂದರ್ಭದಲ್ಲಿ ಸಂಘ ಪರಿವಾರ, ಕರಾವಳಿಯ ಊರುಊರುಗಳಲ್ಲೂ ಹಿಂದೂ ಸಮಾಜೋತ್ಸವ ಮತ್ತು ಭಜರಂಗದಳದ ಘಟಕಗಳ ಸ್ಥಾಪನೆ-ಇವುಗಳ ಮುಖಾಂತರ ತಮ್ಮ ಕೋಮುದ್ವೇಷದ ಸಿದ್ಧಾಂತವನ್ನು ಹರಡುವ ಚಳವಳಿ ನಡೆಸಿತು. ಅದೇ ಸುಮಾರಿಗೆ ಕೋಟದ ಪಡುಕರೆಯಲ್ಲೂ ಭಜರಂಗದಳದ ಒಂದು ಘಟಕ ಉದ್ಘಾಟನೆಗೊಂಡಿತು. ಇದರೊಂದಿಗೆ ಸ್ಥಳೀಕರಾದ ಮುಸ್ಲಿಮರ ಜೊತೆ ಒಂದಲ್ಲ ಒಂದು

ಹುಡುಗನ ಮೇಲೆ ಸುಳ್ಳೇ ಕೇಸು ಹಾಕಿದರು. ಜೂನ್ 10 ರಂದು ಪಡುಕರೆಯಲ್ಲಿ ಅಶ್ರಫ್‌ನ ನಿಕಾ ನಡೆಯುವುದಿತ್ತು, ಆ ರಾತ್ರಿ ಸಮೀಪದ ಕೋಟ, ತೆಕ್ಕಟ್ಟೆ, ಪಾರಂಪಳ್ಳಿ ಮುಂತಾದ ಹಳ್ಳಿಗಳಿಂದ ಬಂದ ಸುಮಾರು 300 ಯುವಕರ ಗುಂಪು ರಾಡು, ಕತ್ತಿ, ಪೆಟ್ರೋಲ್ ತುಂಬಿದ ಬಾಟಲಿ ಮುಂತಾದವನ್ನು ಹಿಡಿದು ಮದುವೆ ಮನೆಯನ್ನು ಸುತ್ತುವರಿಯಿತು. ಅಲ್ಲಿ ದೊಡ್ಡ ಸಂಖ್ಯೆಯಲ್ಲಿ ಮದುವೆಗೆಂದು ಬಂದವರು ಇದ್ದುದನ್ನು ಕಂಡ ಗುಂಪು ಸಮೀಪದ ಇಬ್ರಾಹಿಂ

ಕಾರಂತರ ಕೋಟದಲ್ಲಿ ಭಜರಂಗಿಗಳ ಹಾವಳಿ


ಕನ್ನಾನ, ಐರೋಡಿ, ಗುಂಡ್ಮಿ, ಪಾರಂಪಳ್ಳಿ, ಕೋಟತಟ್ಟು, ಪಡುಕರೆ, ಇವು ಒಂದಕ್ಕೊಂದು ಒತ್ತಿಕೊಂಡಿರುವ ಜನನಿಬಿಡ ಹಳ್ಳಿಗಳು.

ಶಿವರಾಮ ಕಾರಂತರ 'ಮರಳಿ ಮಣ್ಣಿಗೆ'ಯ ಕಥಾನಕ ನಡೆಯುವುದು ಈ ಪರಿಸರದಲ್ಲೇ. ತನ್ನ ಪೌರೋಹಿತ್ಯದ ವೃತ್ತಿಯಿಂದ ಬೇಸತ್ತು, ಮಗನಿಗೆ ಇಂಗ್ಲಿಷ್ ವಿದ್ಯಾಭ್ಯಾಸ ಕೊಡಿಸುವುದರ ಮುಖಾಂತರ ಆಧುನಿಕ ನಾಗರಿಕತೆಯ ಕನಸು ಕಂಡ ಆ ಕಾದಂಬರಿಯ ನಾಯಕ ರಾಮೈತಾಳನ ಕರ್ಮ ಭೂಮಿ ಇದು. ಅನಾದಿಕಾಲದಿಂದಲೂ ಈ ಪ್ರದೇಶದಲ್ಲಿ ಮುಸ್ಲಿಮರು ನೆಲೆಸಿದ್ದಾರೆ. ತಮ್ಮ ಆಹಾರ, ಉಡುಪು ತೊಡಪು, ಉದ್ಯೋಗ-ಎಲ್ಲದರಲ್ಲೂ ಈ ಪರಿಸರದ ಇತರರಂತೆಯೇ ಇರುವ, ಬಹುತೇಕ ಬ್ಯಾರಿ ಭಾಷೆ ಮಾತನಾಡುವ ಈ ಮುಸ್ಲಿಮರ ಸಂಖ್ಯೆ ಹೆಚ್ಚೇನೂ ಇಲ್ಲ, ಅವರದ್ದು ನೂರರಲ್ಲಿ ಹತ್ತು ಮನೆಗಳಿರಬಹುದು.

'ಮರಳಿ ಮಣ್ಣಿಗೆ'ಯಲ್ಲೂ ಈ ಬ್ಯಾರಿಗಳ ಉಲ್ಲೇಖ ಇದೆ. ಕರಾವಳಿಯ ಇತರ ಎಡೆಗಳಂತೆ ಇಲ್ಲಿಯೂ ಕೂಡ ಮುಸ್ಲಿಮರ ಮನೆಗಳು ಇತರ ಸಮುದಾಯ ಗಳವರ ನೆರೆಕರೆಯಲ್ಲೇ ಇವೆ. ಇಲ್ಲಿ ಎಲ್ಲಿಯೂ ಮುಸ್ಲಿಮರ ಪ್ರತ್ಯೇಕ ಕೇರಿಗಳಿಲ್ಲ; ಈ ಸಮುದಾಯಗಳ ನಡುವೆ ವಿರಸವಂತೂ ಇರಲೇ ಇಲ್ಲ, ರಾಮಜನ್ಮಭೂಮಿ ಚಳವಳಿಯ ದಿನಗಳಲ್ಲೂ ಈ ಹಳ್ಳಿಗಳಲ್ಲಿ ಕೋಮು ದ್ವೇಷ ಕಾಲಿಟ್ಟರಲಿಲ್ಲ.

ಕುಂಟು ನೆಪಕ್ಕೆ ಜಗಳ ಕಾಯುವ ಹೊಸ ಪ್ರವೃತ್ತಿಯೊಂದು ಈ ಹಳ್ಳಿಗೆ ಕಾಲಿಟ್ಟಿತು. ಇದೇ ಏಪ್ರಿಲ್‌ನಲ್ಲಿ ಈ ಪರಿಸರದ ಮೂರು ದೇವಸ್ಥಾನಗಳ ಎದುರು ಏಕಕಾಲಕ್ಕೆ ಗೋಮಾಂಸ ಚೆಲ್ಲಿ ಕೋಮುಗಲಭೆ ಸೃಷ್ಟಿಸುವ ಪಿತೂರಿ ನಡೆಯಿತು. ಆದರೆ ಜನ ಅದನ್ನು ತಲೆಗೇ ಹಚ್ಚಿಕೊಳ್ಳದ್ದರಿಂದ ಅದು ಅಲ್ಲಿಗೇ ತಣ್ಣಗಾಯಿತು.

ಮುಸ್ಲಿಮರ ವಿರುದ್ಧ ದ್ವೇಷ ಸಾಧಿಸಲು ಭಜರಂಗಿಗಳಿಗೆ ಇತ್ತೀಚೆಗೆ ಪಡುಕರೆಯಲ್ಲಿ ಒಂದು ಕಾರಣ ಸಿಕ್ಕಿತು. ಈ ವರ್ಷ ಏಪ್ರಿಲ್‌ನಲ್ಲಿ ಬಂದ ಈದ್ ಹಬ್ಬದ ಪ್ರಯುಕ್ತ ಪಡುಕರೆ ಮಸೀದಿಯವರು, ಹತ್ತಿರದ ಟೆಲಿಫೋನ್ ಕಂಬಗಳಲ್ಲಿ ಬ್ಯಾನರ್ ಕಟ್ಟಿದ್ದರು. ಮಸೀದಿಗೆ ಎದುರಾಗಿ, ಆದರೆ ದೂರದಲ್ಲಿ ಪ್ರಾಚೀನ ಅರಮ ದೇವಸ್ಥಾನವಿದೆ. ಮಸೀದಿಯ ಒಂದು ಬದಿಯಲ್ಲಿ-ಅದು ಕೂಡ ದೂರದಲ್ಲಿ-ಇತ್ತೀಚೆಗೆ ಕಟ್ಟಿರುವ ಭಜನಾ ಮಂದಿರವಿದೆ. ಇಷ್ಟೇ ಕಾರಣಕ್ಕೆ ಮಸೀದಿಯವರು ಆ ಬ್ಯಾನರ್ ತೆಗೆಯಬೇಕು ಎಂದು ಭಜರಂಗಿಗಳು ಹಠ ಹಿಡಿದು, ಕೊನೆಗೆ ತಾವೇ ಆ ಕೆಲಸಕ್ಕೆ ಮುಂದಾದರು. ಇದನ್ನು ಊರಿನ ಕೆಲವು ಮುಸ್ಲಿಮ್ ಯುವಕರು ತಡೆದು ಕೋಟ ಪೊಲೀಸ್ ಠಾಣೆಗೆ ದೂರು ಕೊಟ್ಟರು. ಕೋಟದ ಸಬ್‌ಇನ್ಸ್‌ಪೆಕ್ಟರ್ ಸ್ಥಳಕ್ಕೆ ಬಂದು ರಾಜಿ ಪಂಚಾಯಿತಿಕೆ ಮಾಡಿ ಹೋದರು; ಆದರೆ ಮಾರನೆ ದಿನ ಭಜರಂಗಿಗಳ ದೂರಿನ ಮೇರೆಗೆ ಅಶ್ರಫ್ ಎಂಬ



ಧ್ವಂಸಗೊಂಡ ಇಬ್ರಾಹಿಂರವರ ಮನೆಯ ಒಂದು ದೃಶ್ಯ

ಅವರ ಮನೆ ಮೇಲೆ ದಾಳಿ ನಡೆಸಿತು.


ಈ ದಾಳಿ ನಡೆದ ಎರಡು ದಿನಗಳ ನಂತರ ನಾವು ಇಬ್ರಾಹಿಂ ಅವರ ಮನೆಗೆ ಹೋದಾಗ ಅವರು ಅಂಗಳದಲ್ಲಿ ಹರಡಿಕೊಂಡಿದ್ದ ಗಾಜಿನ ಚೂರು, ಸೈಜುಕಲ್ಲು, ಬಾಟಲಿಗಳು, ಅರೆಸುಟ್ಟ ಟೈರು ಮತ್ತು ಪೂರ್ತ ಸುಟ್ಟ ತಮ್ಮ ಬೈಕುಗಳ ನಡುವೆ ವಿಷಾದದಲ್ಲಿ ನಿಂತಿದ್ದರು. ಭಜರಂಗಿಗಳು, ಅವರ ಮನೆಯ ಕಂಪೌಂಡಿನ 6''x6'' ಗಾತ್ರ ಸಿಮೆಂಟ್ ಕಾಂಕ್ರೀಟ್ ದಳಿಗಳನ್ನೇ ಮುರಿದು, ಅವುಗಳಿಂದಲೇ ಮನೆ ಬಾಗಿಲುಗಳನ್ನು ಜಜ್ಜಿ ಹಾಕಿದ್ದರು. ಮನೆಯ ಹೊರಗೋಡೆಯಲ್ಲಿದ್ದ

ಸ್ವಿಚ್ ಬೋರ್ಡಿನ ಕೆಳಗೆ ಬೆಂಕಿ ಹೊತ್ತಿಸಿದ್ದರಿಂ... ಸ್ವಿಚ್ ಬೋರ್ಡ್ ಸ್ಫೋಟಗೊಂಡು, ವಯರಿಂಗ್ ಸಂಪೂರ್ಣ ಸುಟ್ಟು, ಟೀವಿ, ಫ್ರಿಜ್ ಮುಂತಾದ ಎಲ್ಲ ಉಪಕರಣಗಳೂ ಗುಜರಿಯಾಗಿದ್ದವು.

ಮನೆಯ ಅಷ್ಟೂ ಕಿಟಕಿಗಳ ಗಾಜು ಪುಡಿಯಾಗಿ... ಇಬ್ರಾಹಿಂ ನಮ್ಮೊಡನೆ ಅಂದು ರಾತ್ರಿ ನಡೆದದ್ದನ್ನು ವಿವರಿಸುತ್ತ "ಎಲ್ಲ ಬಿಟ್ಟು ನನ್ನ ಮನೆಗೆ ಯಾ... ನುಗ್ಗಿದರು? ನಾನು ಈ ಯಾವ ಗಲಾಟೆಯಲ್ಲೂ ಇದ್ದವನಲ್ಲ, ಮನೆಗೆ ನುಗ್ಗಿದವರಲ್ಲಿ ಕೆಲವರನ್ನು ನಾನು ನಿತ್ಯ ನೋಡುವವನು. ಅವರು ಯಾಕೆ ಹೀಗೆ ಮಾಡಿದರು?" ಎಂದು ವ್ಯಥೆ ತೋಡಿಕೊಂಡರು. ಈಗ ತನ್ನ ಮಧ್ಯ ವಯಸ್ಸಿನಲ್ಲಿರುವ ಇಬ್ರಾಹಿಂ ಹುಟ್ಟಿ ಬೆಳೆದದ್ದು ಪಡುಕರೆಯಲ್ಲೇ. ಅವರ ಹಿರಿಯರೂ ಅದೇ ಊರಿನವರು. ಪಡುಕರೆಯಲ್ಲಿ ಮೀನು ಸಂಸ್ಕರಿಸುವ ಒಂದು ಫ್ಯಾಕ್ಟರಿ ನಡೆಸುತ್ತಿರುವ ಇಬ್ರಾಹಿಂ ತಕ್ಕಮಟ್ಟಿಗೆ ಸ್ಥಿತಿವಂತರು. ಮೀನಿನ ಸೀಸನ್‌ನಲ್ಲಿ ಅವರು ತಮ್ಮ ಫ್ಯಾಕ್ಟರಿಯಲ್ಲಿ 75 ರಿಂದ 200 ಜನರಿಗೆ ಉದ್ಯೋಗ ಒದಗಿಸುತ್ತಿದ್ದು ಇವರೆಲ್ಲರೂ ಸ್ಥಳೀಕರು ಮತ್ತು ಹೆಚ್ಚಿನವರು ಹಿಂದೂಗಳು. ಇಬ್ರಾಹಿಂ ಎಂದೂ ಮತಾಂಧರಾದದ್ದಿಲ್ಲ. ಅವರಿಂದ ಧನ ಸಹಾಯ ಬಯಸಿದ ಯಾವುದೇ ದೇವಸ್ಥಾನಕ್ಕೂ ಅವರು ಇಲ್ಲ ಎಂದದ್ದೂ ಇಲ್ಲ, ಮುಸ್ಲಿಮರಿಂದ ನೆರವು ಕೇಳಬಾರದು ಎಂದು ಇಲ್ಲಿಯ ದೇವಸ್ಥಾನ ಗಳವರಿಗೂ ಅನ್ನಿಸಿದ್ದಿಲ್ಲ; ಕೊಡಬಾರದು ಎಂದು ಇಲ್ಲಿನ ಮುಸ್ಲಿಮರಿಗೂ ಅನ್ನಿಸಿದ್ದಿಲ್ಲ- ಇವತ್ತಿನವರೆಗೆ. ಕರಾವಳಿಯ ಊರು ಊರುಗಳಲ್ಲಿ ಭಜರಂಗಿಗಳು ಈಗ ನಾಶ ಗೊಳಿಸಲು ಹೊರಟಿರುವುದು ಈ ಸಂಬಂಧ ವನ್ನು.

ಆ ರಾತ್ರಿ ಇಬ್ರಾಹಿಂ ಅವರ ಮನೆ, ಗುಂಪು ದಾಳಿಯಿಂದ ಧ್ವಂಸವಾದದ್ದನ್ನು ಕಂಡು, ಅಲ್ಲೇ ಹತ್ತಿರ ವಾಸವಾಗಿದ್ದ ಬದ್ರುದ್ದೀನ್ ಎಂಬುವರಿಗೆ ಹೃದಯಾ ಘಾತವಾಯಿತು. ಆದರೆ ಭಜರಂಗಿಗಳ ಗುಂಪು, ಆಸ್ಪತ್ರೆಗೆ ಅವರನ್ನು ಸಾಗಿಸುತ್ತಿದ್ದ ಕಾರನ್ನು ಅಡ್ಡಗಟ್ಟಿ ಕಲ್ಲು ತೂರಿತು. ಬದ್ರುದ್ದೀನ್ ಕಾರಿನಲ್ಲಿ ಕೂತಿದ್ದಂತೆಯೇ ನಿಧನರಾದರು. ಅವರಿಗೆ ಕೇವಲ 45 ವರ್ಷ ಪ್ರಾಯವಾಗಿತ್ತು. ಇಬ್ರಾಹಿಂ ಅವರ ಪತ್ನಿ ಲೈಲಾಬಿ ಕೂಡ ಆಘಾತಕ್ಕೆ ಒಳಗಾದರು. ಆ ಮನೆಗೆ ಸಮೀಪದಲ್ಲೇ ಇರುವ ರಿಜ್ವಾನ್ ಎಂಬುವರ ಮನೆಯ ಮೇಲೂ

ಮಹಿಳೆಯರ ತುತ್ತಿಗೆ ಬಾಯಿ ಹಾಕಿದ ಇಸ್ಕಾನ್ ಜುಟ್ಟುಗಳು!



ಇಸ್ಕಾನ್, ಅದಮ್ಯ ಚೇತನ ಎಂಬ ಜುಟ್ಟುಗಳ ಕಾಟಕ್ಕೆ ರೋಸಿ ಹೋದ ಬಿಸಿಯೂಟ ತಯಾರಿಸುವ ಮಹಿಳೆಯರು ರಾಜ್ಯಾದ್ಯಂತ ಕುದಿಯುತ್ತಿದ್ದಾರೆ.

ಬೆಂಗಳೂರು, ಹುಬ್ಬಳ್ಳಿ-ಧಾರವಾಡ, ಹಾಸನ, ಮೈಸೂರು, ಮಂಗಳೂರುಗಳಲ್ಲಿ ಈ ಜುಟ್ಟುಗಳು ಹಿಂದುಳಿದ, ದಲಿತ, ಅಲ್ಪಸಂಖ್ಯಾತ ಮಹಿಳೆಯರ ತುತ್ತಿಗೆ ಕೈ ಹಾಕಿ, ಅವರ ಹೊಟ್ಟೆಯ ಮೇಲೆ ಹೊಡೆಯುತ್ತಲೇ ಇವೆ.

ಇದೀಗ ಹುಬ್ಬಳ್ಳಿ-ಧಾರವಾಡದ ದಿಟ್ಟ ಮಹಿಳೆಯರು ಈ ಜುಟ್ಟುಗಳನ್ನು ಪೋಷಿಸುತ್ತಿರುವ ಸರ್ಕಾರದ ವಿರುದ್ಧ ಭಾರಿ ಪ್ರತಿಭಟನೆ ನಡೆಸಿ ಜಿಲ್ಲಾಡಳಿತಕ್ಕೆ, ಜಿಲ್ಲೆಯ ಸಚಿವರುಗಳಿಗೆ ಬಿಸಿಯೂಟದ ಬಿಸಿ ತಾಗಿಸಿಬಿಟ್ಟಿದ್ದಾರೆ.

ಸರ್ಕಾರ ಬಿಸಿಯೂಟದ ಜವಾಬ್ದಾರಿಯನ್ನು ಇಸ್ಕಾನ್, ಅದಮ್ಯ ಚೇತನಗಳ ತಟ್ಟೆಗೆ ಹಾಕುತ್ತಾ, ಬಿಸಿಯೂಟ ತಯಾರಿಸುವವರನ್ನು ಅತಂತ್ರ ಸ್ಥಿತಿಗೆ ನೂಕುತ್ತಿರುವುದನ್ನು ವಿರೋಧಿಸಿದ ಮಹಿಳೆಯರು ಕೆಂಬಾವುಟದ ಅಡಿಯಲ್ಲಿ ಸಂಘಟಿತರಾಗಿರುವುದು ಜಿಲ್ಲಾಡಳಿತಕ್ಕೆ ಚುರುಕು ಮುಟ್ಟಿಸಿದೆ.

ಸರ್ಕಾರಿ ಯೋಜನ, ಜನಿವಾರೀ ಭೋಜನ!

ರಾಜ್ಯಾದ್ಯಂತ ಲಕ್ಷಾಂತರ ಬಡ ಮಹಿಳೆಯರು ಸರ್ಕಾರದ ಮಧ್ಯಾಹ್ನದ ಬಿಸಿಯೂಟ ಯೋಜನೆಯಲ್ಲಿ ಕಳೆದ 4 ವರ್ಷಗಳಿಂದ ದುಡಿಯುತ್ತಿದ್ದಾರೆ. ಈಗ ಸರ್ಕಾರ ಹಂತ ಹಂತವಾಗಿ ಈ ಯೋಜನೆಯ ಉಸ್ತುವಾರಿಯನ್ನು ಭೋಜನಪ್ರಿಯ ಭಟ್ಟಂಭಟ್ಟರ ಕೈಗೆ ವರ್ಗಾಯಿಸುತ್ತಿದೆ. ಧಾರವಾಡ ಜಿಲ್ಲೆಯಲ್ಲಿ ಈ ಯೋಜನೆ ಆರಂಭಗೊಂಡಾಗ 2056 ಮಹಿಳೆಯರು ಕೆಲಸ ಪಡೆದು ತುತ್ತಿನ ಚೀಲ ತುಂಬಿಸಿಕೊಳ್ಳುತ್ತಿದ್ದರು. ಈಗ 1900 ಜನರ ತುತ್ತಿಗೆ ಕುತ್ತು ಬಂದು, ಕೇವಲ 600 ಮಹಿಳೆಯರು ಮಾತ್ರ ಕೆಲಸದಲ್ಲಿದ್ದಾರೆ. ಸರ್ಕಾರದ ದರಿದ್ರ ನಿಲುವಿನಂತೆ 435 ಕೇಂದ್ರಗಳನ್ನು ಕೃಷ್ಣನ ತುಂಡು ಇಸ್ಕಾನ್, ಬಿಜೆಪಿ ನಾಯಕ ಅನಂತ್‌ಕುಮಾರ್ ಪತ್ನಿ ತೇಜಸ್ವಿನಿಯ ಅದಮ್ಯ ಚೇತನಗಳಿಗೆ ಬಿಟ್ಟುಕೊಡಲಾಯ್ತು. ಈ ಎರಡೂ ಫುಲ್ ಮೀಲ್ಸ್ ಕಬಳಿಕೆಯ ಸಂಸ್ಥೆಗಳು ಅಡುಗೆ ತಯಾರಕರ ಸಂಖ್ಯೆ ಇಳಿಸುತ್ತಾ, ಬ್ರಾಹ್ಮಣ ಭೋಜನ ಶುರು ಇಟ್ಟೇ ಬಿಟ್ಟವು. ಕಳೆದ ವರ್ಷದಿಂದಲೇ ಈ ರಾಮಭಕ್ತ ಸಂಸ್ಥೆಗಳನ್ನು ಮಹಿಳೆಯರು ವಿರೋಧಿಸುತ್ತಲೇ ಬಂದಿದ್ದು ಇದೀಗ ಜಿಲ್ಲಾಡಳಿತಕ್ಕೆ ಎಚ್ಚರಿಕೆ ನೀಡಲಾಗಿದೆ.

ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಮಹಿಳೆಯರೇ ಬಿಸಿಯೂಟ ಯೋಜನೆಯಲ್ಲಿ ತೊಡಗಿಕೊಂಡಿದ್ದಾರೆ. ಇವರಿಗೆ ಸಿಗುತ್ತಿರುವ ಭತ್ಯೆಯಾದರೂ ಎಷ್ಟು ಗೊತ್ತೆ? ಅಡುಗೆ ತಯಾರಕರಿಗೆ 650 ರೂ., ಸಹಾಯಕಿಯರಿಗೆ 300 ರೂ! ದಿನಕ್ಕೆ 8 ತಾಸು ಕೆಲಸ! ಇದು ಸರ್ಕಾರ ಗೌರವ ಧನದ ಹೆಸರಲ್ಲಿ ನಡೆಸುತ್ತಿರುವ ಶೋಷಣೆ. ಈ ಮಹಿಳೆಯರೆಲ್ಲ ಕೆಂಪು ಬಾವುಟದಡಿ ಸಂಘಟಿತರಾಗಿ ನ್ಯಾಯ ಕೇಳಲು ಆರಂಭಿಸಿದಾಗಿನಿಂದ ಕೆಲ ಅಧಿಕಾರಿಗಳು, [illegible] ಮಾಸ್ತರರು, ಲೋಕಲ್ ಪುಡಾರಿಗಳು ಕೆಂಡಾಮಂಡಲವಾಗಿಬಿಟ್ಟರು. ಆದರೆ ಇನ್ನು ಅರ್ಧದಷ್ಟು ಮಹಿಳೆಯರು ಸಂಘಟನೆ ಸೇರದೇ ಸರ್ಕಾರದ ಕಿರುಕುಳಗಳನ್ನು ಸಹಿಸುತ್ತಲೇ ಇದ್ದಾರೆ. [illegible] ಸುಧಾರಣಾ ಸಮಿತಿಗಳಲ್ಲಿನ ಸದಸ್ಯರುಗಳು ಈ ಬಡಮಹಿಳೆಯರ ಗೋಳು ಹೊಯ್ದುಕೊಳ್ಳುತ್ತಲೇ ಇದ್ದಾರೆ.

ಶಾಲಾ ಮಕ್ಕಳ ಹಾಜರಾತಿ ಹೆಚ್ಚಿಸಲು ಸಹಾಯವಾಗುವ ಇಂತಹ ಯೋಜನೆಯನ್ನು ಖಾಸಗಿಯವರ ಸಹಭಾಗಿತ್ವದಲ್ಲಿ ನಡೆಸಲು ಸರ್ಕಾರ ಮಾರ್ಗದರ್ಶಿ ಸೂತ್ರ ರೂಪಿಸಿದ್ದೇ ಮೊದಲ ಮಹಾಪರಾಧ.

ಪ್ರಚಾರಪ್ರಿಯೆ ಸುಧಾಮೂರ್ತಿಯೂ ಈ ಇಸ್ಕಾನ್, ಅದಮ್ಯ ಚೇತನಗಳಿಗೆ ದಾನ ಮಾಡಿ ಫೋಟೋ ಕ್ಲಿಕ್ ಮಾಡಿಸಿಕೊಳ್ಳುತ್ತಲೇ ಇದ್ದಾರೆ. ಜೂನ್ 5 ಕ್ಕೆ ಧಾರವಾಡ ಜಿಲ್ಲಾ ಪಂಚಾಯತ್ ಆವರಣದಲ್ಲಿ ಮಳೆಯ ಮಧ್ಯೆ ಹೋರಾಟ ಆರಂಭಿಸಿದ ಮಹಿಳೆಯರು ಜೂನ್ 7 ರಂದು ಬೆಳಿಗ್ಗೆ ಜಿ.ಪಂ.ನ ಎಲ್ಲಾ ದ್ವಾರಗಳನ್ನು ಬಂದ್ ಮಾಡಿ, ಪೊಲೀಸರಿಗೂ ಕೇರ್ ಮಾಡದೇ ಇಡೀ ಜಿ.ಪಂ. ವಶ ಮಾಡಿಕೊಂಡುಬಿಟ್ಟರು. ಸಿಇಒ ಜಯರಾಮ್ ಬಂದು ಉಸ್ತುವಾರಿ ಸಚಿವ ಹೊರಟ್ಟಿ ಗಮನಕ್ಕೆ ಈ ವಿಷಯ ತರುವುದಾಗಿ ಹೇಳಿ ಸಮಾಧಾನ ಮಾಡಿದರು.


ಹುಬ್ಬಳ್ಳಿ

ಜೂನ್ 8 ರಂದು ಬಂದ ಹೊರಟ್ಟಿ ಮಹಿಳೆಯರ ಪ್ರಶ್ನೆಗಳಿಗೆ ಉತ್ತರಿಸ ಲಾಗದೇ ತತ್ತರಿಸಿ ಹೋಗಿಬಿಟ್ಟರು. ಏನೇನೋ ಹೇಳಿ ಪಲಾಯನ ಮಾಡಿದ ಹೊರಟ್ಟಿಗೆ ಮಹಿಳೆಯರು ವಾರ್ನಿಂಗ್ ನೀಡಿಯೇ ಕಳಿಸಿದರು. ಈ ಸರ್ಕಾರಕ್ಕೆ ಇಸ್ಕಾನ್, ಅದಮ್ಯ ಚೇತನಗಳ ಜುಟ್ಟು ಬೇಕೇ ಬೇಕು ಎನ್ನುವುದಾದರೆ ಅಡುಗೆ ತಯಾರಕರು ಸರ್ಕಾರದ ಜುಟ್ಟನ್ನೇ ಜಗ್ಗಲಿದ್ದಾರೆ. ಜುಲೈ 1 ರಂದು ಮತ್ತೆ ಪ್ರತಿಭಟನೆ ಇದೆ. ಬಡ ಮಹಿಳೆಯರ ತುತ್ತಿನ ಚೀಲಕ್ಕೆ ಬಾಯಿ ಹಾಕಿರುವ ಇಸ್ಕಾನ್, ಅದಮ್ಯ ಚೇತನಗಳನ್ನು ಇಲ್ಲಿಂದ ತೊಲಗಿಸಬೇಕಾಗಿದೆ.

-ವರದಿಗಾರ

ಬದುಕಿನ ಬಿರುಕುಗಳ ಮೂಲಕ ಸಾವಿನ ಶೋಕ ಗೀತೆಯು ಹೊರಹೊಮ್ಮುತ್ತದೆ -ಟ್ಯಾಗೂರ್

...ವಾ
...ದಿದ್ದರಿಂದ
...ರ್
...ಭೀರವಾಗಿ
...ಯಗೊಂಡರು.
...ಜರಂಗಿಗಳ
...ಎಷ್ಟು
...ಗವಾಗಿತ್ತು
...ಂದರೆ
...ಲೀಸರು
...ರಿ ಚಾರ್ಜು
...ಡಿ.
...ಶುವಾಯು
...ಯೋಗಿಸಿ, ಗಾಳಿಯಲ್ಲಿ
...ಂಡು ಹಾರಿಸಿ ಗುಂಪನ್ನು
...ದುರಿಸಬೇಕಾಯಿತು;
...ದೂ ಆ ನಟ್ಟಿರುಳಿನಲ್ಲಿ!
...ಡುಕರೆಯ ಚರಿತ್ರೆಯಲ್ಲೇ
...ಗಾದದ್ದು ಮೊದಲ
...ಸರಿಯಂತೆ!



...ಕಂಡ ಊರವರು ಅದರಲ್ಲಿ ಸ್ಥಳೀಯ ಭಜರಂಗದಳದ ಲೀಡರ್ ರಾಕ್‌ಜಿಮ್ ಪ್ರಕಾಶ್ ಶೆಟ್ಟಿ, ಪ್ಯಾದೆ ಸಂತೋಷ್, ಎಲ್‌ಐಸಿ ಕೃಷ್ಣ ವಿಜಯ ಮತ್ತು ಕೇಶವ ಪಾರಂಪಳ್ಳಿ, ರಾಘವೇಂದ್ರ ಮರಕಲ, ಶಂಕರ ಮರಕಲ, ಗಣೇಶ ಮರಕಲ, ದಿನೇಶ ಗಾಣಿಗ ಹಾಗೂ ಇನ್ನೂ ಹಲವರನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ. ಕೋಮು ಸೌಹಾರ್ದ ವೇದಿಕೆಯವರು ಈ ಹೆಸರುಗಳನ್ನು ನಮೂದಿಸಿ ಜಿಲ್ಲಾ ಪೊಲೀಸು ವರಿಷ್ಠಾಧಿಕಾರಿಗೆ ಮನವಿಯನ್ನೂ ಸಲ್ಲಿಸಿದ್ದಾರೆ. ಆದರೆ ಕೋಟ ಪೊಲೀಸರು ಮಾತ್ರ ಅಪರಾಧಿಗಳನ್ನೆಲ್ಲ ಅವರ ಪಾಡಿಗೆ ಹಾಯಾಗಿ ಇರಲು ಬಿಟ್ಟು ನಿರಪರಾಧಿಗಳಾದ ಎಂಟು ಜನರ ಮೇಲೆ ಕೇಸು ಹಾಕಿದ್ದಾರೆ. ಅಪರಾಧಿಗಳ ವಿರುದ್ಧ ದೂರು ದಾಖಲಿಸಿಕೊಂಡು ಕೇಸುಹಾಕಿದ ತಕ್ಷಣ ನ್ಯಾಯ ದೊರೆಯುತ್ತದೆ ಎಂದು ಯಾರೂ ಭಾವಿಸಬೇಕಾಗಿಲ್ಲ, ಕೋಮುಗಲಭೆಯ ಕೇಸುಗಳಲ್ಲಿ ಇದುವರೆಗೆ ಯಾರಿಗೂ ಶಿಕ್ಷೆ ಆದದ್ದೇ ಇಲ್ಲ. ನಮ್ಮ ಪೊಲೀಸು ಮತ್ತು ನ್ಯಾಯ ವ್ಯವಸ್ಥೆ ಇರುವುದೇ ಈ ಅಪರಾಧಿಗಳಿಗೆ ಶಿಕ್ಷೆ ಆಗದಂತೆ ನೋಡಿಕೊಳ್ಳುವುದಕ್ಕೆ. ಆದರೆ ಅಪರಾಧಿಗಳ ವಿರುದ್ಧ ಕನಿಷ್ಠ ಕೇಸಾದರೂ ದಾಖಲಿಸಿದರೆ, ಕೆಲವು ತಿಂಗಳು ಅವರಿಗೆ ಕೋರ್ಟು ಮನೆ ಎಂದು ಅಲೆದಾಡುವ 'ಶಿಕ್ಷೆ' ದೊರೆಯುತ್ತದೆ. ಕೋಟ ಪೊಲೀಸರು, ಇಲ್ಲಿನ ಭಜರಂಗಿಗಳಗೆ ಅಷ್ಟು ತೊಂದರೆಯೂ ಆಗದಂತೆ ನೋಡಿಕೊಳ್ಳುತ್ತಿದ್ದಾರೆ.

...ಕೋಟದ ಹೆಸರಿಗೆ ಮಸಿ ಬಳಿದಿರುವ ಈ ...ಕರಣದಲ್ಲಿ ಕೋಟ ಪೊಲೀಸು ಠಾಣೆಯ ...ಾಡುಗೆಯೂ ಸಾಕಷ್ಟಿದೆ. ಕರಾವಳಿಯ ಇತರ ಅನೇಕ ...ಲೀಸು ಠಾಣೆಗಳಂತೆ ಇದು ಕೂಡ ಭಜರಂಗಿಗಳ ...ಂದು ಮಾಹಿತಿ ಕೇಂದ್ರದಂತೆ ಕೆಲಸ ಮಾಡುತ್ತಿದೆ. ...ೋಟ ಪೊಲೀಸು ಠಾಣೆಗೆ ಭಜರಂಗಿಗಳ ದಾಂಧಲೆ ...ರುದ್ಧ ಮುಸ್ಲಿಮರು ದೂರು ಕೊಟ್ಟರೆ ಪೊಲೀಸರು ...ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲ. ...ಷ್ಟು ಮಾತ್ರವಲ್ಲ ಈ ದೂರಿನ ವಿವರಗಳನ್ನು ...ಜರಂಗಿಗಳಿಗೆ ಕೂಡಲೇ ತಿಳಿಸಿ, ಅವರಿಂದ ಪ್ರತಿ ...ದೂರುಗಳನ್ನು ದಾಖಲಿಸಿಕೊಳ್ಳುತ್ತಾರೆ. ಮೊನ್ನೆಯ ...ಳಿಯ ಸಂದರ್ಭದಲ್ಲಿ ತಡವಾಗಿ ಸ್ಥಳಕ್ಕೆ ಬಂದ ...ಲೀಸರು ಅಲ್ಲಿ ನೆರೆದಿದ್ದ ಮುಸ್ಲಿಮರಿಗೆ ಶಾಂತಿಯಿಂದ ...ಲು ಸೂಚಿಸಿದರೇ ಹೊರತು, ಗಲಭೆಕೋರರ ವಿರುದ್ಧ ...ಕ್ಷಣ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ...ಡುಕರೆಯಲ್ಲಿ ಆ ರಾತ್ರಿ ನಡೆದ ಅನಾಹುತ ...ಹುಪಾಲು ಕೋಟ ಪೊಲೀಸರ ಸಮಕ್ಷಮದಲ್ಲೇ ...ಡೆಯಿತು. ಅಪರಾಧಿಗಳಲ್ಲಿ ಹೆಚ್ಚಿನವರು ಯಾರು, ...ರು ಎಂಬುದೂ ಅವರಿಗೆ ಗೊತ್ತಿದೆ. ಇಬ್ರಾಹಿಂ ...ನರ ಮನೆಯ ಮೇಲೆ ನಡೆದ ದಾಳಿಯನ್ನು ಕಣ್ಣಾರೆ

-ಜಿ. ರಾಜಶೇಖರ್
ಕೆ. ಫಣಿರಾಜ್

...ಹಳಸಿದ ಧಾರ್ಮಿಕ ಧೋರಣೆಗಳು

ಈ ಬಿಸಿಯೂಟದ ವಿಷಯದಲ್ಲಿ ಈಗ ...ಷ್ಟಿಯಾಗಿರುವ ಅವಾಂತರಗಳ ಹಿಂದೆ ಈ ದಗಲ್ಬಾಜಿ ...ನಿವಾರಿಗಳ ಬಂಡವಾಳಶಾಹಿ ಧೋರಣೆಗಳು ...ಡಗಿರುವಂತೆ ಅವರದೇ ಸ್ಕೂಲಿನ ಹಳಸಿದ ಧಾರ್ಮಿಕ ...ರಣೆಗಳೂ ಅಡಗಿವೆ. ಮನುಷ್ಯ ವಿರೋಧಿ ಮನು ...ಟ್ಟು ಹೋಗಿರುವ ಜಂಭದ ಜನಿವಾರವನ್ನು ...-ಮನಸ್ಸಿಗೆ ಏರಿಸಿಕೊಂಡು ತಿರುಗಾಡುವ ಅನಂತ ...ಮಾರ್, ಸುಧಾ ...ಮೂರ್ತಿ, ಇಸ್ಕಾನ್ ...ಮಧಾರಿಗಳು ತಮ್ಮವೇ ...ದಿಕ ವೈರಸ್ಸುಗಳನ್ನು ...ಗೆ ತುಂಬಿಸಿಕೊಂಡು ...ತಿ ಜಟಿಕಾ ಹತ್ತಿರುವ ...ೊಟ್ಟು ಜಾತಿಯ ಆನಾ ...ಗ್ರಪೀಡಿತ ಮನಸ್ಸು ... ಮೂಲಕವೇ ತಮ್ಮ ...ಳೆ ಬೇಯಿಸಿಕೊಳ್ಳು ...ದ್ದಾರೆ.



ಸರ್ಕಾರ ಬಿಸಿಯೂಟದ ಕಾರ್ಯಕ್ರಮ ಪ್ರಾರಂಭಿಸು ...ಗ ಬಡ ಮಕ್ಕಳ ಹೊಟ್ಟೆ ತುಂಬಿಸಿ ವಿದ್ಯೆ ಕಲಿಯಲು ...ತ್ಸಾಹಿಸುವ ಉದ್ದೇಶ ಇತ್ತಲ್ಲದೆ, ಅದರ ಜೊತೆಗೇ ...ತ-ಹಿಂದುಳಿದ ಮಹಿಳೆಯರಿಗೆ ಕೊಂಚ ಕೆಲಸ ...ಸುವ ಸದುದ್ದೇಶವೂ ಇತ್ತು, ಅಥವಾ ಆ ಉದ್ದೇಶ ...ದಿದ್ದರೂ ಆ ಕಾರ್ಯಕ್ರಮ ಆ ಸ್ವರೂಪ ...ಯುತ್ತಿತ್ತು. ಯಾವಾಗ ದಲಿತ-ಹಿಂದುಳಿದ ...ಹಿಳೆಯರು ಮಕ್ಕಳಿಗೆ ಪ್ರೀತಿಯಿಂದ ಬಿಸಿಯೂಟ ...ಡಲು ಪ್ರಾರಂಭಿಸಿದರೋ, ಆವಾಗ ಈ ...ಡೆಯೋ ಜಾತ್ಯತೀತ ರಾಷ್ಟ್ರದ ಹಳ್ಳಿ-ಹಳ್ಳಿಗಳಲ್ಲೂ ...ಟ-ಹಾರಾಟಗಳು ಪ್ರಾರಂಭವಾದವು. "ಆ ... ಜಾತಿಯ ಹೆಂಗಸರು ಮಾಡಿದ ಅಡುಗೆಯನ್ನು ... ಮಕ್ಕಳು ತಿನ್ನುವುದೇ? ಇದು ಅನಿಷ್ಟ... ಸರ್ಕಾರ ...ಳ್ಳಿ ಧಾರ್ಮಿಕ್ಕೆ ಮಾಡಿದ ದ್ರೋಹ...." ಎಂದೆಲ್ಲಾ ...ಡಿದ್ದು ಜಾತ್ಯತೀತರೇನಲ್ಲ (ಅವರ ಮಕ್ಕಳಿಗೆ ಶಾಲೆಯಲ್ಲಿ ಮಾಡುವ ಅನ್ನ ತಿನ್ನುವ ಅನಿಷ್ಟ ಯಾಕೆ?) ಇದೇ ಹಿಂದುಳಿದ ಶೂದ್ರರೆಂಬೋ ಜಾತಿಯ ಜನರು. ಇವರೆಲ್ಲರ ಮೈ ಮಾತ್ರ ಶೂದ್ರರದು. ತಲೆ ತುಂಬಾ ಜನಿವಾರಗಳು.

ಇವರ ಈ ಕಷ್ಟಗಳಿಗೆ ಕಿವಿಕೊಟ್ಟ ದೇಶಪ್ರೇಮಿ, ಜನಾನುರಾಗಿ ಅನಂತಕುಮಾರ್, ಸುಧಾಮೂರ್ತಿಯಂಥವರು (ಅಂದಹಾಗೆ ಸುಧಕ್ಕ ಹಾಗೂ ಅನಂತ್‌ಕುಮಾರ್ ಪತ್ನಿ ಇಬ್ಬರೂ ಹುಬ್ಬಳ್ಳಿಯ ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜಿನ ಜನಿವಾರಿ ಪ್ರಾಡಕ್ಟ್‌ಗಳೇ!) ರಾಜ್ಯದ ಎಲ್ಲಾ ಶಾಲೆಗಳ ಬಿಸಿಯೂಟದ ಜವಾಬ್ದಾರಿಯನ್ನು ತಾವೇ ವಹಿಸಿಕೊಳ್ಳುತ್ತಿದ್ದಾರೆ. ಅಂದರೆ ಇಸ್ಕಾನ್ ಮತ್ತು ಅದಮ್ಯಚೇತನ ಎಂಬ ಜುಟ್ಟು ಸಂಸ್ಥೆಗಳಿಗೆ ವಹಿಸುತ್ತಿದ್ದಾರೆ. ಸರ್ಕಾರವೂ ಈ ಪರಮಾತ್ಮನ ಪ್ರತಿರೂಪಗಳಿಗೆ ಎದುರಾಡದೇ ಒಪ್ಪಿಕೊಳ್ಳುವಂತೆ ಕಾಣುತ್ತಿದೆ. ಎಲ್ಲಿಗೆ ಬಂತು ನೋಡಿ ಜಾತ್ಯತೀತ ಭಾರತದ ಪವಿತ್ರ ನೆಲದ ಸ್ಥಿತಿ....

ದಲಿತ, ಹಿಂದುಳಿದವರ ಪರವಾಗಿ ಮಾತನಾಡುವವರು. ಜಾತಿವಾದಿಗಳು, ಸೌಹಾರ್ದತೆ, ಸಮಾನತೆಗಳ ಪರವಾಗಿ ಮಾತನಾಡುವವರು ನಕ್ಸಲೈಟರು, ದಲಿತರು ಮಾಡಿದ ಅನ್ನ ತಿಂದರೆ ಅನಿಷ್ಟ ಎಂದು ತಾವೇ ಮಾಡಲು ಮುಂದಾದವರು ದೈವಭಕ್ತರು, ರಾಷ್ಟ್ರಭಕ್ತರು, ಪವಿತ್ರಾತ್ಮಗಳು...

ಇದಲ್ಲವೇ ಭಾರತದ ಭಾವೈಕ್ಯತೆಯ ಹಿರಿಮೆ!

ಗುಂಡಿ ಮಾದೇವಪ್ಪ ಛತ್ರ ಬುಕ್ ಮಾಡೀರಿ ಜೋಕೆ!

ದಾವಣಗೆರೆ

ಮೇ 31 ರ 'ಲಂಕೇಶ್' ಸಂಚಿಕೆಯಲ್ಲಿ 'ಗುಂಡಿ ಮಹಾದೇವಪ್ಪನ ಗುಂಡಾಗುಂಡಿ ಮಕ್ಕಳು' ಎಂಬ ಶೀರ್ಷಿಕೆಯಡಿಯಲ್ಲಿ ಗುಂಡಿ ಮಹಾದೇವಪ್ಪ ಕಲ್ಯಾಣ ಮಂದಿರದ ಬಗ್ಗೆ ವಿವರವಾದ ವರದಿ ಪ್ರಕಟವಾಗಿತ್ತು. 19 ವರ್ಷಗಳಿಂದ ಆದಾಯ ತೆರಿಗೆ ಕಟ್ಟದ, 3 ವರ್ಷಗಳಿಂದ ಕಂದಾಯವನ್ನೂ ಕಟ್ಟದ ಈ ಕಲ್ಯಾಣ ಮಂದಿರದ ಬಗೆಗಿನ ವರದಿ ಪ್ರಕಟಣೆಯಾದ ನಂತರವೂ ಆದಾಯ ತೆರಿಗೆ ಇಲಾಖೆಯಾಗಲೀ, ನಗರಸಭೆಯವರಾಗಲೀ ಎಚ್ಚೆತ್ತುಕೊಂಡಂತೆ ಕಾಣುತ್ತಿಲ್ಲ. ಆದರೆ ಗುಂಡಿ ಮಹಾದೇವಪ್ಪ ಪಬ್ಲಿಕ್ ಟ್ರಸ್ಟಿನ ಹೆಸರಿನಲ್ಲಿ ಆದಾಯವನ್ನು ಕಬಳಿಸುತ್ತಿರುವ ಅನಧಿಕೃತ ವ್ಯಕ್ತಿಗಳ ಮಧ್ಯೆ ಸ್ಪರ್ಧೆ ಶುರುವಾಗಿ ತಮ್ಮ ತಮ್ಮಲ್ಲೇ ಕಿತ್ತಾಟವನ್ನು ಪ್ರಾರಂಭಿಸಿದ್ದಾರೆ.



'ಗುಂಡಿ ಮಹಾದೇವಪ್ಪ ಪಬ್ಲಿಕ್ ಟ್ರಸ್ಟ್'ನ ಸಂಸ್ಥಾಪಕ ಗುಂಡಿ ಮಹಾದೇವಪ್ಪನಾದಿಯಾಗಿ ಈ ಟ್ರಸ್ಟಿನ ಸದಸ್ಯರೆಲ್ಲರೂ ಈಗಾಗಲೇ ನಿಧನರಾಗಿದ್ದಾರೆ- ಇವರ ಹಿಂದೆಯೇ ಟ್ರಸ್ಟು ಕೂಡಾ ನಾಮಾವಶೇಷವಾಗಿದೆ. ಆದರೆ ನಂತರದ ದಿನಗಳಲ್ಲಿ ಬಿಳಿ ಕಾಗದದ ಮೇಲೆ ಆರು ಮಂದಿಯ ಹೆಸರನ್ನು ಮ್ಯಾನೇಜಿಂಗ್ ಟ್ರಸ್ಟಿಗಳೆಂದು ಅನಧಿಕೃತವಾಗಿ ಬರೆದುಕೊಂಡು ಈ ಬೋಗಸ್ ಟ್ರಸ್ಟಿನ ಒಡೆಯನಾಗಿ ಜಿ.ಎಚ್. ರಾಜಶೇಖರ ಎಂಬಾತ (ಈತ ಗುಂಡಿ ಮಹದೇವಪ್ಪನ ಮೊಮ್ಮಗ) ಗುಂಡಿ ಮಹಾದೇವಪ್ಪ ಕಲ್ಯಾಣ ಮಂದಿರದ ಸಮಸ್ತ ಆದಾಯವನ್ನು ಇಲ್ಲಿಯವರೆಗೂ ಅನುಭವಿಸುತ್ತಾ ಬಂದ. ಈ ಬೋಗಸ್ ಟ್ರಸ್ಟಿನಿಂದ ಇದುವರೆಗೂ ದೂರವಿದ್ದ ಜಿ.ಎಸ್. ಸಿದ್ದೇಶ್ (ಈತ ಕೂಡ ಗುಂಡಿ ಮಹಾದೇವಪ್ಪನ ಮತ್ತೊರ್ವ ಮೊಮ್ಮಗ) ಈ ಕಲ್ಯಾಣ ಮಂಟಪದ ಬಗ್ಗೆ ವರದಿ ಪ್ರಕಟವಾಗಿದ್ದೇ ತಡ ಕೇವಲ ಒಂದೆರಡು ದಿನಗಳಲ್ಲೇ 'ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪ'ವನ್ನು ಆಕ್ರಮಿಸಿಕೊಂಡು ಜಿ.ಎಚ್. ರಾಜಶೇಖರನನ್ನು ಹೊರಹಾಕಿ ಕಲ್ಯಾಣ ಮಂಟಪದ ದೈನಂದಿನ ಆದಾಯವನ್ನು ತನ್ನ ಜೇಬಿಗಿಳಿಸಲಾರಂಭಿಸಿದ್ದಾನೆ. ಇದರಿಂದಾಗಿ ಹಾಲು ಕರೆವ ಕಚ್ಚಲನ್ನೇ ಕಳೆದುಕೊಂಡವನಂತಾಗಿರುವ ರಾಜಶೇಖರ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪವನ್ನು ಮತ್ತೆ ವಶಪಡಿಸಿಕೊಳ್ಳಲು ಇನ್ನಿಲ್ಲದ ಕಸರತ್ತುಗಳನ್ನು ಮಾಡುತ್ತಿದ್ದಾನೆ ಮತ್ತು ರಸೀದಿ ಪುಸ್ತಕ, ದಿನಾಂಕಗಳನ್ನು ಬುಕ್ ಮಾಡಿದ ಡೈರಿಯನ್ನು ತಾನೇ ಮುಚ್ಚಿಟ್ಟುಕೊಂಡಿದ್ದಾನೆ. ಹೀಗಾಗಿ ಗುಂಡಿ ಮಹಾದೇವಪ್ಪನ ಮೊಮ್ಮಕ್ಕಳ ಕಿತ್ತಾಟವು ಒಂದು ಕಡೆ ಬೀದಿಗೆ ಬಂದಿದ್ದರೆ ಇನ್ನೊಂದು ಕಡೆ ಮದುವೆ ಮುಂತಾದ ಕಾರ್ಯಗಳಿಗಾಗಿ ಈಗಾಗಲೇ ಕಲ್ಯಾಣ ಮಂದಿರವನ್ನು ಬುಕ್ ಮಾಡಿರುವವರ ಪರದಾಟ ಮುಗಿಲು ಮುಟ್ಟುವಂತಾಗಿದೆ.



ಹೇಳಿಕೆ-ಪ್ರತಿ ಹೇಳಿಕೆ


ದಿ. 5.6.2006 ರಂದು ಇಲ್ಲಿನ ಸ್ಥಳೀಯ ಪತ್ರಿಕೆಯೊಂದರಲ್ಲಿ ಜಿ.ಎಚ್. ರಾಜಶೇಖರ ಪ್ರಕಟಣೆಯೊಂದನ್ನು ನೀಡಿ "…. ಯಾರೋ ಅನಧಿಕೃತವಾಗಿ ನಮ್ಮ ಟ್ರಸ್ಟ್‌ನ ಹೆಸರಿನಲ್ಲಿ ವ್ಯವಹರಿಸಲು… ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದಾರೆ… ಸಾರ್ವಜನಿಕರು ಇವರೊಂದಿಗೆ ವ್ಯವಹರಿಸಿ ಮೋಸ ಹೋದರೆ ನಮ್ಮ ಟ್ರಸ್ಟ್ ಜವಾಬ್ದಾರಿಯಲ್ಲ"ವೆಂದು ಹೇಳಿಕೊಂಡಿದ್ದಾನೆ.

ಇದಕ್ಕೆ ಪ್ರತಿಯಾಗಿ ಅದೇ ಪತ್ರಿಕೆಯಲ್ಲಿ 6.6.2006 ರಂದು ಜಿ.ಎಸ್. ಸಿದ್ದೇಶ್ "...ರಾಜಶೇಖರ್‌ರವರು ಗುಂಡಿ ಮಹಾದೇವಪ್ಪ ಪಬ್ಲಿಕ್ ಟ್ರಸ್ಟಿನ ಮ್ಯಾನೇಜಿಂಗ್ ಟ್ರಸ್ಟಿ ಇರುವುದಿಲ್ಲ... ರಾಜಶೇಖರ್‌ರವರು ಅಧಿಕಾರವಿಲ್ಲದೆ ಹಣ ತೆಗೆದುಕೊಳ್ಳಲು, ರಸೀದಿ ಹಾಕಲು, ಕಲ್ಯಾಣ ಮಂದಿರದ ಬಾಡಿಗೆ ಕೊಡಲು ಅಧಿಕಾರ ಇರುವುದಿಲ್ಲ.... ಅವರ ಮೂಲಕ ತೆಗೆದುಕೊಂಡ ರಸೀದಿಗೆ ಬೆಲೆ ಇರುವುದಿಲ್ಲ. ಸದರಿ ರಸೀದಿಗಳ ಮೂಲಕ ಕಲ್ಯಾಣ ಮಂದಿರದಲ್ಲಿ ಸಭೆ, ಸಮಾರಂಭಗಳಿಗೆ ಅವಕಾಶ ಕೊಡುವುದಿಲ್ಲ" ಎಂದು ಪ್ರಕಟಣೆ ನೀಡಿದ್ದಾನೆ.

ಈ ಇಬ್ಬರ ವಿರುದ್ಧಾರ್ಥದ ಹೇಳಿಕೆಗಳಿಂದ ಇವರಿಬ್ಬರೂ ಗುಂಡಿ ಮಹಾದೇವಪ್ಪ ಪಬ್ಲಿಕ್ ಟ್ರಸ್ಟಿಗೆ ಸಂಬಂಧವಿಲ್ಲದ ಅನಧಿಕೃತ ವ್ಯಕ್ತಿಗಳೆಂದು ಇನ್ನಷ್ಟು ಸ್ಪಷ್ಟವಾಗುವುದಲ್ಲದೆ, ಹಡಬಟ್ಟ ಹಣದ ಆಸೆಗಾಗಿ ಸಾರ್ವಜನಿಕರನ್ನು ಪಣಕ್ಕಿಡಲು ಮುಂದಾಗಿರುವುದೂ ಗೊತ್ತಾಗುತ್ತದೆ.

ರಾಜಶೇಖರ ಡಿಸೆಂಬರ್ ತಿಂಗಳವರೆಗೂ ಮದುವೆಗಳನ್ನು ಬುಕ್ ಮಾಡಿದ ಹಣವನ್ನು ಪಡೆದುಕೊಂಡು ರಸೀದಿ ನೀಡಿದ್ದಾನೆನ್ನಲಾಗುತ್ತಿದೆ. ಈಗ ಸಿದ್ದೇಶ ಕೂಡಾ ತನ್ನ ಊಹೆಯಂತೆ ದಿನಾಂಕಗಳನ್ನು ನಿಗದಿಗೊಳಿಸಿ ಹಣ ಪಡೆದುಕೊಂಡು ರಸೀದಿ ಹರಿಯುತ್ತಿದ್ದಾನೆ. ಈ ಇಬ್ಬರು ಸೋದರರ ತಿನ್ನುಬಾಕತನದಿಂದಾಗಿ ಮುಂದೊಂದು ದಿನ ದಿನಾಂಕಗಳು clash ಆಗಿ, ಕಲ್ಯಾಣ ಮಂಟಪವನ್ನು ಬುಕ್ ಮಾಡಿದ ಎರಡೂ ಪಾರ್ಟಿಯವರು ಕಾದಾಟಕ್ಕೆ ನಿಂತರೆ ಜವಾಬ್ದಾರರು ಯಾರು? ಆದರೆ ಈ ವಂಚಕ ಸೋದರಿಬ್ಬರೂ ಕೂಡಾ ಕಲ್ಯಾಣ ಮಂದಿರವನ್ನು ಬುಕ್ ಮಾಡಿದ ಸಾರ್ವಜನಿಕರೇ ಜವಾಬ್ದಾರರೆನ್ನುತ್ತಿದ್ದಾರೆ! ಈ ಒಳ ವ್ಯವಹಾರಗಳಾವುವೂ ಗೊತ್ತಿಲ್ಲದೆ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಛತ್ರವನ್ನು ಬುಕ್ ಮಾಡಿದ ಸಾರ್ವಜನಿಕರು ಹೇಗೆ ಜವಾಬ್ದಾರರಾಗಬೇಕು? ಮತ್ತು ಯಾಕೆ ಜವಾಬ್ದಾರರಾಗಬೇಕು? ಮುಂದೆ ವಂಚನೆಗೊಳಗಾಗಬಹುದಾದ ಸಾರ್ವಜನಿಕರ ಮುಕ್ಕಿದ ಏಟುಗಳು ಯಾರಿಗೆ ಬೀಳಬೇಕು? ಈ ಪ್ರಶ್ನೆಗಳಿಗೆ ಜಿಲ್ಲಾಧಿಕಾರಿಯಾದಿಯಾಗಿ ನಗರಸಭೆಯವರು ತಕ್ಷಣ ಉತ್ತರವನ್ನು ಕಂಡುಕೊಳ್ಳಬೇಕು. ಇಲ್ಲವಿದ್ದರೆ ಮುಂದಾಗುವ ಅನಾಹುತಗಳಿಗೆ ಇವರೇ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗುತ್ತದೆ

-ಚಂದ್ರಶೇಖರ ತೋರಣಘಟ್ಟ



ಸಾರ್ವಜನಿಕರ ಗಮನಕ್ಕೆ

ಜಿ.ಎಸ್. ಸಿದ್ದೇಶ್ ತಂದೆ ಲೇಟ್ ...

ಸಹಿ/-
(ಜಿ.ಎಸ್. ಸಿದ್ದೇಶ್)
ಮ್ಯಾನೇಜಿಂಗ್ ಟ್ರಸ್ಟಿ
ಜಿ. ಮಹದೇವಪ್ಪ ಪಬ್ಲಿಕ್ ಟ್ರಸ್ಟ್
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.

ಸಾರ್ವಜನಿಕರ ಗಮನಕ್ಕೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ನಮ್ಮ ಟ್ರಸ್ಟ್‌ನ ಬಗ್ಗೆ ಘನ ಜಿಲ್ಲಾ ನ್ಯಾಯಾಲಯ, ದಾವಣಗೆರೆಯಲ್ಲಿ ಪ್ರಕರಣ ...

ಸಹಿ/-
(ಜಿ.ಹೆಚ್. ರಾಜಶೇಖರ್)
ಮ್ಯಾನೇಜಿಂಗ್ ಟ್ರಸ್ಟಿ
ಜಿ. ಮಹದೇವಪ್ಪ ಪಬ್ಲಿಕ್ ಟ್ರಸ್ಟ್
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ-4

ದಾವಣಗೆರೆ
ದಿನಾಂಕ : 3-6-

ಗಂಡಾಗುಂಡಿ ಮೊಮ್ಮಕ್ಕಳ ಪತ್ರಿಕಾ ಪ್ರಕಟಣೆ

ರೂಮಿನ ತುಂಬ ಅವಳದ್ದೇ ವಾಸನೆ. ಅವಳು ಹಾಯುವಾಗ ಅವಳ ಕೈ, ಮೈ, ಸೀರೆ, ಹೊದಿಕೆ ಇತ್ಯಾದಿ ಅವಳ ಸಮಸ್ತವನ್ನೂ ಆವರಿಸಿಕೊಂಡಿದ್ದ ಕಟುಹಣ್ಣಿನ ವಾಸನೆ ಅಲ್ಲ. ಅವಳು ನರ್ಸಿಂಗ್ ಹೋಮಿನಲ್ಲಿದ್ದದ್ದು ಬರೀ ಹತ್ತು ದಿನಗಳು ಅಷ್ಟೆ. ಅಷ್ಟರಲ್ಲಿ ಬೆನ್ನಿನ ಮೇಲೆ ಬಾವೊಂದು ಬಿರುಸಾಗಿ ಎದ್ದಂತೆ ಹಾಸಿಗೆಹುಣ್ಣು ಕಾಣಿಸಿಕೊಂಡಿತ್ತು. ಅವಳ ಕತ್ತು ದೊಡ್ಡ ಚೋರೆಯ ತರ ಕಾಣುತ್ತಿತ್ತು. ಹಾಸಿಗೆಯ ಮೇಲೆ ಮಲಗಿದ ಅವಳು ಯಾವಾಗ ಬೇಕಾದರೂ ಹಾಯುವ, ಕಚ್ಚುವ ಸಿದುಕಿನ ಒಂಟೆಯ ತರ ಕಾಣಿಸುತ್ತಿದ್ದಳು. ಗಳಗಂಡ ರೋಗದ ಊತ. ಅವಳ ಕತ್ತಿನ ದಿಣ್ಣೆ ನನಗೆ ಸದಾ ಪರಿಚಿತ. ನಾನು ಚಿಕ್ಕವಳಾಗಿದ್ದಾಗ ಅದನ್ನು ಮುಟ್ಟುತ್ತಲೋ, ಸವರುತ್ತಲೋ, ಚಿವುಟುತ್ತಲೋ ಆಟವಾಡುತ್ತಿದ್ದ ಬಾವು ಈಗ ಕ್ಯಾನ್ಸರಿಗೆ ತುತ್ತಾಗಿ, ಸಿಕ್ಕಿದ್ದನ್ನೆಲ್ಲ ಸ್ವಾಹಾ ಮಾಡುವ ಬೆಂಕಿಯಂತೆ ಅವಳ ಮೈಯನ್ನು ಆವರಿಸಿಕೊಂಡುಬಿಟ್ಟಿತ್ತು.

ರೂಮಿನ ತುಂಬ ಈಗ ಒತ್ತಿ ಹಿಡಿದ ಗುಲಾಬಿಯೊಂದು ಬಾಡಿದಂತ ವಾಸನೆ. ಮಾತಿಗೆ ಸಿಕ್ಕದ ಒಂದು ವಿಚಿತ್ರ ಒಣಗಿದ ವಾಸನೆ. ಮೇಣದ ಬತ್ತಿಯೊಂದು ಪೂರ್ತಿ ಉರಿದು ನಿಂತಂತೆ, ಯಾರೋ ಅದನ್ನು ಆರಿಸಿದಂತೆ.

ನಾವಿಬ್ಬರೂ ಒಂದೇ ರೂಮಿನಲ್ಲಿದ್ದವರಲ್ಲ. ನನ್ನ ಬದುಕಿನ ಇಪ್ಪತ್ತು ವರ್ಷಗಳಲ್ಲಿ ತುಂಬ ಹಳೆಯ ಮನೆಯ ಮೂಲೆಯಲ್ಲಿದ್ದ ಎರಡು ರೂಮುಗಳನ್ನು ನಾವಿಬ್ಬರೂ ಹಂಚಿಕೊಂಡಿದ್ದೆವು ಅಷ್ಟೆ.

ಅವಳ ಹೆಸರು ರುಕ್ಮಿಣಿ, ನನ್ನ ಮುತ್ತಜ್ಜಿ. ಹೋದ ತಿಂಗಳು ಸತ್ತಾಗ ಅವಳಿಗೆ ತೊಂಬತ್ತು ವರ್ಷ. ತನ್ನ ಒಬ್ಬನೇ ಮಗ, ಸೊಸೆ ಸತ್ತ ಮೇಲೆ ಸುಮಾರು ಹತ್ತು ವರ್ಷಗಳಷ್ಟು ಬದುಕಿದ್ದವಳು. ಅವರು ಸತ್ತಾಗ ಅವಳಿಗೆ ಹೇಗನಿಸಿತ್ತೋ ಗೊತ್ತಿಲ್ಲ, ಆಮೇಲೆ ಯಾಕೋ ಎಲ್ಲವೂ ಅವಳಿಗೆ ವಿಚಿತ್ರವಾಗಿ, ಹಾಸ್ಯಮಯವಾಗಿ ಕಾಣಿಸುತ್ತಿದ್ದಂತಿತ್ತು. ಸಂಬಂಧಪಟ್ಟ ಕಾಗದಪತ್ರಗಳಿಗೆ ಹೆಬ್ಬೆಟ್ಟಿನ ಮುದ್ರೆ ಒತ್ತಬೇಕಾದ ಹಳ್ಳಿಮುಕ್ಕ ತಾನು ಇನ್ನೂ ಬದುಕಿರುವಾಗಲೇ ಪಟ್ಟಣಕ್ಕೆ ತಕ್ಕ ಆಸೆ, ಕನಸುಗಳನ್ನು ಹೊತ್ತ ವಿದ್ಯಾವಂತರು ಮುದಿತನದ ಮೊದಲ ಹೆಜ್ಜೆಗೇ ಕಂಗಾಲಾಗಿ, ಗಟ್ಟಿಯಾದ ಹೃದಯವಿಲ್ಲದೆ, ಮೂಳೆಯಲ್ಲಿ ತ್ರಾಣವಿಲ್ಲದೆ ಗೊಟಕ್ ಎನ್ನಬೇಕಾಯಿತಲ್ಲ ಎಂದು ನಗುತ್ತಿದ್ದಳೆ?

ಅವಳ ಹಾಸ್ಯಪ್ರಜ್ಞೆ ಯಾವತ್ತೂ ವಿಚಿತ್ರವಾಗಿಯೇ ಇತ್ತು. ಮುಜುಗರ ತರಿಸುವಷ್ಟು. ಮೂಲೆಯಲ್ಲಿ ಕೂತು ದುಂಡು ಮುಖವನ್ನು ಕೆಂಪಾಗಿಸಿಕೊಂಡು ಪುಟ್ಟ ಹುಡುಗಿಯಂತೆ ಕಿಸಿಕಿಸಿ ನಗುತ್ತಿದ್ದಳೆಂದರೆ! ಬೆಳೆದು ಹದಿವಯಸ್ಸಿಗೆ ಕಾಲಿಟ್ಟಿದ್ದ ನನಗೆ ಅವಳನ್ನು ಕಾರಣ ಕೇಳದೇ ಇರುವುದು ವಾಸಿ ಅಂತ ಗೊತ್ತಿತ್ತು. ಗೊತ್ತಿಲ್ಲದ ನನ್ನ ಗೆಳತಿಯರೇನಾದರೂ ತಡೆಯಲಾರದೇ ಹೋಗಿ ಕೇಳಿದರೆ ಮುಗಿಯಿತು. ಅಲೆಅಲೆಯಂತ ನಗು. ನಕ್ಕೂ ನಕ್ಕೂ ಕೆನ್ನೆ ಮೇಲೆ ಕಣ್ಣೀರು ಹರಿದು, ಉಸಿರು ಕಟ್ಟುತ್ತಿದ್ದರೂ ಸಣ್ಣಗೆ ನಗುತ್ತಲೇ ಕಾರಣವನ್ನು ಬಿಚ್ಚಿಡುತ್ತಿದ್ದಳು. ಸ್ಟೇಷನ್ನಿನಿಂದ ರೈಲೊಂದು ಶಿಳ್ಳೆ ಹಾಕುತ್ತಾ ಹೊರಡುವಾಗ ಮಾಡುವ ಶಬ್ದದಂತೆಯೇ ಅವಳೂ ಹೂಸು ಬಿಟ್ಟಳಂತೆ. ಅವಳ ಮುಖವನ್ನು ನೋಡಿದರೆ ರೈಲೊಂದನ್ನು ನೋಡಿ ಅಥವಾ ಕೇಳಿ ಸಂಭ್ರಮಿಸುತ್ತಿದ್ದ ಮಗುವಿನಂತೆಯೇ ಅರಳಿರುತ್ತಿತ್ತು.

ಅವಳ ಒಬ್ಬನೇ ಮಗ ಸತ್ತದ್ದನ್ನು ತಡೆದುಕೊಳ್ಳಬಲ್ಲ ಶಕ್ತಿ ಈ ತರದ ಹಾಸ್ಯಪ್ರಜ್ಞೆಯಿಂದಲೇ ಬಂತೋ ಏನೋ. ಅಥವಾ ಸತ್ತು ಹತ್ತು ವರ್ಷಗಳಾಗಿದ್ದಕ್ಕೂ ಇರಬಹುದು. ರಾತ್ರಿಯಿಡೀ ಲೈಟನ್ನು ಉರಿಸುತ್ತಾ ಶತಪಥ ತಿರುಗುತ್ತಾ ಓದುತ್ತಿರುವಾಗ 'ಹೌದಮ್ಮ ರತ್ನಾ...ಚೆನ್ನಾಗ್ ಓದ್ ವಿದ್ಯಾ ಬುದ್ಧಿ ಕಲ್ತ್ ದೋ..ಡ್ಡ ಡಾಕ್ಟ್ರಮ್ಮ ಆಗ್ಬೇಕ್ ನೋಡು...' ಎಂದು ಹೇಳುತ್ತಾ ಮುಸಿಮುಸಿ ನಗುತ್ತಿದ್ದಳು ನನ್ನ ಮುತ್ತಜ್ಜಿ.

'ನಾನ್ ಕೊನೀ ಬಾರಿ ಡಾಕ್ಟ್ರನ್ ನೋಡಿದ್ ಯಾವಾಗ್ ಗೊತ್ತಾ? ನನಗ್ ಮೂವತ್ತ್ ವರ್ಷ ವಯಸ್...'

'ನಿಮ್ಮಜ್ಜ ಆಸ್ಪತ್ರೇಲ್ ಮೂರು ತಿಂಗ್ಳಿದ್ದ. ತನ್ದೇ ರಕ್ತ ನೋಡ್ದಾಗೆಲ್ಲಾ ಧಪ್ಪನ್ ಮೂರ್ಛೆ ಹೋಗ್ತಿತ್ತು ಪ್ರಾಣಿ...'

ಎರಡು ಓಳಿಗೆಗಳ ಮಧ್ಯೆ ಕಾಲ ಎಷ್ಟು ಮುಂದು ವರೆದಿತ್ತು ಅಂತ ಹೇಳೋದಿಕ್ಕೆ ಅಷ್ಟು ಸಾಕು ಎಂಬಂತೆ ಮುಸುಕೆಳೆದು ತಕ್ಷಣವೇ ಗೊರಕೆ ಹೊಡೆಯಲು ಆರಂಭಿಸುತ್ತಿದ್ದಳು.

ಮುತ್ತಜ್ಜಿ ಸತ್ತಾಗಿನಿಂದ ಕೆಳಗಿನ ಮಾಳಿಗೆಯ ಎರಡೂ ಕೋಣೆಗಳೀಗ ಸ್ತಬ್ಧವೇ. ನನ್ನ ಮೆಡಿಕಲ್ ಕೋರ್ಸ್ ಮತ್ತೆ ಮುಂದಿನ ತಿಂಗಳು ಆರಂಭವಾಗುವುದರಲ್ಲಿದೆ. ಕೆಳಗೆ ಒಬ್ಬಳೇ ಇರಲೂ ಭಯವಾಗುತ್ತಿದೆ. ಕಳೆದ ವರ್ಷ ಪಡೆದುಕೊಂಡ ಚಿನ್ನದ ಪದಕದ ಹಿರಿಮೆಯನ್ನು ಉಳಿಸಿಕೊಳ್ಳಬೇಕು. ಇನ್ನೂ ಶುರುವಾಗದ ಕೋರ್ಸಿನ ಅನಾಟಮಿ ಪಠ್ಯವನ್ನು ಎದುರಿಗಿಟ್ಟು ರಾತ್ರಿ ತುಂಬ ಹೊತ್ತಿನ ತನಕ ಓದುವ ಪ್ರಯತ್ನ ಮಾಡುತ್ತಿದ್ದೇನೆ. ಶರೀರವೆಂಬುದು ಧೃಢವಾದ್ದು, ಸಂಬಲರ್ಹವಾದ್ದು. ಅದೊಂದು ತನ್ನ ಸ್ವಾಸ್ಥ್ಯವನ್ನು ಕಾಯ್ದುಕೊಳ್ಳುವ ಅದ್ಭುತವಾದ ಯಂತ್ರ. ದಪ್ಪ ರಟ್ಟಿನ ಪುಸ್ತಕವನ್ನು ಹತ್ತಿರ ಹಿಡಿದು ಆತುರದ ಕಣ್ಣುಗಳಿಂದ ಘಮ್ಮೆನ್ನುವ ಹೊಸ ವಾಸನೆಯ ಪುಟಗಳನ್ನು ತಿರುಗಿಸುತ್ತೇನೆ. ಪ್ರತಿಯೊಂದು ನಿದರ್ಶನದಲ್ಲೂ ಸ್ವಲ್ಪ ನಿಂತು ಗಮನಿಸುತ್ತೇನೆ. ನೀಲಿ, ಗುಲಾಬಿ, ಬಿಳಿ ಇತ್ಯಾದಿ ಬಣ್ಣಗಳಿಗೆ ಇಳಿಸಿ ವರ್ಗೀಕರಿಸಲ್ಪಟ್ಟ ನಮ್ಮ ದೇಹ! ಮೂಳೆಗಳು, ನರಗಳು, ಸ್ನಾಯುಗಳು. ಪ್ರತಿಯೊಂದಕ್ಕೂ ಹೆಸರುಂಟು. ಒಂದು ಇನ್ನೊಂದರ ತಳುಕು. ಅವೆಲ್ಲವೂ ಸೇರಿದರೆ ಪೂರ್ಣತೆ, ಸಂಕೀರ್ಣತೆ.


ಎಂತ ಓದೇ ಇರಲಿ, ಪರಿಚಿತ ಕಮಟು ವಾಸನೆಯ ನಡುವಿದ್ದ ಅವಳ ಬೆಚ್ಚಗಿನ ಹಾಸಿಗೆಯಲ್ಲಿ ಕಳೆದ ರಾತ್ರಿಗಳ ಅನುಭವಕ್ಕೆ ಸಮನಿಲ್ಲ.

ಅವಳ್ಯಾವತ್ತೂ ಖಾಯಿಲೆ ಬಿದ್ದದ್ದೇ ಇಲ್ಲ. ಹಗುರವಾಗಿ ಉಲ್ಲಾಸದಿಂದ ಇದ್ದಳು. ಆದರೂ ವಯಸ್ಸೆನ್ನುವುದು ಇದೆಯಲ್ಲ! ತೊಂಬತ್ತನೆಯ ಹುಟ್ಟಿದ ದಿನದ ಸ್ವಲ್ಪ ಮುಂಚೆ ಅವಳು ಹಾಸಿಗೆ ಹಿಡಿದಾಗ ನಮಗೆ ಅಂಥಾ ಆಶ್ಚರ್ಯವೇನೂ ಆಗಲಿಲ್ಲ. ಎರಡು ತಿಂಗಳು ಯಾರ ಸಲಹೆಗೆ, ಬಲವಂತಕ್ಕೆ, ಬಯ್ಗಳಿಕ್ಕೆ, ಕಾಳಜಿಗೆ ಮಣಿಯದೆ ಹಾಸಿಗೆಯಲ್ಲಿ ಮಲಗಿಯೇ ಕಳೆದಳು. ಒಂದಿನ ಏನಾಯ್ತೋ ಏನೋ, ಡಾಕ್ಟರನ್ನು ಕರೆತರಲು ಒಪ್ಪಿದಳು.

ತರುಣ ಡಾಕ್ಟರ್ ತಪಾಸಣೆ ನಡೆಸಿ ರೂಮಿಂದ ಹೊರಬಂದಾಗ ಮುಖ ಕೋಪದಿಂದ, ಆಶ್ಚರ್ಯದಿಂದ ಕೆಂಪಾಗಿತ್ತು. ದಯವಿಟ್ಟು ಕೂತು ಒಂದು ಲೋಟ ಬಿಸಿ ಕಾಫಿ ಕುಡಿಯಿರಿ ಎಂದು ಅಪ್ಪ ಬೇಡಿಕೊಂಡರು.

'ಅವರಿಗೆ ಎಲ್ಲ ತರದ ಟೆಸ್ಟ್‌ಗಳ ಅಗತ್ಯವಿದೆ. ಆ ಕತ್ತಿನ ಸುತ್ತ ಬಾವು ಎಷ್ಟು ದಿನದಿಂದ ಇದೆ? ತೋರಿಸಿಯೇ ಇಲ್ಲವಾ?'

ಬದಿರಿನ ಕುರ್ಚಿಯಲ್ಲಿ ಕೂತಿದ್ದ ಅಪ್ಪ ಮುಜುಗರದಿಂದ ಭಂಗಿ ಬದಲಾಯಿಸಿದರು. ಬೇಗ ಉದ್ವೇಗಕ್ಕೊಳಗಾಗಿ ಬೆವೆತು ಹೋಗುವ ಬಡಕಲು ದೇಹಿ



ಹಬ್ಬದ ಉಳಿಕೆ ಪಳಿಕೆ...

ನನ್ನ ಅಪ್ಪ ಆಂಟಾಸಿಡ್‌ಗಳ ದೊಡ್ಡ ಜಾಡಿಯನ್ನೇ ಆಫೀಸಿನ ಡೆಸ್ಕಿನಲ್ಲಿ ಇಟ್ಟುಕೊಂಡಿರುವ ಮನುಷ್ಯ. ಸರ್ಕಾರಿ ಆಫೀಸೊಂದರಲ್ಲಿ ಒಂಭತ್ತರಿಂದ ಐದರ ತನಕ ಅಕೌಂಟೆಂಟ್ ಕೆಲಸ. ಖಾಯಂ ಕೆಲಸ. ಕೆಲಸದಿಂದ ವಜಾ ಆಗುವ ಬಾಬತ್ತಿಲ್ಲ.

ನನ್ನ ಅಪ್ಪ ಕರವಸ್ತ್ರಕ್ಕೆ ಬದಲಾಗಿ ಉಪಯೋಗಿಸುವ ಸಣ್ಣ ಟವೆಲ್ಲೊಂದನ್ನು ಹೊರಗೆಳೆದು ಹಣೆ ಒರೆಸಿ ಮಣಗುಟ್ಟಿದರು 'ಹಳೇ ಕಾಲದ ಹೆಂಗಸರು ನೋಡೀ... ಅವರ ಹತ್ತಿರ ಏನು ವಾದ ಮಾಡಿದ್ರೂ ಅಷ್ಟೇ. ನಿಮಗೇ ಗೊತ್ತಲ್ಲ....'

'ಅವರ ಕತ್ತು?' ಅಪ್ಪನ ಕಷ್ಟ ಅರ್ಥವಾಯಿತೋ ಎಂಬಂತೆ ತರುಣ ಡಾಕ್ಟರ್ ಸ್ವಲ್ಪ ಮೆದುವಾಗಿ ಕೇಳಿದರು.

'ತುಂಬ ಹಿಂದೆ ನಮ್ಮಪ್ಪ ಬದುಕಿದ್ದಾಗ ಒಂದು ಸಲ ತೋರಿಸಿದ್ದು ಅನ್ನಿಸುತ್ತೆ. ಆಪರೇಷನ್ ಆಗ್ಬೇಕು ಅಂತ ಹೇಳಿದ್ದ ನೆನಪು. ಆದ್ರೆ ಆಗಿನ ಕಾಲದವರು ಯೋಚನೆ ಮಾಡೋ ರೀತಿ ಹೇಗೆ ಅಂತ ನಿಮಗೇ ಗೊತ್ತಲ್ಲಾ...ಆಪರೇಷನ್ ಅಂದ್ರೇ ಸಾವನ್ನ ಕರೆದ ಹಾಗೆ ಅಂತ. ನೆಂಟರೆಲ್ಲಾ ಬಂದು ಏನೇನೋ ಕಥೆ ಹೇಳಿ ಅವಳನ್ನ ಇನ್ನೂ ಹೆದರಿಸಿದ್ರು. ಬೇಡ್ವೇ ಬೇಡ ಅಂತ ಹಟ ಹಿಡಿದಳು. ನಿಮಗೇ ಗೊತ್ತಲ್ಲಾ...ಆಗಲೇ ವಿಧವೆ. ನಮ್ಮ ಅಪ್ಪ ಮನೆ ಜವಾಬ್ದಾರಿ ಹೊತ್ಕೊಂಡಿದ್ರು. ಬರೀ ಹದಿನಾಲ್ಕು ವರ್ಷದ ಅಪ್ಪ ಏನ್ ಮಾಡೋ ಹಾಗಿತ್ತು ಹೇಳಿ?'

'ಮ್...' ತರುಣ ಡಾಕ್ಟರ್, ಏನು ಮಾಡೋಕ್ಕಾಗತ್ತೆ ಎಂಬಂತೆ ಭುಜ ಕುಣಿಸಿದರು. 'ಬೇಕಿದ್ದರೆ ನನ್ನ ನರ್ಸಿಂಗ್ ಹೋಮಿಗೆ ತಂದು ಸೇರಿಸಿ. ಆದ್ರೆ ಮನೇಲೇ ಸಾಯೋದಿಕ್ಕೆ ಬಿಡೋದು ಒಳ್ಳೆಯದು ಅಂತನ್ನಿಸುತ್ತೆ.'

ಡಾಕ್ಟರ್ ಹೋದಮೇಲೆ ನಾವು ಮೂವರು ಕಳ್ಳರಂತೆ ಮುಖ ಮುಖ ನೋಡಿಕೊಂಡೆವು. ಯಾವತ್ತೂ ಪ್ರಾಕ್ಟಿಕಲ್ ಆಗಿ ಯೋಚಿಸುವ ನನ್ನ ಅಮ್ಮ ಮೌನ ಮುರಿದು 'ಏನೂ ಹೇಳೋದು ಬೇಡ. ಹೇಳಿ ಯಾಕೆ ಮನಸ್ಸಿಗೆ ಕಷ್ಟ ಕೊಡಬೇಕು? ಸುದ್ದಿ ಗೊತ್ತಾಗಿದ್ದೇ ತಡ ಯಾವ ಬಿದ್ದವರೂ, ಇದ್ದವರೂ ಎಲ್ಲಾ ಬಂದು ನೆರೆದುಬಿಡ್ತಾರೆ. ನೆಂಟರ ದೊಂಬಿ ಯಾರು ಸುಧಾರಿಸ್ತಾರೆ? ಈ ದೊಂಬೀಲಿ ರತ್ನ ಹೇಗೆ ಓದ್ಕೊಳ್ತಾಳೆ?'

ಕತೆ

ಕನ್ನಡಕ್ಕೆ : ಸುಕನ್ಯಾ ಕನಾರಳ್ಳಿ

(ಗೀತಾ ಹರಿಹರನ್ ಅವರ ಇಂಗ್ಲಿಷ್ ಸಣ್ಣ ಕಥೆ 'ರಿಮೇನ್ಸ್ ಆಫ್ ದಿ ಫೀಸ್ಟ್'. ಅವರ ಕಥಾ ಸಂಕಲನ 'ಆರ್ಟ್ ಆಫ್ ಡೈಯಿಂಗ್ ಅಂಡ್ ಅದರ್ ಸ್ಟೋರೀಸ್' ನಿಂದ)

ಆವತ್ತು ರಾತ್ರಿ ಮಲಗುವುದಕ್ಕೆ ಹೋದಾಗ ಮುತ್ತಜ್ಜಿ ಮುಖದಲ್ಲಿ ವಿಲಕ್ಷಣ ಕಳೆಯಿತ್ತು. 'ರತ್ನಾ...ಬಾ ಇಲ್ಲಿ...ಬಾಮ್ಮ ನನ್ನ ಬಂಗಾರ...ನನ್ ಮುದ್ದೇ...'

ಧಡಗುಟ್ಟುತ್ತಿದ್ದ ಹೃದಯವನ್ನು ಕೈಯಲ್ಲಿ ಹಿಡಿದು ಹೋದೆ. ಹೇಗಪ್ಪಾ ಹೇಳೋದು? ನನ್ನ ಕೈ ಹಿಡಿದು ಪ್ರತಿ ಬೆರಳನ್ನೂ ಚೆಲ್ಲುತನದಿಂದ ಮುದ್ದಿಡುತ್ತಾ ಕಣ್ಣನ್ನು ಅರ್ಧ ತೆರೆದು ಒಲಿಸುವ ಧ್ವನಿಯಲ್ಲಿ ಕೇಳಿದಳು, 'ನಂಗೆ ನೀನ್ ಹೇಳ್ಲೇಬೇಕ್...ಹೇಳ್ತೀಯಾ ಅಲ್ವಾ?'

'ಇಲ್ಲ, ನಂಗೆ ಅದರ ಬಗ್ಗೆ ಏನೂ ಗೊತ್ತಿಲ್ಲ...' ತಕ್ಷಣ ಹೇಳಿದೆ.

'ಏನ್ ಏನೂ ಗೊತ್ತಿಲ್ಲ' ಅವಳ ಮುಖದಲ್ಲಿ ಆಶ್ಚರ್ಯ, ಕೋಪ ಎರಡೂ. 'ಆ ಕಿರಿಸ್ತಾನರ ಅಂಗ್ಡಿಯಿಂದ ಆವತ್ತು ಇಷ್ಟಿಷ್ಟೇ ಅಗಲದ್ ಕೇಕ್ ತಂದಿದ್ಯಲ್ಲ...ಅದರಲ್ ಮೊಟ್ಟೆ ಹಾಕತ್ತೇನ?'

ಅಬ್ಬ! ಎಂಬ ಸಮಾಧಾನದಿಂದ ನನಗೆ ಮಾತೇ ಹೊರಡಲಿಲ್ಲ.

'ಹೇಳ್. ಹಾಕ್ತಾರೇನ? ನನ್ಗೂ ಒಂದ್ ಕೇಕ್ ತರ್ತೀಯೇನ?' ಕಳ್ಳ ಧ್ವನಿಯಲ್ಲಿ ಕಣ್ಣನ್ನು ಕಿರಿದುಗೊಳಿಸುತ್ತ ಕೇಳಿದಳು.

ಅಂದಿನಿಂದ ನನ್ನ ಮುತ್ತಜ್ಜಿಯ ನಡುವಿನ ವಿಚಿತ್ರ ಬಾಂಧವ್ಯ ಶುರುವಾಯ್ತು. ಕೇಕ್, ಐಸ್ ಕ್ರೀಮ್, ಬಿಸ್ಕೆಟ್, ಸಮೋಸ ಇತ್ಯಾದಿ ಅಬ್ರಾಹ್ಮಣರ ಕೈಯಿನ ಅಡುಗೆಗಳು ಒಂದೊಂದಾಗಿ ಹಾಸಿಗೆ ಹಿಡಿದ ಸಸ್ಯಾಹಾರಿ ಮುತ್ತಜ್ಜಿಯ ರೂಮಿಗೆ ಕಳ್ಳತನದಿಂದ ನುಸುಳಲಾರಂಭಿಸಿದವು. ಹೆಚ್ಚು ಕಮ್ಮಿ ಒಂದು ಶತಮಾನದುದ್ದಕ್ಕೂ ಶುದ್ಧವಾದ ಮನೆಯಡುಗೆಯನ್ನು ತಿಂದಿದ್ದ ಬ್ರಾಹ್ಮಣ ವಿಧವೆಯೊಬ್ಬಳ ಸಾವಿನ ಗಳಿಗೆಯ ವಿಚಿತ್ರ ಬಯಕೆಗಳು!

ನನ್ನ ಅಪ್ಪ ಅಮ್ಮ ಮಲಗಲು ಹೋದ ತಕ್ಷಣ ರಾತ್ರಿ ನನ್ನ ಕೈಯಿಂದ ಹೆಚ್ಚುಕಮ್ಮಿ ಕಿತ್ತುಕೊಂಡೇ ತಿನ್ನುತ್ತಿದ್ದಳು ಮುತ್ತಜ್ಜಿ, ಯಾವುದೋ ಅದ್ಭುತ ಸಂಶೋ... ಮಾಡುವವಳಂತೆ ಕೇಕನ್ನು ಕೈಯಲ್ಲಿ ಹಿಡಿದು ತಿರು... ಮುರುಗಿಸಿ ನೋಡುತ್ತಿದ್ದಳು.

'ನಿಜವಾಗ್ಲೂ ಇದ್ರಲ್ಲಿ ಮೊಟ್ಟೆ ಹಾಕಿರ್ತಾರ... ಇಲ್ಲದಿದ್ದರೆ ತಾನು ತಿನ್ನಲಾರೆ ಎಂಬಂತೆ ಹತ್ತು... ಕೇಳಿ ಖಚಿತ ಮಾಡಿಕೊಳ್ಳುತ್ತಿದ್ದಳು.

'ಹೌದಜ್ಜಿ ಹೌದು' ಇಷ್ಟೊತ್ತಿಗೆ ಮಧ್ಯಾ... ನಮ್ಮ ಪಾರ್ಟಿಗಳು ಸ್ವಲ್ಪ ಸುಸ್ತು ಹೊಡೆ... ಆರಂಭಿಸಿದ್ದವು. ಚೀಪಾದ ಹಳದಿ ಬಣ್ಣದ ಕೇಕು... ಅದರ ಮೇಲೆ ಬಿಳಿ ಬಣ್ಣದ ಕ್ರೀಮ್, ಸುತ್ತ ಬ... ಬಣ್ಣದ ಒರಟಾದ ಅಂಚು.

'ಬೇಕಾದಷ್ಟ್ ಮೊಟ್ಟೆ ಹಾಕಿದಾರೆ...' ಬೇಗ ... ಮುಗಿಸಲಿ ಎಂದು ಒತ್ತಿ ಹೇಳುತ್ತಿದ್ದೆ, 'ಆ ಬ... ಓನರ್ ಇದಾನಲ್ಲ, ಅವನೊಬ್ಬ ಕಿರಿಸ್ತಾನ. ಅ... ಮುಸ್ಲಿಮರನ್ನ ಇಟ್ಟಿದಾನಂತೆ'

'ಓ......!' ಮುತ್ತಜ್ಜಿ ದೀರ್ಘವಾಗಿ 'ಉ... ಯುತ್ತಿದ್ದಳು. ಗುಲಾಬಿ ಬಣ್ಣದ ಪುಟ್ಟ ನಾಲಿಗೆ ... ಮೊದಲು ಕ್ರೀಮನ್ನೆಲ್ಲ ನೆಕ್ಕಿ ಮುಗಿಸುತ್ತಿದ್ದಳು. ಹಲ್... ಬಾಯಿಂದ ಸಶಬ್ದವಾಗಿ ಲೊಟ್ಟೆ ಹೊಡೆಯು... ನಿಧಾನವಾಗಿ ನುಂಗುತ್ತಿದ್ದ ರೀತಿ!

ಒಂದು ವಾರ ನಮ್ಮ ಗುಟ್ಟು ಯಾರಿಗೂ ಗೊ... ಗಲಿಲ್ಲ. ಮುತ್ತಜ್ಜಿಯ ಧೈರ್ಯ ಈಗ ಜಾಸ್ತಿಯಾ... ಅವಳಿಗೆ ಕೇಕುಗಳು ಬೇಡವಂತೆ. ಎದೆನೋವು ಬರು... ಅವಳ ಬಯಕೆಗಳು ಇಂಥವೇ ಎಂದು ಹೇ... ಬರುತ್ತಿರಲಿಲ್ಲ, ತರಾವರಿ. ಜೊತೆಗೆ ತಕ್ಷಣವೇ ಪೂ... ಬೇಕು, ರಿಯಾಯ್ತಿಯೇ ಇಲ್ಲ.

'ನಂಗ್ ಗಂಟಲೆಲ್ಲ ಬತ್ತಿ ಹೋಗಿದೆ...' ಏನಾ... ಬೇಕೆ ಅಂತ ಕೇಳಿದ ಅಮ್ಮನ ಹತ್ತಿರ ಒಂದು ... ಮುತ್ತಜ್ಜಿ ತನ್ನ ಅಳಲನ್ನು ತೋಡಿಕೊಂಡಳು. 'ಇಲ್ಲ..... ನೀರು ಬೇಡ.ನಂಗ್ ಹಣ್ಣಿನ್ ರಸನೂ ಬೇ... ಅಮ್ಮನ ಸುಸ್ತಾಗಿದ್ದರೂ ಕರುಣೆಯು... ಕೂಡಿದ ಮುಖವನ್ನು ನೋ... ಕೇಳಿದಳು. 'ನಂಗೊತ್ತ್, ನಂಗ... ಬೇಕ್ ಅಂತ...' ಕೊಂಯ್ ಎ... ಗೋಳು ಕರೆವ ಧ್ವನಿಯಲ್ಲಿ '... ಅವತ್ತ್ ರತ್ನ ತಂದಿದ್ದಲ್ಲ...ಬ... ಕಂದ್ ಬಣ್ಣದ್ ನೀರು... ... ತೆಗೆದ್ ತಕ್ಷಣ ಭುಳಕ್ ಅ... ಶಬ್ದ ಮಾಡ್ತಲ್ಲ...ಸುರಿದ್ರೆ ನೊರೆನೊರೆಂ... ಬರತ್ತಲ್ಲ..."

'ಕೋಕಾಕೋಲಾ...!!!' ಅಮ್ಮನ ಆಶ್ಚರ್ಯ... ಮಿತಿಯಿರಲಿಲ್ಲ, 'ಸುಮ್ನೆ ಹುಡ್ಗಾಟ ಆಡ್ಬೇಡಿ. ನಿಮ್ಗ... ಬರೊಲ್ಲ'

'ಅದೇನ್ ಸುಟ್ಟದ್ದೋ...ನಂಗ್ ಅದೇ ಬೇ... ಮತ್ತೆ ಕೊಂಯ್ ರಾಗ. ಅಮ್ಮ ತಂದು ... ಬಗಿದುಕೊಂಡು ಸಣ್ಣ ಗ್ಲಾಸ್ ಒಂದಕ್ಕೆ ಬಗ್ಗಿಸಿ ಕೊಟ... ಒಂದೂ ಮಾತಿಲ್ಲದೆ. ಏಷ್ಟೆಂದರೂ ವಿನಮ್ರ ಮರಿಸೊ...

'ಆಹ್.......!' ಒರಗುದಿಂಬಿಗೆ ಕೂತು ಸ್ಟೀ... ಲೋಟದಲ್ಲಿ ಕೋಕ್ ಕುಡಿಯುತ್ತಿದ್ದ ಮುತ್ತಜ್ಜಿ ನಿಟ್ಟು... ಬಿಟ್ಟಳು. ಗಳಗಳನೆ ಕುಡಿಯುತ್ತಿರುವಾಗ ಕತ್ತಿನ ಬ... ಮೇಲಿಂದ ಕೆಳಗೆ ಹೊರಳುತ್ತಿತ್ತು, ಕುಡಿದು ಮುಗಿ... ಮೇಲೆ ಒಂದು ತೇಗು. ತೃಪ್ತಿಯ ದೀರ್ಘ ತೇ... ಅಕಸ್ಮಾತ್ತಾಗಿ ನೆನಪಾದವಳಂತೆ ಕೇಳಿದಳು. 'ಇ... ಇನ್ನೇನಾದ್ರೂ ಹಾಕ್ತಾರೇನ? ಅದೆ, ಹೆಂಡ ಅ... ದ್ದೇನಾದ್ರೂ....?'

ತಿಂಗಳು ಕಳೆಯುವ ಹೊತ್ತಿಗೆ ಮುತ್ತಜ್ಜಿಯ 'ಬರದ' ಬೇಡಿಕೆಗಳು ನಮಗೆ ಒಗ್ಗಿ ಹೋಗಿದ್ದ... ಅವಳಾಗಲೇ ನಿಂಬೆಯ ಒಗಚು, ಬೆಳ್ಳುಳ್ಳಿಯ ಕಮ... ತರಾವರಿ ಸೋಡಾಗಳು, ಬ್ರಾಂಡಿ ಹಾಕಿ ಮಾಡಿದ ಹ... ಕೇಕ್, ಹತ್ತಿರದ ಬಜಾರಿನ ಒಂದು ನೊಣ ತುಂ... ಅಂಗಡಿಯಿಂದ ತಂದ ಭೇಲ್ ಪೂರಿ ಎಲ್ಲದರ ರ... ನೋಡಿಯಾಗಿತ್ತು.


'ಏನಾದ್ರೂ ಆಗಬಾರದ್ ಆಗುತ್ತೆ ನೋಡು...ಅವ... ತಲೆ ಕೆಡ್ತಾ ಇದೆ...' ಅಮ್ಮ ಗೊಣಗುತ್ತಲೇ ಇದ್ದಳು.

ಅವಳು ಹೇಳಿದಂತೆಯೇ ಆಯಿತು. ಮುತ್ತ... ಇತ್ತೀಚೆಗೆ ನುಂಗಲೂ ಆಗುತ್ತಿರಲಿಲ್ಲ, ಗಂಟಲಿಗೆ ಸು... ಅರ್ಥಂಬರ್ಥ ಕೋಕ್ ಮೂಗಿನ ಹೊಳ್ಳೆಯಿ... ಕಡುಗೆಂಪಾಗಿ, ದಪ್ಪವಾಗಿ ಅಯ್ಯಮ್ಮ ಎನ್ನಿಸುವ... ಹರಿದುಬರುತ್ತಿತ್ತು.

'ಘುಥುತ್...ಘುಥುತ್...' ಕಿರುಚುತ್ತಿದ್ದಳು. ಅಪ್ಪಾಪ... ಅಮ್ಮ ಏನೋ ಕಷಾಯ ಮಾಡಿ ಕೊಟ್ಟರೆ ತ... ಹೊಲೆದುಕೊಂಡು ಬಾಯೇ ಬಿಡಲಿಲ್ಲ. 'ಬೇಡಾ... ಉನ್ಮತ್ತಳಂತೆ ಅರಚಿದಳು. 'ನಂಗ್ ಬಜಾರಿನಿಂದ್ ಏನಾದ... ತಂದ್ಕೊಡ್... ಹಸಿ ಈರುಳ್ಳಿ, ಕರ್ದಿರೋ ರೊಟ್ಟಿ, ಕೋ... ಆಡು....ಏನಾದ್ರೂ ಒಂದ್....'

ಬದುಕು ಒಂದು ಕುಚೋದ್ಯ; ನಮ್ಮ ನಡುವಿನ ಎಲ್ಲದರಲ್ಲೂ ಅದು ಕಾಣಿಸುತ್ತದೆ -ಜಾನ್‌ಗೇ

ಹೋರಾಟಗಳ ಸ್ಫೂರ್ತಿ ಚಿಲುಮೆ ರೋಸಾ



'ಕಪ್ಪು' ಎಂಬುದು ಸೌಂದರ್ಯ ಮತ್ತು ಸ್ವಾಭಿಮಾನದ ...ಕ ಎಂದು ಜಗತ್ತಿಗೆ ಸಾರಿದ ಕರಿಯ ಜನಾಂಗದ ...ವು, ಶೋಷಣೆ, ವಿಮೋಚನೆಯ ಹಾದಿಯಲ್ಲಿ ಅವರು ...ದುಬಂದ ಮುಳ್ಳುಗಳು, ಅವನ್ನು ಮೀರಿನಿಂತ ಅವರ ...ಸಗಾಥೆಯನ್ನು ಕನ್ನಡದ ಓದುಗರಿಗೆ ಅತ್ಯಂತ ನಿಷ್ಠೆ ...ಮಾಣಿಕತೆ ಮತ್ತು ಬದ್ಧತೆಯಿಂದ ತಿಳಿಸುವ ಕೆಲಸವನ್ನು ...ಡಿದವರು ಎಂ.ಆರ್. ಕಮಲ. 'ಕಪ್ಪು ಕವಯಿತ್ರಿಯರ ...ತು', 'ಕಪ್ಪು ಹಕ್ಕಿಯ ಬೆಳಕಿನ ಹಾಡು', ...ತ್ತರ ನಕ್ಷತ್ರ'ಗಳಂತಹ ಅಮೂಲ್ಯ ...ಗಳನ್ನು ಕನ್ನಡದ ಓದುಗರಿಗೆ ನೀಡಿದ ...ಲ ಅವರೇ ಈಗ ಅಮೇರಿಕಾದ ...ಂಗ ನೀತಿಯ ವಿರುದ್ಧ ಹೋರಾಡಿ, ...ರ್ಥಕ ಬದುಕನ್ನು ನಡೆಸಿದ ರೋಸಾ ...ರ್ಕ್ಸ್ ಅವರ ಆತ್ಮಕಥೆಯಾದ 'ನನ್ನ ...ಯನ್ನೂ ಅನುವಾದಿಸಿದ್ದಾರೆ.



...ಮಹಾನ್ ಘಟನೆಗಳು ಎಷ್ಟೋ ಬಾರಿ ... ಘಟನೆಗಳಿಂದ ಆರಂಭವಾಗುತ್ತವೆ. 1955ರ ...ಬರ್ 1ರಂದು ರೋಸಾ ಪಾರ್ಕ್ಸ್ ಬಸ್ ಒಂದರಲ್ಲಿ ...ರಿಗೆ ಸೀಟು ಬಿಟ್ಟು ಏಳದೆ ಪ್ರತಿಭಟಿಸಿದ್ದು ಅಂತಹ ...ು ನಿದರ್ಶನ. ರೋಸಾ ಅವರೇ ಹೇಳಿಕೊಳ್ಳುವಂತೆ, ...ು ಮುಂದಿನ ಆಗುಹೋಗುಗಳ, ಕ್ರಾಂತಿಯ, ...ಂಬಲದ, ಹೋರಾಟದ ಯಾವ ಪೂರ್ವತೀರ್ಮಾನಗಳಿಂದಲೂ ಅವರು ಆ ನಿರ್ಧಾರವನ್ನು ತಾಳಿದ್ದಾಗಿರಲಿಲ್ಲ; ಬದಲಾಗಿ ಹಲವು ವರ್ಷಗಳ ನಿರಂತರ ಅಪಮಾನ, ನೋವು, ಸಿಟ್ಟು ಮತ್ತು ಆಕ್ರೋಶಗಳು ಸ್ಫೋಟಿಸಿದ ಘಳಿಗೆ ಅದಾಗಿತ್ತು. ಇಂದು ಕರಿಯರಿಗೆ ಮಾತ್ರವಲ್ಲ, ಮಹಿಳಾ ಸಂಬಂಧೀ ವಿಮೋಚನೆಗೆ ಹೋರಾಡುವವರಿಗೆ ಮತ್ತು ಜಗತ್ತಿನ ಎಲ್ಲಾ ಕಡೆಯೂ ಅನ್ಯಾಯದ ವಿರುದ್ಧ ಹೋರಾಡುವವರಿಗೆ ರೋಸಾ ಸ್ಫೂರ್ತಿಯ ಚಿಲುಮೆಯಾಗಿದ್ದಾರೆ.

ಅವರ ಹೋರಾಟದ ಮನಸ್ಥಿತಿಗೆ ಅವರ ಅಜ್ಜಿ ತಾಯಿಯರ ಚಿಂತನೆ ಮತ್ತು ನಿಲುವುಗಳು ಕಾಣಿಕೆ ನೀಡಿರುವಂತೆಯೇ ಬಾಳಸಂಗಾತಿಯಾದ ರೇಮಂಡ್ ಪಾರ್ಕ್ಸ್ ಅವರ ಜೀವನಧೋರಣೆ, ಸಾಮಾಜಿಕ ಬದ್ಧತೆ, ರೋಸಾ ಕುರಿತ ಅವರ ಪ್ರೀತಿ ಮತ್ತು ಕಾಳಜಿಗಳೂ ಪೂರಕವಾಗಿರುವುದು ಆತ್ಮಕಥನದಲ್ಲಿ ಒಡಮೂಡಿದೆ. ಸಮಾನಮನಸ್ಕ ಬಾಳಸಂಗಾತಿಗಳ ಸಾರ್ಥಕ ಬದುಕಿನ ಅವಲೋಕನ 'ನನ್ನ ಕಥೆ'ಯಲ್ಲಿ ದೊರೆಯುತ್ತದೆ. ರೋಸಾ ಪಾರ್ಕ್ಸ್ ಇಂದು ಎಲ್ಲರ ಆತ್ಮಗೌರವದ ಪ್ರತೀಕವಾಗಿದ್ದಾರೆ. ಮುಂದಿನ ಜನಾಂಗಕ್ಕೆ ಅವರು ನೀಡಿರುವುದೆಲ್ಲ 'ಘನತೆಯನ್ನು ಸಂಪಾದಿಸಲು ಆತ್ಮವಿಶ್ವಾಸದಿಂದ ಹೋರಾಡಿ' ಎಂಬ ಸಂದೇಶವಾಗಿದೆ. ಒಂದಿಡೀ ಸಮುದಾಯಕ್ಕೆ ತಮ್ಮತನದ ಅರಿವನ್ನು, ಅವರಿಗೆ ಸಲ್ಲಬೇಕಾದ ನ್ಯಾಯಯುತ ಹಕ್ಕುಗಳನ್ನು ಒದಗಿಸಿಕೊಡುವುದಕ್ಕೆ ಬಾಳನ್ನು ಮುಡಿಪಾಗಿಟ್ಟ ಅವರು ತಮ್ಮ ತೊಂಬತ್ತೆರಡು ವರ್ಷಗಳ (04.02.1913-24.11.2005) ಸಾರ್ಥಕ ಜೀವನವನ್ನು ನಡೆಸಿದ್ದಾರೆ.

ಅನುವಾದಕಿ ಕೇವಲ ಆತ್ಮಕಥೆಯನ್ನು ಅನುವಾದ ಮಾಡುವುದರಲ್ಲಿ ತೃಪ್ತರಾಗದೆ, ತುಂಬ ದೀರ್ಘವಾದ ಮತ್ತು ಓದುಗರಿಗೆ ಉಪಯುಕ್ತವಾದ ಟಿಪ್ಪಣಿಗಳನ್ನು ನೀಡಿದ್ದು ಅವು ಒಟ್ಟು ರೋಸಾ ಅವರ ಹೋರಾಟದ ಹಿನ್ನೆಲೆ, ಅಮೇರಿಕಾದ ವಿವಿಧ ಮಾನವ ಹಕ್ಕು ಹೋರಾಟದ ಸಂಘಟನೆಗಳು ಮತ್ತು ನೇತಾರರ ಹಿನ್ನೆಲೆಯನ್ನು ಒದಗಿಸುತ್ತವೆ. ಕೃತಿಯ ಉದ್ದಕ್ಕೂ ಬರುವ ಭಾವಚಿತ್ರಗಳು, ಓದುವ ಸಂಗತಿಗಳನ್ನು ಮನದಲ್ಲಿ ಅಚ್ಚೊತ್ತುವಂತೆ ಮಾಡುತ್ತವೆ. ಕಮಲ ಅವರು ಓರ್ವ ಸಮರ್ಥ ಅನುವಾದಕಿ ಎಂಬುದನ್ನು ಈ ಕೃತಿ ಮತ್ತೊಮ್ಮೆ ಋಜುಪಡಿಸುತ್ತದೆ. ಭಾಷೆಯಲ್ಲಿ ಎಲ್ಲೂ ತೊಡಕಿಲ್ಲ; ಪುಟ್ಟ ಪುಟ್ಟ ಮತ್ತು ಸ್ಪಷ್ಟವಾದ ವಾಕ್ಯಗಳು ಈ ಕೃತಿಯ ಹಿರಿಮೆಯಾಗಿವೆ. ಇದರಿಂದ ಇದೊಂದು ಅನುವಾದ ಕೃತಿ ಎಂಬುದೇ ಮರೆತುಹೋಗಿ ಕಮಲ ಅವರು ಬರೆದ ರೋಸಾ ಅವರ ಜೀವನ ಚರಿತ್ರೆ ಇರಬೇಕು ಎನಿಸುವಂತಿದೆ.

ಮಹಿಳಾ ಆತ್ಮಕಥನಗಳ ಇತಿಹಾಸ ಬಲು ಚಿಕ್ಕದು. ಸಾಮಾಜಿಕ ಬದಲಾವಣೆಗಳ ಪರ, ಮಾನವ ಹಕ್ಕುಗಳ ಪರವಾಗಿ ಹೋರಾಡಿರುವವರ ಆತ್ಮಕಥನಗಳು ದೇಶೀಯ ಭಾಷೆಗಳಿಗೆ ಅನುವಾದವಾಗುವುದು ಇಂದು ಅಗತ್ಯವಾಗಿದೆ. ಈಗಾಗಲೇ ಹಲವು ಸದಭಿರುಚಿಯ ಮತ್ತು ಮೌಲಿಕ ಕೃತಿಗಳನ್ನು ಪ್ರಕಟಿಸಿದ ಕಥನ ಪ್ರಕಾಶನದ ಏಳನೆಯ ಪ್ರಕಟಣೆಯಾದ ಇದು, ಮಹಿಳಾ ಅಧ್ಯಯನದ ಶಿಸ್ತಿಗೆ ಒಂದು ಉತ್ತಮ ಆಕರ ಗ್ರಂಥವಾಗಲಿದೆ.

-ಡಾ. ಸಬಿಹಾ ಭೂಮೀಗೌಡ




'ನನ್ನ ಕಥೆ'
ಅನು: ಎಂ.ಆರ್. ಕಮಲ
ಕಥನ ಪ್ರಕಾಶನ,
ಬೆಂಗಳೂರು
2006.
ಬೆಲೆ ರೂ. 80/ -

...ಮ್ಮನ್ನು ಬಿಟ್ಟು ಹೋಗುತ್ತಿದ್ದಾಳೆಂದು ನಮಗೆ ...ಗಿತ್ತು.

...ರ್ತಿ ಹತ್ತು ದಿನ ಮುತ್ತಜ್ಜಿ ಆಸ್ಪತ್ರೆಯಲ್ಲಿದ್ದಳು. ... ನನ್ನ ಅಮ್ಮ ಒಬ್ಬರಾದ ಮೇಲೊಬ್ಬರು ಅವಳ ... ಕೂತು ಆಸ್ಪತ್ರೆಯ ನೆಲದ ಮೇಲೆ ಮಲಗಿ ...ೀ ನಿಭಾಯಿಸಿದೆವು.

...ದ್ದಿಲ್ಲದೆ ಮುತ್ತಜ್ಜಿ ಮಲಗಿದ್ದಳು. ಅವಳ ಊದಿಕೊಂಡ ...ಮುಖದಷ್ಟೇ ದೊಡ್ಡದಾಗಿ ಕಾಣುತ್ತಿತ್ತು, ಬಲೆಯಿಂದ ...ಳ್ಳಲು ವಿಲವಿಲ ಒದ್ದಾಡುವ ದೊಡ್ಡ ಮೀನಿನಂತೆ ...ದ್ದಳು. ಹೊದಿಕೆಗಳು ನಾರಲಾರಂಭಿಸಿದವು. ತರುಣ ... ತಲೆಯಾಡಿಸಿದ 'ಏನೂ ಮಾಡಲು ಬರುವುದಿಲ್ಲ, ... ಏನನ್ನೂ ಬಿಟ್ಟಿಲ್ಲ.'

...ತ್ತ ದಿನ ಅವಳ ಕಣ್ಣುಗಳು ಏನನ್ನೋ ...ಕುತ್ತಿರುವಂತಿತ್ತು. ಕೈಗಳನ್ನು ಎಲ್ಲ ...ದ ಆವರಿಸಿದ್ದ ಸೂಜಿ, ಟ್ಯೂಬುಗಳು. ...ಸ್ ಅವಳ ದೇಹಕ್ಕೆ ಇಳಿಯುತ್ತಿದ್ದಂತೆ ... ಮೂಗಿಂದ ಕೆನ್ನೆಗೆ ಏನೋ ... ದ್ರವವೊಂದು ಹರಿಯುತ್ತಲೇ ಇತ್ತು, ...ಮನ್ನು ಬಿಗಿದು ಸಡಲಿಸುತ್ತಿದ್ದವಳ ...ದ 'ರತ್ನ...' ಎಂಬ ಪದ ...ತು!



...ು, ಅಮ್ಮ ಅವಳ ಕಡೆಗೆ ಧಾವಿಸಿದೆವು. ಕಣ್ಣೀರು ... ಮೇಲೆ ಹರಿಯುತ್ತಿದ್ದ ಅಮ್ಮ ಬಾಗಿ ಬೇಡಿ ...ಳು. 'ನನಗೆ ಆಶೀರ್ವಾದ ಮಾಡಿ ಪಾಟ. ...ಕೆ ಮುಂಚೆ ನನ್ನ ಆಶೀರ್ವದಿಸಿ'.

...ತ್ತಜ್ಜಿ ಕೋಪದಿಂದಲೋ ಎಂಬಂತೆ ನಿಶಬ್ದವಾಗಿ ...ಹೊರಳಿಸುತ್ತ ಅವಳ ಕಡೆಗೆ ನೋಡಿದಳು. ಅದೇ ... ಸಲ ಅವಳ ಮುಖದ ಮೇಲೆ ಬೆವರಿನ ...ು ಹೊದಿಕೆಯೊಂದು ಕಾಣಿಸಿತು. ಮುಖದ ...ಗಳು ಬಿರುಸಾಗಿ ಬಿಗಿದು ಮತ್ತೆ ಹೊರಳಿದವು. ... ನುಗ್ಗಿದ ಶಕ್ತಿಯಲ್ಲಿ ಟ್ಯೂಬಗೆ ಸೇರಿಸಿದ ...ದಿಬ್ಬ 'ಪುಟ್' ಎಂದು ಕಿತ್ತಿತು. 'ಇಂಟ್ರಾವೀನಸ್' ...ದು ನಿಶಬ್ದವಾಗಿ ನೆಲಕ್ಕೆ ಬಿತ್ತು.

'...ಂದು ಕೆಂಪು ಸೀರೆ ತಗೊಂಬಾ... ಅದಕ್ ...ಡ್ ಜೊತೆ ಅಂಚಿರ್ಬೇಕ್, ಮತ್ತೆ... ಮೂಲೆ ...ಕ್ ತರ ಬೆಳ್ಳಿಯ ಪುಡಿ ಉದುರಿಸಿ ಕಣ್ಣಾಯಿ ...ಕ್, ಎಲ್ಲೆಲ್ಲ ಚೆನ್ನಾಗ್ ಕಾಣ್ತಿರೋ ಹಾಗೆ, ...ನ ಬಿಚ್ಚ್ ಬೇಕ್...'

... ಗಂಟಲಿನಿಂದ ಮತ್ತೆ ಗುಳುಗುಳಿಸುವ ಶಬ್ದ. ಉನ್ಮತ್ತ ಸಮುದ್ರದ ಮಧ್ಯ ತುಯ್ದಾಡುವ ದೋಣಿಯಂತೆ ಮುಖ, ಕತ್ತೆಲ್ಲ ತೂಗಲಾರಂಭಿಸಿತು. ಒಮ್ಮೆ ಜೋರಾಗಿ ವಾಕರಿಸಿದಾಗ ವಾಂತಿ ಅವಳ ಬಾಯಿಂದ, ಮೂಗಿನ ಹೊಳ್ಳೆಗಳಿಂದ ಚಿಮ್ಮಿತು. ಅವಳು ತಿಂದಿದ್ದ ಮಿಲ್ಕ್‌ಶೇಕಿನಷ್ಟು ಗಟ್ಟಿ ವಾಂತಿ. ಕುಡಿದ ಹೆಂಡದ ಕೋಕ್‌ನಷ್ಟು ಕಡುಗೆಂಪು. ಒಮ್ಮೆ ಬಿರುಸಾಗಿ ಮುಂದೆ ಚಾಚಿದ ಮುಖ, ಗಲ್ಲ ಗಂಟಲಿನ ಬಾವಿನ ಮೇಲೆ ಗಟ್ಟಿಯಾಗಿ ಕುಳಿತವು.

ಮುತ್ತಜ್ಜಿಯ ದೇಹವನ್ನು ಮನೆಗೆ ತಂದ ಮೇಲೆ ಮೃದುವಾದ ಒದ್ದೆ ಬಟ್ಟೆಯಿಂದ ಒರೆಸಲು ಅಮ್ಮನಿಗೆ ಸಹಾಯ ಮಾಡಿದೆ. ಎಲ್ಲ ವಾಸನೆಗಳನ್ನು ತೊಲಗಿಸಬೇಕಿತ್ತು, ಆಸ್ಪತ್ರೆಯ ವಾಸನೆ, ಸಾಯುವ ಮುದುಕಿಯೊಬ್ಬಳು ಕುಡಿದ ಹಣ್ಣಿನ ರಸದ ವಾಸನೆ...ಅವಳ ಚರ್ಮವೂ ಒಣಗಿದ ಪೇಪರಿನಂತೆ ತೆಳ್ಳಗಿತ್ತು. ಅವಳ ಕುರುಚಲು ತಲೆ. ಹಾಸಿಗೆ ಹಿಡಿದಾಗಿಂದ ತಲೆ ಬೋಳಿಸಿಕೊಳ್ಳೆನೆಂದು ಹಟ ಮಾಡಿದ್ದಳಲ್ಲ! ಹೇರ್ ಬ್ರಶ್ಶಿನ ಬಿಳಿಯ ಮೃದುವಾದ ತುದಿಗಳಂತೆ ಕಂಡವು.

ಅಷ್ಟು ವರ್ಷ ಬಾಳಿದ್ದರೂ ಅವಳಿಗೆ ಹುಟ್ಟಿದ್ದು ಒಂದೇ ಮಗು. ಆದರೂ ಅವಳ ಹೊಟ್ಟೆಯ ಮೇಲಿನ ಚರ್ಮದ ಸುಕ್ಕುಗಳು ಹರಿದ ವೆಲ್ವೆಟ್ಟಿನಂತೆ, ಮೇಲಿಂದ ಕೆಳಗೆ, ಆಚೆಯಿಂದ ಈಚೆಗೆ ಸಣ್ಣ ಬೆಳ್ಳಿಯ ತೊರೆಗಳಂತೆ ಹರಿದಿದ್ದವು.

'ಒಂದ್ ಸೀರೆ ತಗೊಂಬಾ...' ಸತ್ತವಳಿಗೆ ಕೇಳಿಸುತ್ತೇನೋ ಎಂಬಂತೆ ಅಮ್ಮ ಪಿಸುಗುಟ್ಟಿದಳು. ಸೆಟೆದ ತಣ್ಣಗಿನ ದೇಹದ ಕಡೆಗೊಮ್ಮೆ ಕಣ್ಣು ಹಾಯಿಸಿದೆ. ಅವಳ ಬೆತ್ತಲೆ ದೇಹವನ್ನು ನಾನು ನೋಡಿದ್ದು ಅದೇ ಮೊದಲು. ಅಂತೂ ಕೊನೆಗೊಮ್ಮೆ ಶಾಂತವಾಗಿ ಮಲಗಿದ್ದಳು. ಅನಿರೀಕ್ಷಿತಗಳನ್ನು ನಿರೀಕ್ಷಿಸುವ ಪಾಠವನ್ನು ಈ ಒಂದೆರೆಡು ತಿಂಗಳಲ್ಲಿ ಅವಳಿಂದ ಕಲಿತಿದ್ದೆ, ಯಾವುದೋ ಮಾಡಬಾರದ್ದನ್ನ ಮಾಡುವ ನೆನಪಾಗಿ ಸತ್ತಿರುವ ಮುತ್ತಜ್ಜಿ 'ಮನಸ್ಸು ಬದಲಾಯಿಸಿ ಥಟ್ಟನೆ ಎದ್ದು ಕೂತರೆ?

'ಹುಚ್ಚು ಕಿತ್ತುಕೊಳ್ಳೆಯಲ್ಲ, ಆ ನಿನ್ನ ಚಿಮಟ ತಗೊಂಬಾ'-ಮುತ್ತಜ್ಜಿ ಎಲ್ಲೋ ಹೇಳುತ್ತಿದ್ದಂತೆ ಕೇಳಿಸಿತು. 'ಆ ನಿನ್ನ ಕೂದಲು ತೆಗೆಯುವ ಕ್ರೀಮ್ ಸಹ ತಗೊಂಬಾ. ನಂಗ್ ಮೀಸೆ ಅದ. ನಾನೂ ಚೆಂದ ಕಾಣ್ಬೇಕ್...ಮುದಿ ಗೊಡ್ಡಂಗ್ ಕಾಣ್ಬಾರ್ದ್...'

ಇಲ್ಲ, ಮುತ್ತಜ್ಜಿ ತಣ್ಣಗೆ ಮಲಗಿದ್ದಳು. ಅವಳ ಮೂಗಿನ ಹೊಳ್ಳೆಗೆ, ಕಿವಿಗೆ ಹತ್ತಿ ತುಂಬಿದ್ದರು. ಬದುಕಲ್ಲಿ ತಡವಾಗಿ ಬಂದ ಅವಳ ಬಯಕೆಗಳು ಮತ್ತೆಂದೂ ಬಾರದಿರಲಿ ಎಂಬಂತೆ.

ಓಡಿಹೋಗಿ ನನ್ನ ಬೀರುವಿನಿಂದ ಅಚ್ಚಕೆಂಪಗಿನ ರೇಷ್ಮೆ ಸೀರೆಯೊಂದನ್ನು ತಂದೆ. ಕಳೆದ ದೀಪಾವಳಿಗೆ ಕೊಂಡದ್ದು, ನನ್ನ ಬದುಕಿನ ಮೊದಲ ರೇಶ್ಮೆ ಸೀರೆ. ಅಮ್ಮನ ದಿಗ್ಭ್ರಾಂತ ಕಣ್ಣುಗಳನ್ನು ಲೆಕ್ಕಿಸದೆ ಮಡಿಕೆಗಳನ್ನು ಬಿಡಿಸಿ ಮುತ್ತಜ್ಜಿಯ ಬೆತ್ತಲೆ ದೇಹವನ್ನು ಪ್ರೀತಿಯಿಂದ ರೇಷ್ಮೆಯಲ್ಲಿ ಮುಚ್ಚಿದೆ. ಅವಳ ಬಾಲಿಶ ನಗುವಿನಂತೆ ಕೆಂಪು ರೇಷ್ಮೆ ಹೊಳೆಯಿತು.

'ಹುಚ್ಚ್ ಗಿಚ್ಚ್ ಹಿಡ್ದಿದೆಯಾ ನಿನಗೆ?' ಅಮ್ಮ ಕೋಪದಿಂದ ಪಿಸುಗುಟ್ಟಿದಳು. 'ಖಾಯಿಲೆಯಿಂದ ಮಲಗಿದ್ದ್ ವಯಸ್ಸಾದ್ ಹೆಂಗ್ಸ್ ಅದು. ಅವ್ಳಿಗೇ ಗೊತ್ತಿದ್ದಿಲ್ಲ ತಾನು ಏನ್ ಹೇಳ್ದೆ ಅಂತ...' ಸೀರೆಯನ್ನು ಮಡಿಸಿ ಆಚೆ ಎಸೆದಳು, ಆ ಒಂದು ಕ್ಷಣದಲ್ಲಿ ಅದು ಮೈಲಿಗೆ ಆಯಿತೇನೋ ಎಂಬಂತೆ. ಇನ್ನೆಂದೂ ಕ್ಷುಲ್ಲಕ, ಮೂರ್ಖ ಬಯಕೆಗಳು ಆ ದೇಹವನ್ನು ಕಾಡದಿರಲಿ ಎಂಬಂತೆ ಮತ್ತೆ ಮುತ್ತಜ್ಜಿಯ ದೇಹವನ್ನು ಒರೆಸಿದಳು.


ಮಾಸಿದ ಕಂದು ಬಣ್ಣದ ಒಂದು ಸೀರೆಯಲ್ಲಿ ಅವಳನ್ನು ಸುತ್ತಿದರು. ಜಪಸರವೊಂದು ಅವಳ ಉಬ್ಬಿದ ಕುರೂಪ ಕತ್ತಿನ ಸುತ್ತ ಮಲಗಿತ್ತು, ಅವಳು ಬದುಕಿರುವಾಗ ಆ ಜಪಸರವನ್ನು ಮುಟ್ಟಿದ್ದೇ ಕಾಣೆ.

ಅನಾಟಮಿಯಲ್ಲಿ ನಾನಿನ್ನೂ ನುರಿತವಳೇನಲ್ಲ, ದೇಹದ ಮೇಲ್ಪದರದಲ್ಲಿ, ಚರ್ಮದ ಸ್ವಲ್ಪ ಕೆಳಗೆ ನಾನಿನ್ನೂ ಸುತ್ತುತ್ತಿದ್ದೇನೆ. ಒಳಗಿನೊಳಕ್ಕೆ ಇಳಿಯಲಾಗಿಲ್ಲ, ನನಗೆ ಅವಳು ಯಾವತ್ತೂ ಹೇಳದ ಯಾವ್ಯಾವ ನೋವುಗಳು, ನೆನಪುಗಳು ಒಳಗೇ ಗಡ್ಡೆಯಾಗಿ ಕ್ಯಾನ್ಸರಿಗೆ ತಿರುಗಿದವೋ ಏನೋ.

ಈಗವಳು ನನಗೆ ಬಿಟ್ಟುಹೋಗಿರುವುದು ವಾಸನೆಯ ಆಸ್ತಿ ಮಾತ್ರ. ಅದೂ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿರುವಂಥದ್ದು. ಸ್ವಲ್ಪ ಕಾಲ ಗಲೀಜಾದ ಬೀಕರಿಗಳನ್ನು, ಕೊಳಕಾದ ಟೀ ಅಂಗಡಿಗಳನ್ನು ಹುಡುಕುತ್ತಾ ಅಲೆದೆ. ಕಮಟು ಎಣ್ಣೆಯಲ್ಲಿ ಕರಿದ ಚೂಪು ಮೆಣಸಿನಕಾಯಿ ಬಜ್ಜಿಗಳನ್ನು ಜೋಡಿಸಿಟ್ಟ ತಟ್ಟೆಗಳಲ್ಲಿ ನನ್ನ ಮುತ್ತಜ್ಜಿಯನ್ನು ಅರಸುತ್ತ ಸುತ್ತಿದೆ. ಅವಳು ತೀರಿಸಿಕೊಳ್ಳುತ್ತಿದ್ದ ಸೇಡನ್ನು ನನ್ನದಾಗಿಸಿಕೊಂಡು ಸಿಕ್ಕಿದ್ದೆಲ್ಲಾ ಮುಕ್ಕಿ ಒಂದು ವಾರ ಭೇದಿಯಿಂದ ನರಳಿದೆ.

ಈಗ ಕಿಟಕಿಗಳನ್ನೆಲ್ಲ ತೆಗೆದು ಬೀರುವಿನ ಧೂಳು ಝಾಡಿಸಿ ರೂಮನ್ನು ಸ್ವಚ್ಛಗೊಳಿಸಿದ್ದೇನೆ. ಅವಳ ಹಳೆಯ ಮಾಸಿದ ಸೀರೆಗಳನ್ನೆಲ್ಲ ಹರಿದು, ಅವಳ ಬೀರುವಿನ ಹಲಗೆಗಳ ಮೇಲೆ ನನ್ನ ಹೊಸದಾಗಿ ಹೊಳೆಯುತ್ತಿರುವ ಪುಸ್ತಕಗಳನ್ನು ಜೋಡಿಸಿದ್ದೇನೆ. ನೆಟ್ಟಗೆ ನಿಂತ ಪುಸ್ತಕಗಳು ಸಶಸ್ತ್ರ ಸೈನಿಕರಂತೆ ಮುತ್ತಜ್ಜಿಯ ಪುಟ್ಟ ಕಪಾಟನ್ನು ಎಷ್ಟು ಬೇಗನೇ ಆಕ್ರಮಿಸಿಕೊಂಡುಬಿಟ್ಟವೆ!

'ನಾನು ಜನರಿಗೆ ಸೌಲಭ್ಯ ಕಲ್ಪಿಸಿದ್ದೇನೆ'



ತಮ್ಮ ಜೂನ್ 28, 2006 ರ ಸಂಚಿಕೆಯ ಪುಟ 9 ರಲ್ಲಿ ವಾರ್ಡ್ ನಂ. 36 ಗೋವಿಂದರಾಜ ನಗರದ ಕಾಮಗಾರಿಗಳ ಬಗ್ಗೆ ಹಾಗೂ ನನ್ನ ವೈಯಕ್ತಿಕ ವಿಚಾರದಲ್ಲಿ ಸತ್ಯವನ್ನು ತಿರುಚಿ ಸುಳ್ಳು ವರದಿ ಮಾಡಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿರುವುದು ವಿಷಾಧನೀಯ. ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ನಾನು ಮುಂದುವರಿಯುವುದನ್ನು ಸಹಿಸದ ಕೆಲವು ಕೃತಘ್ನರ ತಪ್ಪು ಮಾಹಿತಿಯಿಂದ ಈ ಪ್ರಮಾದವಾಗಿದೆ ಎಂದು ಭಾವಿಸಿದ್ದೇನೆ.

ನಾನು ಮಹಾನಗರಪಾಲಿಕೆ ಸದಸ್ಯನಾಗುವ ಮೊದಲು ಈ ವಾರ್ಡಿನಲ್ಲಿ ಇಲ್ಲದಿದ್ದ ನಾಗರೀಕ ಸೌಲಭ್ಯಗಳು ಜನರಿಗೆ ಸಿಗುವಂತೆ ಶ್ರಮಿಸಿದ್ದೇನೆ. ಇದಕ್ಕೆ ನನ್ನ ವಾರ್ಡಿನಲ್ಲಾಗಿರುವ ಅಭಿವೃದ್ಧಿ ಕಾಮಗಾರಿಗಳೇ ಸಾಕ್ಷಿ.

ಇನ್ನು ನನ್ನ ಆಸ್ತಿಯ ವಿಚಾರ ಹಾಗೂ ನನ್ನ ವೈಯಕ್ತಿಕ ವಿಚಾರದಲ್ಲಿ "ಸಂಜೆ ಅಡಿಗೆಗೆ ಸೊಪ್ಪಿಗೇನಪ್ಪಾ ಮಾಡೋದು ಅನ್ನುತ್ತಿದ್ದವನು" ಪಾಲಿಕೆಯ ಸದಸ್ಯನಾದ ತಕ್ಷಣ ನನ್ನ ಆಸ್ತಿ-ಹೊಣೆಗಾರಿಕೆಯನ್ನು ತೋರಿಸುವ ತಃಖ್ತೆಯನ್ನು ಮಹಾನಗರಪಾಲಿಕೆಗೆ ಒದಗಿಸಿದ್ದೇನೆ. ಅದರ ನಕಲು ಪ್ರತಿಯನ್ನು ಲಗತ್ತಿಸಿದ್ದೇನೆ. ಪಾಲಿಕೆ ಸದಸ್ಯನಾಗುವ (2000) ಮೊದಲೇ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಆಸ್ತಿ ತೆರಿಗೆಯನ್ನು ಪಾವತಿ ಮಾಡಿರುವ ಬಗ್ಗೆ ದಾಖಲೆ ಲಗತ್ತಿಸಿದ್ದೇನೆ.

ಕಾಮಾಕ್ಷಿಪಾಳ್ಯದ ಗುಡ್ಡಣ್ಣ ಕಾಂಪ್ಲೆಕ್ಸ್ ನಮ್ಮ ಪಿತ್ರಾರ್ಜಿತ ಆಸ್ತಿಯಾಗಿದ್ದು ಸುಮಾರು 15 ವರ್ಷಗಳ ಹಿಂದೆಯೇ ನಿರ್ಮಾಣ ಮಾಡಿದ್ದು, ಬಿಟಿಎಂ ಬಡಾವಣೆಯ ಕಾಂಪ್ಲೆಕ್ಸ್ ಸಹ ಮಹಾನಗರಪಾಲಿಕೆ ಸದಸ್ಯನಾಗುವ ಮುಂಚೆಯೇ ಕಟ್ಟಡ ನಿರ್ಮಾಣಕ್ಕಾಗಿ ಬ್ಯಾಂಕ್ ಸಾಲ ಪಡೆದು ನಿರ್ಮಾಣ ಮಾಡಲಾಗಿದೆ. ನನ್ನ ಪಿತ್ರಾರ್ಜಿತ ಆಸ್ತಿಯಲ್ಲಿ ಮನೆ ಕಟ್ಟಲು ನನ್ನ ಸ್ವಯಾರ್ಜಿತ ಆಸ್ತಿಯನ್ನು ಮಾರಾಟ ಮಾಡಿದ್ದೇನೆ. ಕಟ್ಟಡ ನಿರ್ಮಾಣಕ್ಕೆ ಬ್ಯಾಂಕ್‌ನಿಂದ ಸಾಲ ಪಡೆದಿದ್ದೇನೆ, ಕಟ್ಟುತ್ತಿದ್ದೇನೆ.

ನನ್ನ ಮಗ ಮೆರಿಟ್ ಸೀಟನಲ್ಲಿ ಇಂಜಿನಿಯರಿಂಗ್ ಪದವಿಧರನಾಗಿದ್ದು ಬ್ಯಾಂಕ್‌ನಿಂದ ವಿದ್ಯಾಭ್ಯಾಸದ ಸಾಲ ಪಡೆದುಕೊಂಡು ವಿದೇಶಕ್ಕೆ ಹೋಗಿದ್ದಾನೆ.

ನಾನು ಇಂಜಿನಿಯರಿಂಗ್ ಪದವಿಯಲ್ಲಿ ಓದುತ್ತಿದ್ದಾಗ ನಮಗೆ ಇಂಗ್ಲಿಷ್ ಉಪನ್ಯಾಸಕರಾಗಿದ್ದ ನಿಮ್ಮ ತಂದೆಯವರಾದ ದಿವಂಗತ ಪಿ. ಲಂಕೇಶ್‌ರವರ ಪತ್ರಿಕೆಯಲ್ಲಿ ನಾನು ಅಪಾರವಾದ ಗೌರವವನ್ನು ಇಟ್ಟುಕೊಂಡಿದ್ದೇನೆ.

-ಜೆ. ಕೃಷ್ಣಪ್ಪ
ಮಹಾನಗರ ಪಾಲಿಕೆ ಸದಸ್ಯರು,
ಬೆಂಗಳೂರು

****

ಕೆಲವು ತಪ್ಪು ಮಾಹಿತಿಗಳಿದ್ದ ನಮ್ಮ ವರದಿಯಿಂದ ಪಾಲಿಕೆ ಸದಸ್ಯರಾದ ಜೆ. ಕೃಷ್ಣಪ್ಪ ನೊಂದುಕೊಂಡಿದ್ದಾರೆ. ಸೂಕ್ತ ದಾಖಲೆಗಳನ್ನು ಒದಗಿಸಿ ವರದಿಯಲ್ಲಿದ್ದ ದೋಷಗಳನ್ನು ತೋರಿಸಿದ್ದಾರೆ. ಕೃಷ್ಣಪ್ಪನವರಿಗೆ ನೋವುಂಟು ಮಾಡಿದ ಬಗ್ಗೆ ನಮ್ಮ ವಿಷಾದವಿದೆ.

-ಸಂ

ಚೋರಣ್ಣ ಎಲ್ಲರಿಗೂ ನಿನ್ನ ಮೇಲೆ ಕಣ್ಣು

ಅಣಕ

ಛೇ ಸುಮ್ಮನೆ ಹೇಳಬಾರದು. ಆ ಪಕ್ಷ ಈ ಪಕ್ಷ ಅಂತ ಏನೂ ಇಲ್ಲ, ಎಲ್ಲಾ ಪಕ್ಷದವರಿಗೂ ಬಡವರನ್ನು ಕಂಡರೆ, ಅದರಲ್ಲೂ ಬಡ ರೈತರನ್ನು ಕಂಡರೆ ಏನು ಪ್ರೀತಿ, ಅನುಕಂಪ ಅನ್ನೀರಿ. ಅಮಾಯಕ ರೈತರ ಜಮೀನನ್ನು ಖದೀಮ ನೆಲಗಳ್ಳರು ಆರು ಕಾಸು ಮೂರು ಕಾಸಿಗೆ ಹೊಡೆದುಕೊಂಡು ಮೋಸ ಮಾಡುತ್ತಾ ಇದಾರಲ್ಲ ಅನ್ನೋ ಸಂಕಟಕ್ಕೆ ರಾಜಕಾರಣಿಗಳೇ ಅವನ್ನ ಕೊಂಡುಕೊಳ್ತಾರೆ. ಕೆಐಎಡಿಬಿ ಎಂಬ ಸಂಸ್ಥೆಯ ಹೆಸರಿನಲ್ಲಿ ಸರ್ಕಾರವೇ ಭೂ ಒಡೆತನ ಪಡೆಯುತ್ತೆ. ಆಮೇಲೆ ಅದನ್ನು ಕೈಗಾರಿಕೆ ಸ್ಥಾಪಿಸುತ್ತೀವಿ, ರಸ್ತೆ ನಿರ್ಮಾಣ ಮಾಡಿ ರೆಪ್ಪೆ ಮುಚ್ಚಿ ತೆಗೆಯುವುದರಲ್ಲಿ ಊರಿಂದ ಊರಿಗೆ ಹೋಗುವ ಹಾಗೆ ಮಾಡ್ತೀವಿ ಅಂತ ಏನೇನೋ ಭ್ರಮೆ ಹುಟ್ಟಿಸುವ ಕಾರ್ಪೋರೇಟ್ ಕಂಪನಿಗಳ ಪಾದ ಪದ್ಮಂಗಳಿಗೆ ಅರ್ಪಿಸುತ್ತೆ ಅನ್ನೋದು ಅಲಾಯಿದ ಮಾತು...

ನಮ್ಮ ಮಣ್ಣಿನ ಮಗ ದೇವೇಗೌಡರನ್ನೇ ನೋಡಿ. ಬಡರೈತರ ಭೂಮಿ ಕಬಳಿಸಲು ಶ್ರೀಮಂತರಿಗೆ ಅವಕಾಶ ನೀಡುವುದಿಲ್ಲ ಅಂತ ಹಳ್ಳಿಯಿಂದ ದಿಲ್ಲಿಯವರೆಗೂ ಹೇಳ್ತಾ ತಿರುಗ್ತಿದಾರೆ. ನೈಸ್ ಕಂಪನಿ ನಿರ್ಮಿಸಲು ಉದ್ದೇಶಿಸಿರುವ ರಸ್ತೆ ಹಾಗೂ ಉಪನಗರಗಳ ವ್ಯಾಪ್ತಿಯಲ್ಲಿ ನನ್ನ ವಂಶದವರ ಭೂಮಿ ಬಿಲ್‌ಕುಲ್ ಇದೆ ಎಂದು ಯಾರಾದರೂ ತೋರಿಸಿದರೆ ಕತ್ತು ಕುಯ್ದುಕೊಳ್ತೀನಿ ಅಂತ ಗೋಳೋ ಮಾಡ್ತಿದ್ದಾರೆ. ಅಂದರೆ ಏನಾಯಿತು? ತಮ್ಮ ಆಸ್ತಿಯನ್ನು ಕಾಪಾಡಿಕೊಳ್ಳಲು ಈ ಗೌಡ ಹೋರಾಡುತ್ತಿಲ್ಲ ಪರಂತು ಬಡ ರೈತರಿಗೆ ಅನ್ಯಾಯವಾಗುವುದನ್ನು ಕಂಡು ಗೌಡರ ಮನಸ್ಸು ಕೋಪದಿಂದ ಕುದಿದಿದೆ, ಅಸಹಾಯಕತೆಯಿಂದ ನರಳಿದೆ ಎಂದ ಹಾಗಾಯಿತು. ಭೂ ದಾಖಲೆಗಳು ಎಚ್.ಡಿ. ಕುಮಾರಸ್ವಾಮಿಯವರ ಹೆಸರಿನಲ್ಲಿ ಜಮೀನು ಅಲ್ಲಿದೆ ಎಂಬುದನ್ನು ತೋರಸುತ್ತಿವೆಯಲ್ಲ ಎಂಬ ಕುಹಕಿ ವೈರಿಗಳ ಸವಾಲಿಗೆ ಮರು ಸವಾಲೆಸೆಯದಿರಲು ಅವರು ಅಂತಿಂತಹ ಗೌಡರಲ್ಲ, ದೇವೇಗೌಡರು! ಕುಮಾರಸ್ವಾಮಿ ನನ್ನ ವಂಶಸ್ಥನೇ ಅಲ್ಲ ಎಂದೋ, ಭೂಮಿ ಹಿಂದಿರುವ ಭೂಕಬಳಿಕೆ ಕುಮಾಸ್ವಾಮಿಯವರಿಗೂ ಮುಖ್ಯಮಂತ್ರಿ ನೀತಿವಂತ ಕುಮಾರಸ್ವಾಮಿಯವರಿಗೂ ಯಾವುದೇ ಸಂಬಂಧ ಇಲ್ಲ, ಅವರೇ ಬೇರೆ ಇವರೇ ಬೇರೆ ಎಂದೋ, ರಾಜಕಾರಣಿಗಳ ಇತ್ತೀಚಿನ ವರಸೆಯಂತೆ ಇವೆಲ್ಲ ಕಂಪ್ಯೂಟರಿನ ಮಿಸ್ಟೇಕು ಎಂದೋ ಅಥವಾ ಯಾವುದೋ ಭೂಚಟೇಷ್ಟೆ ಇದಕ್ಕೆ ಕಾರಣ ಎಂದೋ ಯಾವುದು ಸಂದರ್ಭಕ್ಕೆ ಸರಿ ಅನ್ನಿಸುತ್ತದೋ ಆ ಕಾರಣ ನೀಡಲು ಸಿದ್ಧತೆ ಮಾಡಿಕೊಂಡಿರುತ್ತಾರೆ ಎಂಬುದರಲ್ಲಿ ಸಂಶಯ ಇಲ್ಲ!

ಮುಖ್ಯಮಂತ್ರಿಯವರೇನೂ ಹಿಂದೆ ಬಿದ್ದಿಲ್ಲ, ನೈಸ್ ಕಂಪನಿ ವಶಪಡಿಸಿಕೊಂಡಿರುವ ಹೆಚ್ಚುವರಿ ಭೂಮಿಯನ್ನು ಹಿಂಪಡೆಯದೆ ಬಿಡುವುದಿಲ್ಲ ಎಂದು ಸಾರಿಸಾರಿ ಹೇಳುತ್ತಿದ್ದಾರೆ. ಪಾಪ ಬಡರೈತರ ಮೇಲಿನ ಪ್ರೀತಿ ನೋಡಿ!

ಹೌದು ಹೀಗೆ ವಶಪಡಿಸಿಕೊಂಡ ಹೆಚ್ಚುವರಿ ಭೂಮಿಯನ್ನು ಏನು ಮಾಡುತ್ತಾರೆ?

'ಹರಾಜು ಹಾಕ್ತೀವಿ' ಮುಖ್ಯಮಂತ್ರಿ ಘೋಷಣೆ!

ಹೀಗೆ ಹರಾಜಿನಿಂದ ಬಂದ ಹಣವನ್ನು ರೈತರಿಗೆ ಹಂಚುತ್ತಾರಾ?

ಇಲ್ಲವಂತೆ. ಮುಗ್ಧ ರೈತರಿಗೆ ಇದ್ದಕ್ಕಿದ್ದಂತೆ ಕೋಟ್ಯಂತರ ರೂಪಾಯಿ ಹಣ ಬಂದರೆ ಏನು ಮಾಡ್ತಾರೆ? ಕುಡೀತಾರೆ, ತಿನ್ತಾರೆ, ಮನೆ ಕಟ್ಟುಸ್ತಾರೆ, ಜುಂ ಅಂತ ಕಾರಲ್ಲಿ ಓಡಾಡ್ತಾರೆ. ಭರ್ಜರಿಯಾಗಿ ಮದುವೆ, ತಿಥಿ ಮಾಡ್ತಾರೆ. ಆಮೇಲೇನು ಮಾಡುತ್ತಾರೆ? ಕೈಗೆ ಬಂದ ಹಣ ಖಾಲಿ ಆದ ಮೇಲೆ ತಮ್ಮ ಭೂಮಿ ಕೊಂಡುಕೊಂಡವರ ಹತ್ತಿರ ಜವಾನರ ಕೆಲಸ ಬೇಡ್ತಾರೆ! ರೈತರ ಈ ಕಲ್ಯಾಣ ಗುಣ ತಿಳಿದಿರುವುದಕ್ಕೇ ಏನೋ ಮುಖ್ಯಮಂತ್ರಿಗಳು ಈ ಹಣಾನ ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ತೀವಿ ಅಂತಿದ್ದಾರೆ!

ದೋಸ್ತಿ ಪಕ್ಷ ಭಾಜಪ ವ್ಯಾಪರಸ್ಥರ ಪಕ್ಷ ಎಂದೇ ಪ್ರಸಿದ್ಧಿಗೆ ಬಂದಿರಬಹುದಾದರೂ, ಬಡರೈತರ ಪರ ಪುಂಖಾನುಪುಂಖವಾಗಿ ಹೇಳಿಕೆ ನೀಡುತ್ತಿದೆ. ಯಡಿಯೂರಪ್ಪನವರು 'ಯಾವುದೇ ಕಾರಣಕ್ಕೂ ಬಡರೈತರಿಗೆ ಅನ್ಯಾಯವಾಗಲು ಬಿಡುವುದಿಲ್ಲ, ಹೆಚ್ಚುವರಿ ಭೂಮಿಯನ್ನು ವಶಪಡಿಸಿಕೊಂಡೇ ತೀರುತ್ತೇವೆ' ಎಂದು ಹೇಳುತ್ತಿದ್ದಾರೆ.

ಏನು ಮಾಡುತ್ತೀರಿ ಹೀಗೆ ವಶಪಡಿಸಿಕೊಂಡ ಭೂಮಿಯನ್ನ?

ರೈತರಿಗೆ ಮರು ಹಂಚಿಕೆ ಮಾಡುತ್ತೀವಿ!

ಏನು ಕಾಳಜಿ! ಏನು ಕಳಕಳಿ!

ಹೌದು ಈ ರೈತರು ಅಂದರೆ ಯಾರು?

ಕ್ಷ-ಕಿರಣ ಬಿಟ್ಟು ನೋಡಿದರೆ... ಸಕಲೆಂಟು ರಾಜಕೀಯ ಪಕ್ಷಗಳ ನೇತಾರರೂ ಅಲ್ಲಿದ್ದಾರಂತೆ, ಬೇನಾಮಿ ಹೆಸರಿನಲ್ಲಿ!

ತಿನ್ನಬೇಕು ಅಂತ ಅದಕ್ಕೆ ಆಸೆ ಆದರೂ ಬಿಗುಮಾನದಿಂದ ತಿಂಡಿಯನ್ನೇ ಆಸೆ ಕಣ್ಣುಗಳಿಂದ ನೋಡುತ್ತಾ ಇರುತ್ತಲ್ಲ ಆ ಸನ್ನಿವೇಶ ನೆನಪಿಗೆ ಬರಬಹುದು, ಇರಲಿ.

'ಆಮ್, ಆದಮಿ', 'ಗರೀಬಿ ಹಟಾವೋ' ಪಕ್ಷವೇನೂ ಬಡರೈತರ ಹಿತ ಮರೆತಿಲ್ಲ, ಸೂಕ್ತ ಸಮಯಕ್ಕಾಗಿ ಅದು ಕಾಯುತ್ತಿತ್ತು, ಆ ಸಮಯ ಈಗ ಬಂದಿತ್ತು, ಅದು ಇಂತಿದೆ.

ನಮ್ಮ ಮುಖ್ಯಮಂತ್ರಿ ಎಂತಹವರು?

ಬಡರೈತರ ಭೂಮಿಯ ಕಾವಲುಗಾರ!

ಆ ಭೂಮಿ ಕದಿಯಲು ಹೊಂಚು ಹಾಕಿತ್ತು ನೈಸ್ ಕಂಪನಿ.

ಕಾವಲುಗಾರನ ಒಪ್ಪಿಗೆ ಬೇಕಲ್ಲ?

ಬ್ರೀಫ್ ಕೇಸ್ ಬಂದಿತು ಮುಖ್ಯಮಂತ್ರಿಗಳ ಬಳಿಗೆ.

ತಂದವರು ಯಾರು?

ಕಾಂಗ್ರೆಸ್ಸಿನ ಮಾಜಿ ಮಂತ್ರಿ ಹಾಗೂ ಒಬ್ಬ ಪತ್ರಕರ್ತ.

ಕುದಿಯಿತು ಬಡರೈತರ ಹಿತ ಕಾಯುವ ಮುಖ್ಯಮಂತ್ರಿ ಮನ. ಉಗಿದು ಹೊರಗಟ್ಟಿದರು.

ಇದನ್ನು ಬಹಿರಂಗಗೊಳಿಸಿದವರು ಯಾರು?



ಇದು ಒತ್ತಟ್ಟಿಗಿರಲಿ, ದೋಸ್ತಿ ಪಕ್ಷಗಳ ಈ ವಿರುದ್ಧ ನಿಲುವುಗಳು ಮುಖ್ಯಮಂತ್ರಿಯವರನ್ನು ಎರಡನೆ ಬಾರಿಗೆ ರಾಜೀನಾಮೆ ಮೆಟ್ಟಿಲ ಹತ್ತಿರ ಎಳೆದು ತಂದಿವೆಯಂತಲ್ಲಾ. ಮೊದಲನೆಯ ಸಲ 'ಹಿಂಗೆಲ್ಲ ಮಷ್ಕರಿ ಮಾಡಿದರೆ ರಾಜೀನಾಮೆ ಕೆರೆದು ಬಿಸಾಕ್ತೀನಿ' ಎಂಬುದಾಗಿ ಮುಖ್ಯಮಂತ್ರಿ ಧಮಕಿ ಹಾಕಿದಾಗ ಬಾಲ ಮುದುರಿಕೊಂಡ, ಅಳುವಾಗಲೂ ನಗುವಂತೆ ಕಾಣುವ ಸದಾನಂದಗೌಡರು ಈ ಬಾರಿ ರಾಜೀನಾಮೆ ವಿಷಯ ಬಂದಾಗ 'ಅದು ಅವರಿಗೆ ಸಂಬಂಧಿಸಿದ್ದು' ಅಂತ ತಿರುಗೇಟು ನೀಡಿದರಲ್ಲಾ, ಕುಮಾರಸ್ವಾಮಿ ಮಾತೆತ್ತಿದರೆ 'ರಾಜೀನಾಮೆ ಕೆರೆದು ಬಿಸಾಕ್ತೀನಿ' ಅನ್ನೋದು ಕೆಲವರಿಗೆ ಕುರಿ ಕಾಯುವ ಹುಡುಗ 'ತೋಳ ಬಂತು ತೋಳ' ಅಂತ ಕಿರುಚಿದ ಕತೆ ನೆನಪಿಗೆ ತರಬಹುದು. ಇನ್ನು ಕೆಲವರಿಗೆ ಚಂಡಿ ಹಿಡಿದು ಕುಳಿತಿದ್ದ ಮಗುವಿಗೆ ಅದಕ್ಕೆ ಇಷ್ಟವಾದ ತಿಂಡಿ ತೋರಿಸಿದಾಗ ತೆಗೆದುಕೊಂಡು

ಸ್ವತಃ ಮುಖ್ಯಮಂತ್ರಿಗಳು!

ಲಂಚ ನೀಡುವುದು, ಪಡೆಯುವುದು ಕಾನೂನಿನಂತೆ ಅಪರಾಧ. ಈ ಅಪರಾಧ ಮಾಡಿದವರನ್ನು ಜೈಲಿಗೆ ಹಾಕಿ ಎಂಬುದು ಕಾಂಗ್ರೆಸ್ ಪಕ್ಷದ ವರಾತ.

ಅದಕ್ಕೂ ಮುನ್ನ ಈ ಇಸಮ್ಮುಗಳು ಯಾರು ಎಂದು ತಿಳಿಯಬೇಡವೆ? 'ಹೆಸರನ್ನು ಬಹಿರಂಗಗೊಳಿಸಿ' ಎಂಬುದು ಕಾಂಗ್ರೆಸ್ ನಾಯಕರ ಒತ್ತಾಯ. ವಿಧಾನಸಭೆಯಲ್ಲಿ ನಿಲುವಳಿ ಸೂಚನೆಗೆ ಒತ್ತಾಯ. ಆರ್.ವಿ. ದೇಶಪಾಂಡೆಯವರಿಂದ ಇದಕ್ಕೆ ಸಮರ್ಥನೆ.

ಮುಖ್ಯಮಂತ್ರಿ ಉತ್ತರ ಏನು?

'ನೀವು ಆಗರ್ಭ ಶ್ರೀಮಂತರು, ಸತ್ಯ ಹರಿಶ್ಚಂದ್ರರು. ನನಗೆ ಎಲ್ಲ ಗೊತ್ತಿದೆ.'

ಅರೆ, ಪ್ರಶ್ನೆಗೂ ಉತ್ತರಕ್ಕೂ ಏನು ಸಂಬಂಧ ಅನ್ನುವ ಅನುಮಾನ ಬೇಡ. ಇದು ರಾಜಕಾರಣಿಗಳ ಭಾಷೆ. ಈ ಉತ್ತರ ಕೇಳಿದ ನಂತರ ಕೆರಳಿದ ಸರ್ಪದಂತೆ ಹೆಡೆ ಬಿ... ಬುಸುಗುಡುತ್ತಿದ್ದ ದೇಶಪಾಂಡೆ ಗರುಡರೇಖೆ ಸೋ... ಕ್ಕಾರೆ ಹಾವಿನಂತಾಗಿ 'ದ್ವೇಷದ ರಾಜಕೀಯ ಬೇಡ' ಎಂ... ಹೇಳುತ್ತಾ ಬಿವರೂರಿಸಿಕೊಂಡರಂತೆ! ಅಲ್ಲ ಏನೋ ಆಸೆ... ಯಲ್ಲಿ ಮಾತನಾಡಬೇಕಲ್ಲ ಅಂತ ಮಾತನಾಡಿದರೆ ... ಎಳೆ ನಿಂಬೆಕಾಯಿ ಅದನ್ನೆ ನಿಜ ಅಂದುಕೊಂಡಿದೆಯ... ವೈಯಕ್ತಿಕ ಕಬಳಿಕೆಯನ್ನೆಲ್ಲ ಹೀಗೆ ಬಹಿರಂಗ ಮಾಡುತ್ತಿ... ಯಲ್ಲ ಎಂದು ದೇಶಪಾಂಡೆಯವರು ಪೇಚಾಡಿಕೊಂಡ... ಖಾತರಿ ಆಗಿಲ್ಲ.

ಇದನ್ನೆಲ್ಲ ನೋಡಿದಾಗ ಜೇಮ್ಸ್ ಥರ್‌ಬರ್ ಎಂದ... ಬರೆದ ಕತೆ ನೆನಪಿಗೆ ಬರುತ್ತಿದೆ. ಆ ಕತೆಯ ಹೆಸ... 'ಪಕ್ಷಿಗಳು ಮತ್ತು ತೋಳಗಳು.'

ಒಂದಾನೊಂದು ಕಾಲದಲ್ಲಿ ಒಂದು ಪಕ್ಷಿಧಾ... ಇತ್ತು, ಅಲ್ಲಿ ನೂರಾರು ಬಾಲ್ಟಿಮೋರ್ ಓರಿಯಲ... ಜಾತಿಯ ಪಕ್ಷಿಗಳು ಸುಖ ಸಂತೋಷದಿಂದ ವಾಸಿಸುತ್ತಿದ್ದ... ಆ ಪಕ್ಷಿಧಾಮ ಕಾಡಿನಲ್ಲಿತ್ತು. ಅದರ ಸುತ್ತ ಎತ್ತರವಾ... ತಂತಿ ಬೇಲಿ ಹಾಕಲಾಗಿತ್ತು. ಅದನ್ನು ಹಾಕುವಾಗ ಸಮೀ... ದಲ್ಲಿಯೇ ವಾಸಿಸುತ್ತಿದ್ದ ತೋಳಗಳು ಇದು ಕಾನೂ... ವಿರುದ್ಧ ಹಾಗೂ ಅಸಹಜ ಎಂದು ಪ್ರತಿಭಟಿಸಿದ್ದ... ಆದರೆ ಆಗ ಅವು ನೆರೆಯ ಫಾರಂಗಳಲ್ಲಿ ಇದ್ದ ಬಾತುಕೋ... ಗೀಸ್ ಮುಂತಾದವುಗಳ ಸಂಸ್ಕರಣೆಯಲ್ಲಿ ತಲ್ಲೀನರಾಗಿ... ರಿಂದ ಬೇಲಿ ಕುರಿತು ಚಿಂತಿಸಲು ವ್ಯವಧಾನ ಇರಲಿ... ಬಾತುಕೋಳಿ, ಗೀಸ್ ಮೊದಲಾದವುಗಳ ಸಂಸ್ಕರಣೆ ಮುಗಿ... ನಂತರ ಅವಕ್ಕೆ ತಿನ್ನಲು ಏನೂ ಇಲ್ಲದ್ದರಿಂದ ತಮ... ಗಮನವನ್ನು ಪಕ್ಷಿಧಾಮದೆಡೆ ಹರಿಸಿದವು.

ಇದೇ ಪಕ್ಷಿಧಾಮ ಈ ಹಿಂದೆ ತೋಳಗಳ ವಾಸಸ... ಆಗಿತ್ತಾದರೂ ಅವನ್ನೆಲ್ಲ ಅಲ್ಲಿಂದ ಹೊರಗಟ್ಟಲಾಯಿ... ಎಂಬ ಹೊಸ ಸಂಗತಿಯನ್ನು ತೋಳಗಳ ನಾಯ... ಬಹಿರಂಗಗೊಳಿಸಿತು. ಬಾಲ್ಟಿಮೋರ್ ಓರಿಯಲ್ಸ್ ಪಕ್ಷಿಗ... ಬಾಲ್ಟಿಮೋರ್‌ನಲ್ಲಿ ಇರಬೇಕೇ ವಿನಹ ಇಲ್ಲಲ್ಲ, ಅ... ಈ ಪಕ್ಷಿಧಾಮದಲ್ಲಿರುವುದರಿಂದ ವಿಶ್ವದ ಶಾಂತಿಗೆ ಸ... ಧಕ್ಕೆ ತರುತ್ತವೆ ಎಂಬುದರ ಕಡೆಗೂ ಗಮನ ಹರಿಸಿತ...

ತೋಳಗಳ ನಾಯಕನ ಮಾತಿಗೆ ಇತರ ಪ್ರಾಣಿಗ... ಸಮ್ಮತಿಸಲಿಲ್ಲ, ಪಕ್ಷಿಧಾಮದ ಪಕ್ಷಿಗಳಿಗೆ ತೊಂದರೆ ನೀಡ... ಪ್ರಯತ್ನಿಸಬೇಡಿ ಎಂಬ ಎಚ್ಚರಿಕೆ ನೀಡಿದವು.

ಅವು ತೋಳಗಳು ಆದುದರಿಂದ ಇತರೆ ಪ್ರಾಣಿಗ... ಮಾತನ್ನ ತಿಗಕ್ಕೆಸೆದೊ. ಒಂದು ರಾತ್ರಿ ತೋಳಗಳು ... ಧಾಮಕ್ಕೆ ಮುತ್ತಿಗೆ ಹಾಕಿ ತಂತಿ ಬೇಲಿಯನ್ನು ಕಿತ್ತೊಗೆದ... ಹೊರಗೆ ಹೋಗಲು ನುಗ್ಗಿದ ಓರಿಯಲ್ಸ್ ಪಕ್ಷಿಗಳ... ತಕ್ಷಣ ಕೊಂದು ತಿನ್ನುವುದರ ಮೂಲಕ ಹಬ್ಬ ಆಚರಿಸಿದ...


ಮಾರನೆ ಬೆಳಿಗ್ಗೆ ತೋಳಗಳ ನಾಯಕ.... ಅ... ಅಂತಿಂಥ ನಾಯಕ ಅಲ್ಲ, ಪ್ರತಿ ದಿನ ಸಾಕ್ಷಾತ್ ದೇವ... ಅದರಿಂದ ಮಾರ್ಗದರ್ಶನ ಪಡೆಯುತ್ತಿದ್ದ.... ತೋಳಗಳ... ದ್ದೇಶಿಸಿ ಭಾಷಣ ಮಾಡಿತು. ಅದರ ಸಂದೇಶ ಸ... ಮತ್ತು ಘನ ಗಂಭೀರತೆಯಿಂದ ಕೂಡಿತ್ತು.

"ಪಕ್ಷಿಧಾಮದ ಪಕ್ಷಿಗಳೆಲ್ಲವನ್ನೂ ಮುಕ್ತಿಗೊಳಿಸಿ... ನಾನು, ಇನ್ನೊಬ್ಬ ಅಬ್ರಹಾಂ ಲಿಂಕನ್ ನಿಮ್ಮೆದುರು ಇದ್ದೇ... ಸಾರಿತು ತೋಳಗಳ ನಾಯಕ!

ನೀತಿ: ತೋಳಗಳಿಂದ ಮತ್ತು ತೋಳಗಳಿಗೋಸ... ಸ್ಥಾಪಿತವಾಗಿರುವ ಓರಿಯಲ್ಸ್‌ಗಳ ಸರ್ಕಾರ ... ಭೂಮಿಯಿಂದ ತೊಲಗಬೇಕು.


-ಎಚ್.ಎಲ್. ಕೇಶವಮೂರ್ತಿ...

ಅಹಂ ಇಲ್ಲದ ಹಿರಿಯ ವರದಿಗಾರ ಶೆಣೈ...




ಪತ್ರಿಕಾ ರಂಗದ ಯುವ ಪ್ರತಿಭೆ ರಫೀಕ್ ಉಪ್ಪಿನಂಗಡಿಯವರು ನಮ್ಮನ್ನಗಲಿದ್ದಾರೆ. ತಮ್ಮ ಜೂನ್ 21ರ ಸಂಚಿಕೆಯಲ್ಲಿ ರಫೀಕ್ ಬೇಗ ಗುಣಮುಖವಾಗಲಿ ಎಂದು ಹಾರೈಸಿದ್ದಿರಿ. ಆದರೆ ಜೂನ್ 28ರ ಸಂಚಿಕೆ ರಫೀಕ್ ಸಾವಿನ ಸುದ್ದಿಯೊಂದಿಗೆ ಬರುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಒಬ್ಬ ಕತೆಗಾರರಾಗಿ, ಕಲೆಗಾರರಾಗಿ, ಛಾಯಾಗ್ರಾಹಕರಾಗಿ, ಚಿತ್ರಕರ್ತರಾಗಿ, ಲೇಖಕರಾಗಿ, ಚಿಂತಕರಾಗಿ ಹೀಗೆ ಒಂದಲ್ಲಾ ಒಂದು ರೀತಿಯಲ್ಲಿ ಸಾಮಾಜಿಕ ಕಳಕಳಿ ಹೊಂದಿದ್ದರು ರಫೀಕ್. ಉದ್ಯಾನನಗರಿ ಮೈಸೂರಿನಲ್ಲಿ ಸಿಕ್ಕ ಅವಕಾಶವನ್ನು ಬಳಸಿಕೊಂಡು ಹಂತಹಂತವಾಗಿ ಯಶಸ್ಸಿನ ಶಿಖರವೇರಿ ಇನ್ನೂ ಸಾಧಿಸುವ ಛಲ ಹೊಂದಿದ್ದರು. ಅವರಿಗೆ ಸಾಯುವ ವಯಸ್ಸಾಗಿರಲಿಲ್ಲ, ಮೈಸೂರಿನಲ್ಲಿ ರಂಗ ತಂಡಗಳು, ಸಾಹಿತಿಗಳು, ಕಲಾವಿದರು, ಗೆಳೆಯರೆಲ್ಲಾ ಸೇರಿ ಕಲಾಮಂದಿರದಲ್ಲಿನ ಮನೆ ಯಂಗಳದಲ್ಲಿ ಹೃದಯಸ್ಪರ್ಶಿಯಾಗಿ ನುಡಿನಮನ ಸಲ್ಲಿಸಿದರು. ಅವರ ಆತ್ಮಕ್ಕೆ ಶಾಂತಿ ಸಿಗಲಿ. ಅವರ ಲೇಖನ, ಕಥೆ, ಛಾಯಾಚಿತ್ರಗಳನ್ನು ಪ್ರಕಟಿಸಿ.

-ಕೆ.ವಿ. ಶಿವಕುಮಾರ್, ಕಾಳೀಹುಂಡಿ



ನಾನು 10.6.06 ಲಂಕೇಶ್ ಕಚೇರಿಗೆ ಬಂದು ಸದಾಶಿವ ಶೆಣೈ ಮತ್ತು ಇತರ ವರದಿಗಾರರನ್ನು ಭೇಟಿ ಮಾಡಿ ಬಂದ ವಿಷಯವನ್ನು ಸಂತೋಷದಿಂದ ಹೇಳಿಕೊಳ್ಳುತ್ತಿರುವಾಗಲೇ ಸದಾಶಿವ ಶೆಣೈ-ಶ್ರೀವತ್ಸನ ವಿಷಯ ದಿನ ಪತ್ರಿಕೆಯಲ್ಲಿ ಓದಿ ನಿಜಕ್ಕೂ ಅಚ್ಚರಿಯಾಯಿತು.



ರವಿ ಶ್ರೀವತ್ಸನ ದುರಹಂಕಾರಕ್ಕೆ ಧಿಕ್ಕಾರವಿರಲಿ. ಸ್ವಲ್ಪವೂ ಅಹಂ ಇಲ್ಲದ ಹಿರಿಯ ವರದಿಗಾರ ಶೆಣೈ ಜೊತೆ ಶ್ರೀವತ್ಸ ವರ್ತಿಸಿದ ರೀತಿ ಆತನ ಮಟ್ಟವನ್ನು ತೋರಿಸುತ್ತದೆ. 'ಲಂಕೇಶ್' ಅಭಿಮಾನಿಗಳ ಬೆಂಬಲ ಶೆಣೈ ಮತ್ತು ಲಂಕೇಶ್‌ಗೆ ಇದ್ದೇ ಇರುತ್ತದೆ.

-ಬಸವರಾಜ್ ಬೆಸ್ತರ್, ಹರಪನಹಳ್ಳಿ

ಹೋಗ ತೇಗ

ತನ್ನ ಚಿತ್ರಕ್ಕೆ ಅತ್ಯುತ್ತಮ ವಿಮರ್ಶೆ ಬರೆದಿಲ್ಲವೆಂಬ ಕಾರಣಕ್ಕೆ, ಶ್ರೀವತ್ಸನೆಂಬ ತಲೆ ಕೆಟ್ಟವ ಸದಾಶಿವ ಶೆಣೈಗೆ ಅವಾಚ್ಯ ಶಬ್ದಗಳಿಂದ ಬೆದರಿಕೆ ಹಾಕಿದ್ದು ಅತ್ಯಂತ ಖಂಡನೀಯ. ಆರೋಗ್ಯಕರ ಮನರಂಜನೆಗಳ ಜೊತೆಗೆ ಸಾಮಾಜಿಕ ಕಾಳಜಿಗಳನ್ನು ಗಮನದಲ್ಲಿರಿಸಿಕೊಂಡು ಚಿತ್ರ ತಯಾರಿಸುವ ಬದಲಿಗೆ ಏನೆಲ್ಲಾ ಅಸಂಬದ್ಧ-ಅಸಹ್ಯಗಳನ್ನು ಚಿತ್ರದುದ್ದಕ್ಕೂ ತುರುಕಿ ಯಾವೊಂದು ಶ್ರೇಷ್ಠ ಸಂದೇಶವಿಲ್ಲದೆ ಬೇಕಾಬಿಟ್ಟಿ ನಿರ್ಮಿಸಿದ ಚಿತ್ರಕ್ಕೂ ಒಳ್ಳೆಯ ವಿಮರ್ಶೆ ನಿರೀಕ್ಷಿಸುವುದು ಮೂರ್ಖತನದ ಪರಮಾವಧಿ.

-ಇಂದಿರಾ ಶ್ರೀಧರ್, ದಾವಣಗೆರೆ

"ಮಂಡ್ಯ ನಗರಸಭೆ ದುಬೈ ದುಡ್ಡಿಗೆ ಹರಾಜು" ಎಂಬ ವರದಿಯು ನಿಜಕ್ಕೂ ಅದ್ಭುತವಾಗಿತ್ತು, ವಿಜಯಲಕ್ಷ್ಮಿ ಎಂಬ ಹೆಂಗಸು, ಇಡೀ ಮಂಡ್ಯ ನಗರಸಭೆಯನ್ನೇ ಜಪ್ರುಲ್ಲಾನಿಗೆ ಹಡವಿಕ್ಕಲು ಹೊರಟಿದ್ದಾಳೆ. ಈಕೆ ನಗರಸಭೆ ಅಧ್ಯಕ್ಷೆಯಾಗಿ ನೆಟ್ಟಗೊಂದು ರಸ್ತೆ ಕೂಡ ಮಾಡಿಸಲಿಲ್ಲ, ನಗರಸಭೆಯಲ್ಲಿರುವ ಚಾರ್ ಸೌಬೀಸ್ ಕೌನ್ಸಿಲರ್‌ಗಳ ಜೊತೆ ಸೇರಿಕೊಂಡು ನಗರಸಭೆಯನ್ನೇ ಅದ್ವಾನ ಎಬ್ಬಿಸಿದ್ದಾಳೆ. ಜಪ್ರುಲ್ಲಾ ಖಾನ್ ಆಣತಿಯಂತೆ ಎಲ್ಲವೂ ನಡೆಯುತ್ತಿದೆ. ಮೊನ್ನೆ ಮೊನ್ನೆ ಸಂಸತ್ ಸದಸ್ಯ ಸೋಮಾರಿ ಅಂಬರೀಷ್ ಕಾವೇರಿ ಪೂಜೆಗೆಂದು ಬಂದಾಗ ಇಡೀ ಮಂಡ್ಯ ನಗರಸಭೆಗೆ ರಜೆ ಕೊಟ್ಟು ನೌಕರರನ್ನೆಲ್ಲಾ ಅಂಬರೀಷ್ ಹಿಂದೆ ಹೋಗುವಂತೆ ಆದೇಶಿಸಿದ್ದ, ನೌಕರರು ಇದನ್ನು ವಿರೋಧಿಸಿದ್ದರು.

ಈಗ ಎಲ್ಲಿಗೆ ಬಂತಪ್ಪ ಮಂಡ್ಯ ನಗರಸಭೆ ಕಥೆ ಎನ್ನುವಂತಾಗಿದೆ ಮಂಡ್ಯದ ಪರಿಸ್ಥಿತಿ.

-ಸ್ಮಿತನ್, ಮಂಡ್ಯ


ಈ ಬದುಕಿನಲ್ಲಿ ಎಲ್ಲಕ್ಕಿಂತ ಘೋರವಾದದ್ದು ಬೇಸರ; ಅದರಲ್ಲಿ ಜನಿಸಿದ್ದು ಎಲ್ಲ ತತ್ವ ಮತ್ತು ವೈರಾಗ್ಯ -ನೀ...

ಹೈಸ್ಕೂಲಿನಲ್ಲಿ ಪಣೀಕರ್ ಅಂಕಲ್ ...ನಗೆ ಹೆಡ್ ಮಾಸ್ಟರ್ ಆಗಿದ್ದರು. ಅವರು ...ಕ್ಕಾಪಟ್ಟೆ ಸ್ಟ್ರಿಕ್ಟು. ವಿದ್ಯಾಭ್ಯಾಸದ ವಿಷಯ ...ಲ್ಲಿ ಅವರು ಯಾವತ್ತೂ ಕಾಂಪ್ರೊಮೈಸ್ ...ದವರೇ ಅಲ್ಲ. ನಾನಾದರೂ ಸಿಕ್ಕಾಪಟ್ಟೆ Mischievous ಹುಡುಗನಾಗಿದ್ದೆ. ...ೀಗಾಗಿ ಅನೇಕ ಬಾರಿ ಅವರು ನನಗೆ ...ಕ್ಲಾಸಿನಲ್ಲಿ ಬೈದಿದ್ದರು, ರೂಲರ್‌ನಿಂದ ...ಹೊಡೆದಿದ್ದರು. ಆದರೆ ನಮ್ಮ ಕ್ಲಾಸಿನ ...ದ್ಯಾರ್ಥಿನಿಯರ ಎದುರು ಅವರು ನನಗೆ ...ಹೊಡೆಯುವುದನ್ನು ನನ್ನಿಂದ ಸಹಿಸಿಕೊಳ್ಳ ...ಲಾಗುತ್ತಿರಲಿಲ್ಲ. ಹೀಗಾಗಿ ನಾನು ಹೆಡ್ ...ಮಾಸ್ಟರ್‌ರಿಂದ ಹುಡುಗಿಯರ ಎದುರು ...ಹೊಡೆಸಿಕೊಳ್ಳುವುದನ್ನು ತಪ್ಪಿಸಿಕೊಳ್ಳುತ್ತಿದ್ದೆ. ...ನಾನು ಮೊದಲೇ ಹೇಳಿದಂತೆ ವಿದ್ಯಾಭ್ಯಾಸ ...ದಲ್ಲಿ ನಾನು ಆವರೇಜ್ ಸ್ಟೂಡೆಂಟ್ ಆಗಿದ್ದೆ. ...ಹಾಗೂ ಹೀಗೂ ಪಾಸಾಗುತ್ತಿದ್ದೆ.

ಈ ಹಿಂದೆ ಹೇಳಿದಂತೆ ನಾನು ನನ್ನ ...ಮನೆಯ ಅಕ್ಕ ಪಕ್ಕದ ಸ್ನೇಹಿತರನ್ನೆಲ್ಲ ...ಸೇರಿಸಿಕೊಂಡು ಯಾರ್ಕ್‌ಶೈರ್ ಎಂಬ ...ಕೆಟ್ ತಂಡ ಕಟ್ಟದೆ. ಅದಕ್ಕೆ ನಾನೇ ...ಪ್ಟನ್ ಕೂಡ ಆಗಿದ್ದೆ. ಆದರೆ ನಮ್ಮ ...ಸ್ಕೂಲಿನ ಕ್ರಿಕೆಟ್ ತಂಡಕ್ಕೆ ನಾನು ನಾಯಕ ...ಆಗಿರಲಿಲ್ಲ. ನನಗಿಂತ ಎತ್ತರವಾಗಿದ್ದ ಮತ್ತು ...ದೃಢವಾದ ಪರ್ಸನಾಲಿಟಿ ಹೊಂದಿದ್ದ ನನ್ನ ...ಕ್ಲಾಸ್‌ಮೇಟ್ ಒಬ್ಬನನ್ನು ಕ್ಯಾಪ್ಟನ್ ...ಮಾಡಿದ್ದರು. ಮಾರ್ವಾಡಿ ಹುಡುಗನಾಗಿದ್ದ ...ವನ ಸಂಪೂರ್ಣ ಹೆಸರು ಈಗ ನೆನಪಿಲ್ಲದಿದ್ದರೂ ...ವು ಅವನನ್ನು ಭಗವಾನ್ ಅಂತ ಕರೆಯುತ್ತಿದ್ದದ್ದು ...ನಪಿದೆ.

ಕ್ಯಾಪ್ಟನ್ ಭಗವಾನ್ ಮತ್ತು ನನ್ನ ನಡುವೆ ಒಳ್ಳೆಯ ...ಸಂಬಂಧವಿತ್ತು. ಒಂದು ರೀತಿಯಲ್ಲಿ ನನ್ನ ಆಟದ ...ಶೈಲಿಯನ್ನು ಬದಲಾಯಿಸಿದ್ದೇ ಆತ. ಏಕೆಂದರೆ ನಮ್ಮ ...ತಂಡದಲ್ಲಿ ನಾನು ಪ್ರಾರಂಭ ಆಟಗಾರನಾಗಿ ಕ್ರೀಸ್‌ಗೆ ...ಇಳಿಯುತ್ತಿದ್ದೆ, ಮೀಡಿಯಂ ಪೇಸ್ ಬೌಲರ್ ಆಗಿ ...ಆಡುತ್ತಿದ್ದೆ. ಆದರೆ ನಮ್ಮ ಶಾಲಾ ತಂಡದಲ್ಲಿ ನಾನು ...ಪ್ರಾರಂಭದ ಆಟಗಾರನಾಗುವ ಬದಲಾಗಿ ನಾಲ್ಕನೇ ...ಅಥವಾ ಐದನೇ ಕ್ರಮಾಂಕದಲ್ಲಿ ಬ್ಯಾಂಟಿಂಗ್ ...ಮಾಡುತ್ತಿದ್ದೆ. ಅದಕ್ಕೆ ಕಾರಣವೂ ಇತ್ತು. ನಾನು ಓಪನಿಂಗ್ ...ಬ್ಯಾಟ್ಸ್‌ಮನ್ ಆಗಿ ಬ್ಯಾಟಿಂಗ್ ಮಾಡಿದರೆ ಎದುರಾಳಿ ...ತಂಡದ ಬೌಲರ್ ಸಿಕ್ಕಾಪಟ್ಟೆ ಬೌನ್ಸರ್ ಹಾಕಿ ನನ್ನ ...ಗೆ ಪೆಟ್ಟು. ಆದರೆ ಆನಂತರ ನನಗೆ ಬೌಲಿಂಗ್ ...ಮಾಡಲು ಸಾಧ್ಯವಿಲ್ಲ ಎಂಬುದು ಕ್ಯಾಪ್ಟನ್ ಭಗವಾನನ ...ಅಭಿಪ್ರಾಯವಾಗಿತ್ತು. ಅದು ಒಂದು ರೀತಿಯಲ್ಲಿ ನಿಜವೂ ...ಗಿತ್ತು.

ಹೀಗೆ ಕ್ಯಾಪ್ಟನ್ ನಿರ್ದೇಶನದಂತೆ ನಾನು ಶಾಲೆಯ ...ಶನಲ್ ಮ್ಯಾಚ್‌ಗಳಲ್ಲಿ ನಾಲ್ಕನೇ ಕ್ರಮಾಂಕದಲ್ಲಿ ...ಬ್ಯಾಟಿಂಗ್ ಮಾಡಲು ಶುರು ಮಾಡಿದೆ. ಒಮ್ಮೆ ...ಮ್ಮ ಶಾಲೆಯು ಬಹುಮುಖ್ಯ ಮ್ಯಾಚ್‌ನಲ್ಲಿ ...ಭಾಗವಹಿಸಬೇಕಿತ್ತು. ಅದರಲ್ಲಿ ಸೇಂಟ್ ಜಾನ್ಸ್, ಸೇಂಟ್ ...ಜೋಸೆಫ್, ಡಾನ್ ಬಾಸ್ಕೋ ಮೊದಲಾದ ಹೆಸರಾಂತ ...ಶಾಲಾ ತಂಡಗಳ ವಿರುದ್ಧ ಆಟವಾಡಬೇಕಿತ್ತು. ಹೀಗಿದ್ದಾಗ ...ಮ್ಮೆ ನಾವು ಸೇಂಟ್ ಪೀಟ್ಸ್ ಶಾಲೆಯನ್ನು ಎದುರಿಸ ...ಬೇಕಾಯಿತು.



ಕ್ರಿಕೆಟ್‌ಅನ್ನು ಅಷ್ಟೊಂದು ಪ್ರೀತಿಸುತ್ತಿದ್ದ ನನಗೆ ನಮ್ಮ ದೇಶದ ತಂಡದಲ್ಲಿ ಸ್ಥಾನ ಪಡೆದು ನಮ್ಮ ದೇಶವನ್ನು ಪ್ರತಿನಿಧಿಸಬೇಕೆಂಬ ಮಹತ್ವಾಕಾಂಕ್ಷೆ ಇತ್ತು. ಆದರೆ ಕ್ಷುಲ್ಲಕ ಕಾರಣಕ್ಕೆ ನಾನು ಕ್ರಿಕೆಟ್ ಆಟವನ್ನೇ ಕೊನೆಗೆ ಬಿಟ್ಟು ಬಿಟ್ಟೆ. ನನ್ನ ಅಪ್ಪಾಜಿ ಮುಂಬೈನಿಂದ, ವಿದೇಶಗಳಿಂದ ತಂದಿದ್ದ ಬ್ಯಾಟುಗಳನ್ನು ಚೂರು ಚೂರು ಮಾಡಿದೆ. ಮನೆಯಲ್ಲಿದ್ದ ಬಾಲ್‌ಗಳನ್ನು, ಗ್ಲೌಸ್‌ಗಳನ್ನು ಹತ್ತಿರದ ಮೈದಾನದಲ್ಲಿ ಬಿಸಾಡಿದೆ. ಆ ದಿನದ ನಂತರ ನನ್ನ ಉಸಿರಾಗಿದ್ದ ಕ್ರಿಕೆಟ್ ಅನ್ನು ಮರೆತೇ ಬಿಟ್ಟೆ.

ಬೆಳಗ್ಗೆ ಸನ್ಮಾನ, ಸಾಯಂಕಾಲ ಅವಮಾನ!

ಸೇಂಟ್ ಪೀಟ್ಸ್ ತಂಡ ಪ್ರಬಲವಾದ ತಂಡವಾಗಿದ್ದರಿಂದ ಅವರನ್ನು ಮಣಿಸುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ಆದರೆ ನಮ್ಮ ಶಾಲೆಗೂ, ಸೇಂಟ್ ಪೀಟ್ಸ್ ಶಾಲೆಗೂ ವೈರತ್ವ ಇದ್ದಿದ್ದರಿಂದ ಪ್ರತಿಷ್ಠೆಯ ದೃಷ್ಟಿಯಿಂದಲೂ ಅದು ಅತ್ಯಂತ ಪ್ರಮುಖವಾದ ಪಂದ್ಯವಾಗಿತ್ತು. ಹೀಗಾಗಿ ಈ ಪಂದ್ಯಕ್ಕೆ ಎರಡೂ ಕಡೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಬಾರೀ ಸಂಖ್ಯೆಯಲ್ಲಿ ಸೇರಿದ್ದರು.

ನನಗಿನ್ನೂ ಸ್ಪಷ್ಟವಾಗಿ ನೆನಪಿದೆ. ಅದು ಮೂವತ್ತು ಓವರ್‌ಗಳ ಪಂದ್ಯವಾಗಿತ್ತು. ಟಾಸ್ ಗೆದ್ದ ಆ ತಂಡ ಬ್ಯಾಟಿಂಗನ್ನು ಆರಿಸಿಕೊಂಡಿತು. ಅವರು ಮೂವತ್ತು ಓವರ್‌ಗಳಲ್ಲಿ ಇನ್ನೂರೈವತ್ತು ರನ್‌ಗಳನ್ನು ಹೊಡೆದರು. ಖಂಡಿತವಾಗಿಯೂ ಅದೊಂದು ಬಾರೀ ಮೊತ್ತವಾಗಿತ್ತು. ಅದರರ್ಥ ನಮ್ಮ ಬೌಲಿಂಗ್ ಕಳಪೆಯಾಗಿತ್ತೆಂದಲ್ಲ. ನಾನು ಚೆನ್ನಾಗಿ ಬೌಲಿಂಗ್ ಮಾಡಿದ್ದರೂ ಅವರು ಆ ಬಾರೀ ಮೊತ್ತವನ್ನು ಗಳಿಸಿದ್ದರೆಂದರೆ ಅವರ ಬ್ಯಾಟಿಂಗ್ ಎಷ್ಟು ಪ್ರಬಲವಾಗಿತ್ತೆಂದು ನೀವು ಊಹಿಸಬಹುದು.

ಇನ್ನೂರೈವತ್ತೊಂದು ರನ್‌ಗಳನ್ನು ನಾವು ಹೊಡೆಯುವ ಸಾಧ್ಯತೆಯೇ ಇರಲಿಲ್ಲ. ಆಗ ಅರ್ಧ ಮನಸ್ಸಿನಿಂದಲೇ ನಮ್ಮವರು ಬ್ಯಾಟಿಂಗ್ ಆರಂಭಿಸಿದರು. ಆರಂಭದಲ್ಲಿ ನಮ್ಮ ಬ್ಯಾಟ್ಸ್‌ಮನ್‌ಗಳು ಹೇಗೆ ಮುಗ್ಗರಿಸಿದರೆಂದರೆ ನಲವತ್ತು ರನ್‌ಗಳಿಗೇ ಮೂರು ವಿಕೆಟ್ ಕಳೆದುಕೊಂಡಿದ್ದೆವು. ಐವತ್ತು ತಲುಪುವಷ್ಟರಲ್ಲಿ ನಾಲ್ಕನೆ ವಿಕೆಟ್ ಕೂಡ ಬಿದ್ದಿತ್ತು. ನಾವೆಲ್ಲರೂ ಚಿಂತಾಕ್ರಾಂತರಾಗಿದ್ದೆವು. ಆಗ ನಾನು ಬ್ಯಾಟಿಂಗ್‌ಗೆ ಇಳಿದೆ. ನಾನು ಮತ್ತು ನನ್ನ ಕ್ಯಾಪ್ಟನ್ ಭರ್ಜರಿ ನೂರೈವತ್ತು ರನ್‌ಗಳನ್ನು ಭಾರಿಸಿದೆವು. ಈ ಹಂತದಲ್ಲಿ ತೊಂಭತ್ತೈದು ರನ್ ಗಳಿಸಿದ್ದ ಭಗವಾನ್ ಔಟಾದಾಗ ಇಪ್ಪತ್ತಾರು ಓವರ್‌ಗಳು ಮುಗಿದು ಹೋಗಿದ್ದವು.

ಉಳಿದ ನಾಲ್ಕು ಓವರ್‌ಗಳಲ್ಲಿ ನಾವು ಐವತ್ತು ರನ್‌ಗಳನ್ನು ಹೊಡೆಯಬೇಕಿತ್ತು. ತೊಂಬತ್ತು ರನ್ ಗಳಿಸಿದ್ದ ನಾನು ಸೆಂಚುರಿ ಬಾರಿಸಿ ಮುಂದೆ ಸಾಗಿದ್ದೆ. ಮೊದಲ ಎರಡು ಓವರ್‌ಗಳಲ್ಲಿ ನಾನು ಮತ್ತು ನನ್ನ ಜೊತೆಗಾರರು ಓವರ್‌ಗೆ ತಲಾ ನಾಲ್ಕು ಬೌಂಡ್ರಿಗಳನ್ನು ಬಾರಿಸಿದೆವು. ಕೊನೆಯ ಎರಡು ಓವರ್‌ಗಳಲ್ಲಿ ಹದಿನೆಂಟು ರನ್‌ಗಳನ್ನು ಹೊಡೆಯಬೇಕಿತ್ತು. ಆದರೆ ದುರಾದೃಷ್ಟವಶಾತ್ ಲಾಸ್ಟ್ ಬಟ್ ಒನ್ ಓವರಿನಲ್ಲಿ ನಾವು ಕೇವಲ ನಾಲ್ಕು ರನ್ ಮಾತ್ರ ಹೊಡೆಯಲು ಸಾಧ್ಯವಾಯಿತು.

ಕೊನೆಯ ಓವರಿಗೆ ಸಿಕ್ಕಾಪಟ್ಟೆ ಮಹತ್ವ ಬಂತು. ಆ ಓವರ್‌ನಲ್ಲಿ ನಾವು ಜಯಗಳಿಸಬೇಕಾದರೆ ಹದಿನಾಲ್ಕು ರನ್ ಹೊಡೆಯಲೇಬೇಕಿತ್ತು. ಮೊದಲ ಎರಡು ಬಾಲ್‌ಗಳಲ್ಲಿ ತಲಾ ಎರಡೆರಡು ರನ್‌ಗಳನ್ನು ಹೊಡೆದೆ. ಆ ನಂತರದ ಎರಡು ಬಾಲ್‌ಗಳಲ್ಲಿ ರನ್ನುಗಳನ್ನು ಹೊಡೆಯಲು ಸಾಧ್ಯವೇ ಆಗಲಿಲ್ಲ. ಇಡೀ ಕ್ರೀಡಾಂಗಣವನ್ನು ಮೌನ ಆವರಿಸಿತ್ತು. ಎಲ್ಲೆಲ್ಲೂ ಮೌನವೇ.

ಉಳಿದಿದ್ದು ಎರಡೇ ಬಾಲ್‌ಗಳು, ಬೇಕಿದ್ದು ಹತ್ತು ರನ್‌ಗಳು! ಅದು ಅಸಾಧ್ಯ ಎಂದೇ ಎಲ್ಲರೂ ಭಾವಿಸಿದ್ದರು. ಕ್ರೀಡಾಂಗಣದಲ್ಲಿ ನಮ್ಮ ಸ್ಕೂಲಿನವರು ತಲೆ ಮೇಲೆ ಕೈಯಿಟ್ಟು ಕುಳಿತಿದ್ದರೆ, ಎದುರಾಳಿ ತಂಡದವರು ಆಗಲೇ ಜಯಗಳಿಸಿದವರಂತೆ ಕುಣಿದು ಕುಪ್ಪಳಿಸುತ್ತಿದ್ದರು. ಆಗ ಐದನೇ ಬಾಲನ್ನು ನಾನು ಹೇಗೋ ಮಾಡಿ ಬೌಂಡ್ರಿಯಾಚೆಗೆ ಬಾರಿಸಿದೆ. ಈಗ ಒಂದು ಬಾಲ್‌ನಲ್ಲಿ ನಾಲ್ಕು ರನ್ ಬೇಕಾಗಿದ್ದವು.

ಬೌಲರ್ ಪಂದ್ಯದ ಕೊನೆಯ ಬಾಲನ್ನು ನನ್ನತ್ತ ಎಸೆದೇಬಿಟ್ಟ. ನಾನು ನನ್ನ ಎಲ್ಲ ಶಕ್ತಿಯನ್ನು ಕ್ರೋಢೀಕರಿಸಿ ಆ ಬಾಲಿಗೆ ಕಣ್ಮುಚ್ಚಿ ಹೊಡೆದೆ. ಕಣ್ಣು ಬಿಟ್ಟು ನೋಡಿದಾಗ ನನಗೆ ಆಶ್ಚರ್ಯವಾಯಿತು. ಆ ಬಾಲ್ ಬೌಂಡ್ರಿಯಾಚೆಗೆ ಹಾರಿ ಸಿಕ್ಸರ್ ಆಗಿತ್ತು! ಆಗ ಕ್ರೀಡಾಂಗಣದಲ್ಲಿ ನೆರೆದಿದ್ದ ಹುಡುಗ-ಹುಡಿಗಿಯರೆಲ್ಲ ಓಡಿ ಬಂದು ನನ್ನನ್ನು ತಬ್ಬಿಕೊಂಡರು, ಎತ್ತಿ ಮುದ್ದಾಡಿದರು. ನನ್ನ ಕ್ಯಾಪ್ಟನ್ ಅಂತೂ ನನ್ನನ್ನು ಹೊಗಳಿದ್ದೇ ಹೊಗಳಿದ್ದು.

ಆ ದಿನ... ಆ ಕ್ಷಣ.... ಆ ಸಂಭ್ರಮ.... ಎಲ್ಲವೂ ಈಗಲೂ ನನ್ನ ಕಣ್ಮುಂದೆ ಅಚ್ಚಳಿಯದಂತಿದೆ.

ಕ್ರಿಕೆಟ್‌ಅನ್ನು ಅಷ್ಟೋಂದು ಪ್ರೀತಿಸುತ್ತಿದ್ದ ನನಗೆ ನಮ್ಮ ದೇಶದ ತಂಡದಲ್ಲಿ ಸ್ಥಾನ ಪಡೆದು ನಮ್ಮ ದೇಶವನ್ನು ಪ್ರತಿನಿಧಿಸಬೇಕೆಂಬ ಮಹತ್ವಾಕಾಂಕ್ಷೆ ಇತ್ತು. ಆದರೆ ಕ್ಷುಲ್ಲಕ ಕಾರಣಕ್ಕೆ ನಾನು ಕ್ರಿಕೆಟ್ ಆಟವನ್ನೇ ಕೊನೆಗೆ ಬಿಟ್ಟು ಬಿಟ್ಟೆ. ನನ್ನ ಅಪ್ಪಾಜಿ ಮುಂಬೈನಿಂದ, ವಿದೇಶಳಿಂದ ತಂದಿದ್ದ ಬ್ಯಾಟುಗಳನ್ನು ಚೂರು ಚೂರು ಮಾಡಿದೆ. ಮನೆಯಲ್ಲಿದ್ದ ಬಾಲ್‌ಗಳನ್ನು, ಗ್ಲೌಸ್‌ಗಳನ್ನು ಹತ್ತಿರದ ಮೈದಾನದಲ್ಲಿ ಬಿಸಾಡಿದೆ. ಆ ದಿನದ ನಂತರ ನನ್ನ ಉಸಿರಾಗಿದ್ದ ಕ್ರಿಕೆಟ್ ಅನ್ನು ಮರೆತೇ ಬಿಟ್ಟೆ. ಅದೆಲ್ಲ ಹೇಗಾಯಿತು ಅಂತ ನಾನು ಮುಂದಿನ ವಾರ ಹೇಳುತ್ತೇನೆ.


ಅಂದಹಾಗೆ, ನಮ್ಮ ಶಾಲಾ ಕ್ರಿಕೆಟ್ ತಂಡಕ್ಕೆ ನಾನು ಜಯಗಳಿಸಿದ ಮರು ದಿನ ಬೆಳಗ್ಗಿನ ಅಸೆಂಬ್ಲಿಯಲ್ಲಿ ಹೆಡ್ ಮಾಸ್ಟರ್ ಪಣೀಕರ್‌ರವರು ನನ್ನನ್ನು ಸಮಸ್ತ ವಿದ್ಯಾರ್ಥಿಗಳ ಮುಂದೆ ಸಿಕ್ಕಾಪಟ್ಟೆ ಹೊಗಳಿದರು. ಎಲ್ಲರೆದುರು ನನ್ನನ್ನು ಅಭಿನಂದಿಸಿ, "ಈ ಹುಡುಗನಿಂದಾಗಿ ನಮ್ಮ ಶಾಲೆಯ ಪ್ರತಿಷ್ಠೆ ಹೆಚ್ಚಿದೆ" ಎಂದು ಹೇಳಿದರು. ಆ ಕ್ಷಣ ನಮ್ಮ ಹೆಡ್ ಮಾಸ್ಟರ್ ಬಗ್ಗೆ ನನ್ನಲ್ಲಿ ಗೌರವ ಹೆಚ್ಚಾಯಿತು.

ಆದರೆ ಅದೇ ದಿನ ಮಧ್ಯಾಹ್ನ ಅದೇ ಹೆಡ್ ಮಾಸ್ಟರ್ ಅದೇ ವಿದ್ಯಾರ್ಥಿಗಳ ಎದುರು ರೂಲರ್‌ನಿಂದ ನನ್ನ ಕೈಗೆ ಜೋರಾಗಿ ಹೊಡೆದರು. ಬೆಳಗ್ಗೆ ಸನ್ಮಾನ - ಸಾಯಂಕಾಲ ಅವಮಾನ! ಅದಕ್ಕೆ ಕಾರಣ ಹೇಳ್ತೇನೆ ಕೇಳಿ....

(ಮುಂದಿನ ವಾರಕ್ಕೆ....)

ನಿರೂಪಣೆ: ಸದಾಶಿವ ಶೆಣೈ

9



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ಶಾಟ್ ಕಟ್

ಡೋಲಿಯಲ್ಲಿ ಜಲೀಲ್‌ನಿಗೆ ಲಾಲಿ!



ದಿನವೂ ಆ ದೈತ್ಯ ದೇಹವನ್ನು ಡೋಲಿ (ಪಲ್ಲಕ್ಕಿ)ಯಲ್ಲಿ ಹೊತ್ತು ಬೆಟ್ಟದ ಮೇಲೆ ಹೊತ್ತೊಯ್ಯಬೇಕು. ಶೂಟಿಂಗ್ ಮುಗಿದ ಮೇಲೆ ಕೆಳಕ್ಕೆ ಹೊತ್ತು ತರಬೇಕು. ಶೂಟಿಂಗ್ ನಡೆದಷ್ಟು ದಿನಾ ಈ ಹೊರುವ ಕೆಲಸ ನಡೆದೇ ಇತ್ತು. ಸಿನಿಮಾದಲ್ಲಿ ಆ ದೈತ್ಯನ ಪತ್ನಿ ಮಿಸೆಸ್ ದೈತ್ಯರೂ ನಟಿಸಿದ್ದಾರೆ. ಅಬ್ಬಾ ಈ ಡಬಲ್ 'ಡಬಲ್ ಡೆಕ್ಕರ್'ಗಳನ್ನು ಡೋಲಿಯಲ್ಲಿ ಹೊತ್ತವರ ಪಾಡೇನಾಗಬೇಡ? "ಹೆಣ ಹೊತ್ತಂತಾಯ್ತಪ್ಪೊ..." ಎಂದು ನಿಟ್ಟುಸಿರು ಬಿಟ್ಟರಂತೆ.

ಈ ದೈತ್ಯನ ಹೆಸರು ಅಂಬರೀಷ್! ನಾಗಾಭರಣರ 'ಕಲ್ಲರಳಿ ಹೂವಾಗಿ' ಚಿತ್ರದ ಶೂಟಿಂಗ್ ಚಿತ್ರದುರ್ಗದ ಬೆಟ್ಟದಲ್ಲಿ ನಡೆಯುತ್ತಿದ್ದಾಗ ಈ ಡೋಲಿ-ಲಾಲಿ-ಜಾಲಿ ಟ್ರಿಪ್ ಮಾಡಿ ಬಂದಿದ್ದಾರೆ ಸಂಸದ, ನಟ (ಇನ್ನೂ ನಟನಾ?) ಅಂಬರೀಷ್! ಹಿಂದೆ 'ನಾಗರಹಾವು' ಚಿತ್ರದಲ್ಲಿ ಜಲೀಲನಾಗಿ ತೆಳ್ಳಗೆ ಚೆನ್ನಾಗಿದ್ದ ಅಂಬರೀಷ್, ಅಂದು ಸಲೀಸಾಗಿ ಬೆಟ್ಟ ಏರಿ ಬರುತ್ತಿದ್ದರು. ಈಗ ಕುಡಿತ, ಸೋಮಾರಿತನಗಳಿಂದ ಉಬ್ಬಿ ಹೋಗಿ [illegible]ಯಂತಾಗಿ ಹೋಗಿದ್ದಾರೆ! ಸುಮಲತಕ್ಕ, ಏನು ಕಥೆಮ್ಮಾ? ಈ ಇಬ್ಬರನ್ನು ಹೊತ್ತವರ ಬೆನ್ನಮೂಳೆ split ಆಗಿರುವ ಸಾಧ್ಯತೆಗಳಿವೆ.

ಮಾಜಿ ಪ್ರಧಾನಿ ದೇವೇಗೌಡರು ಡೋಲಿಯಲ್ಲಿಯೇ [illegible] ಬೆಟ್ಟ ಹತ್ತಿ ಬೆತ್ತಲೆ ಗೊಮ್ಮಟನನ್ನು ನೋಡಿಬಂದಿದ್ದೇ ಅಂಬಿಗೆ ಸ್ಫೂರ್ತಿ. ಹಳೆ ಪೀಠಾಧೀಶ್ವರರಿಗೆ ಪಲ್ಲಕ್ಕಿ, ಎಂದರೆ ಪಂಚಪ್ರಾಣ... ಸಿಂಗಲ್ ಪೀಠಾಧೀಶ್ವರ ಅಂಬಿಗೆ ಡೋಲಿ, [illegible] ಹಾಡು!

'ಕನ್ನಡದ ಕಂದ' ವಿನೋದರಾಜ್...



ರಾಜ್ ಅಸ್ತಂಗತರಾದಾಗ ಕೇಶಮುಂಡನ ಮಾಡಿಸಿಕೊಂಡು ಪ್ರತ್ಯಕ್ಷರಾಗಿದ್ದ ಲೀಲಾವತಿ ಮತ್ತು ವಿನೋದ್‌ರಾಜ್ ಈಗ ಮತ್ತೆ ಸುದ್ದಿಯಲ್ಲಿದ್ದಾರೆ. ಅವರು ತಮ್ಮದೇ ಪ್ರೊಡಕ್ಷನ್ ಕಂಪನಿ ಆರಂಭಿಸಿ ಹೊಸ ಚಿತ್ರ ಶುರು ಮಾಡಿದ್ದಾರೆ. ಚಿತ್ರದ ಹೆಸರು 'ಕನ್ನಡದ ಕಂದ' ವಿನೋದ್‌ರಾಜ್‌ನೇ ನಾಯಕ!


ಡ್ಯಾನ್ಸ್ ಚೆನ್ನಾಗಿ ಮಾಡುವ ವಿನೋದ್‌ರಾಜ್‌ನ ನಟನೆ ಅಷ್ಟಕಷ್ಟೇ. ಈ ಹಿಂದೆಯೂ ಹಲವಾರು ಸಲ ಮಗನನ್ನು ಹೀರೋ ಮಾಡಲು ಹೋಗಿ ಲಾಸು ಮಾಡಿಕೊಂಡಿದ್ದರೂ, ಲೀಲಾವತಿಯವರ ಆಸೆ ಇನ್ನೂ ಬತ್ತಿಲ್ಲ... ಆದರೆ ನಾಗೇಂದ್ರ ಮಾಗಡಿ ಎಂಬ ಫ್ಲಾಪ್‌ಬ್ಯಾಕ್ ರೀಲ್ ಸುತ್ತುವಾತನನ್ನು ನಿರ್ದೇಶಕನನ್ನಾಗಿ ಮಾಡಿಕೊಂಡಿದ್ದು ನೋಡಿದರೆ ಭಯವಾಗುತ್ತದೆ.

ಜೀವನದಲ್ಲಿ ಸಾಕಷ್ಟು ನೋವುಂಡ ಲೀಲಾವತಿಯವರಿಗೆ ಈ ಚಿತ್ರ ಲಾಭ ತರುವಂತಾಗಲಿ.

R.B.P. LANKESH, Kannada Weekly Price Rs. 10/- 5-7-2006 RNI No. KARKAN2005/14648 Regd.No.KA/BG(S)/2036/2005



ಮಂಡ್ಯದ ಹುಡುಗ- ಬೆಂಗ್ಳೂರ್ ಬೆಡಗಿ ಡುಂ ಡುಂ!



'ಪ್ರೀತಿ ಏಕೆ ಭೂಮಿ ಮೇಲಿದೆ?' ಎಂದು ಸೈಲೆಂಟಾಗಿ ಹಾಡ್ತಾ ಇದ್ದ 'ಮಂಡ್ಯ'ದ 'ಕರಿಯ' ಪ್ರೇಮ್‌ಗೆ ರಕ್ಷಿತಾ 'ಎಕ್ಸ್‌ಕ್ಯೂಸ್ ಮಿ, ನನ್ನ ಅಪ್ಪು' ಎಂದು ಸಿಗ್ನಲ್ ಮಾಡಿದ್ದೇ ತಡ ಅಲ್ಲಿ ಪ್ರೀತಿಯ ಬೀಜ ಬಿತ್ತನೆಯಾಗಿದೆ. ಅದು ಮೊಳಕೆಯೊಡೆದು ಹೂವಾಗಿ ಅರಳುವ ಕಾಲ ಸಮೀಪಿಸಿದೆ, ಹಿನ್ನೆಲೆಯಲ್ಲಿ 'ತನನಂ ತನನಂ' ರಾಗ ತೇಲಿ ಬರ್ತಾ ಇದೆ, 'ಸುಂಟರಗಾಳಿ' ತಣ್ಣಗಾಗಿದೆ... ಇಂತಹ ಆಹ್ಲಾದಕರ ಗಳಿಗೆಯಲ್ಲಿ ಮಂಡ್ಯದ ಹುಡುಗ ಪ್ರೇಮ್, ಬೆಂಗಳೂರ್ ಬೆಡಗಿ ರಕ್ಷು ನಮ್ಮ 'ಪತ್ರಿಕೆ'ಯೊಂದಿಗೆ ಒಂದಿಷ್ಟು ಮನ ಬಿಚ್ಚಿ, ಒಂದಿಷ್ಟು ಮುಚ್ಚುಮರೆ ಮಾಡಿ ಪ್ರೇಮದ ಹರಟೆ ನಡೆಸಿದ್ದಾರೆ. ನೀವು ಓದಿ **enjoy** ಮಾಡಿ

"ನಾನು ಅಷ್ಟೊಂದು ರೊಮ್ಯಾಂಟಿಕ್ ಅಲ್ಲ.."

ಪತ್ರಿಕೆ: ಕ್ರೇಜಿ ಕ್ವೀನ್ ರಕ್ಷಿತಾ ಈಗ ಒಬ್ಬನನ್ನು ಕ್ರೇಜಿಯಾಗಿ ಪ್ರೀತಿಸುತ್ತಿರುವುದು ನಿಜನಾ?

ರಕ್ಷಿತಾ: ನಾನು ಒಬ್ಬ ವ್ಯಕ್ತಿಯನ್ನು ಪ್ರೀತಿಸುತ್ತಿರುವುದು ನಿಜ. ನಾನು ಮದುವೆಯಾಗುವುದಾದರೆ, ಆತನನ್ನೇ ಮದುವೆಯಾಗುವುದು.

ಪತ್ರಿಕೆ: ಆ ವ್ಯಕ್ತಿ ಯಾರು?

ಉತ್ತರ: ಪ್ರೇಮ್.

ಪ್ರ: ಈಗ ಪ್ರೀತಿಸುತ್ತಿದ್ದೀರಾ ಸರಿ, ಮದುವೆ ಯಾವಾಗ?

* ಈಗ ಅವರು ನಾಯಕನಾಗಿ ನಟಿಸಲಿರುವ ಚಿತ್ರ ಸೆಟ್ಟೇರಲಿದೆ. ಅದು ಬಿಡುಗಡೆಯಾದ ನಂತರ ಮುಂದಿನ ವರ್ಷ ನನ್ನ ಅವರ ಮದುವೆಯಾಗಲಿದೆ.

ಪ್ರ: "ಪ್ರೀತ್ಸೆ ಅಂತಾ ಪ್ರಾಣ ತಿನ್ನೋ ಪ್ರೇಮಿ ನೀನು ಯಾರು?" ಎಂದು ಹಾಡ್ತಾ ಲವ್ ಮಾಡಿದ್ರಾ....

* Oh..... ನಾನು ಅಷ್ಟೊಂದು ರೊಮ್ಯಾಂಟಿಕ್ ಅಲ್ಲ... ಲಿಟಲ್ ಬಿಟ್ ಅಷ್ಟೇ... ಈ ಲವ್ವು ಹೃದಯದ ವಿಷಯ ಅಲ್ವಾ?

ಪ್ರ: ನೀವು ಪಟ್ಟಣದ ಹುಡುಗಿ, ಆತ ಹಳ್ಳಿಯ ಹುಡುಗ. ನಿಮ್ಮಲ್ಲಿ ಅವರ ಬಗ್ಗೆ ಆಕರ್ಷಣೆ ಹೇಗೆ ಹುಟ್ಟಿತು?

* ಆತ ಇಷ್ಟು ಯಶಸ್ವಿ ಚಿತ್ರಗಳನ್ನು ನೀಡಿದರೂ ತುಂಬಾ ಸಿಂಪಲ್ ಮನುಷ್ಯ. ಅದೇ ನನಗೆ ಇಷ್ಟವಾಯಿತು.

ಪ್ರ: ನಿಮ್ಮಿಬ್ಬರ ನಡುವೆ ಪ್ರೀತಿ ಹೇಗೆ ಹುಟ್ಟಿತು?

* ಮೊದಲು ನಾವಿಬ್ಬರು ಫ್ರೆಂಡ್ಸ್ ಆಗಿದ್ದೆವು. ಫೋನಿನಲ್ಲಿ ಮಾತನಾಡುತ್ತಿದ್ದೆವು. ಅವರ 'ಜೋಗಿ' ಚಿತ್ರ ನೋಡಿದ ಮೇಲೆ ನಾನೊಮ್ಮೆ ಅವರಿಗೆ ಹೇಳಿದೆ, 'ನೋಡಿ ಪ್ರೇಮ್, ನನಗೆ ನೀವು ತುಂಬಾ ಇಷ್ಟ. ನಾನು ನಿಮ್ಮನ್ನು ಇಷ್ಟಪಟ್ಟಿದ್ದೇನೆ, ಪ್ರೀತಿಸುತ್ತೇನೆ. ಅದರರ್ಥ ನೀವೂ ಪ್ರೀತಿಸಲೇಬೇಕೆಂದೇನೂ ಅಲ್ಲ, ಆಯ್ಕೆ ನಿಮ್ಮದು' ಎಂದೆ. ಆನಂತರ ಹಹ... ಹಹಾ... ಹಹಾ....

ಪ್ರ: ಇಷ್ಟು ಬೇಗ ಮದುವೆಯಾಗುವ ನಿರ್ಧಾರ ಕೈಗೊಂಡು ನಿಮ್ಮ ವೃತ್ತಿ ಜೀವನವನ್ನು ನೀವು ಕೊನೆ ಮಾಡಿಕೊಂಡಿರಿ ಅನ್ನಿಸುವುದಿಲ್ಲವೇ?

* ನೋಡಿ, ನಾನು ಎಲ್ಲವನ್ನು ಸಾಧಿಸಿದ್ದೇನೆ ಎಂದು ಹೇಳುವುದಿಲ್ಲ, ಆದರೂ ನನ್ನ ಸಾಧನೆಯ ಬಗ್ಗೆ ನನಗೆ ತೃಪ್ತಿ ಇದೆ. ಹಾಗಂತ ಎಲ್ಲಾ ಸಾಧಿಸಿದ್ದೇನೆ ಎಂದು ಹೇಳಿ ಯಾರಾದರೂ ಮದುವೆಯಾದ ಉದಾಹರಣೆ ಇದೆಯಾ? (ನಗು...)

ಪ್ರ: ಮದುವೆಯ ನಂತರ ನಟಿಸುತ್ತೀರಾ?

* ಇಲ್ಲ.... ನಾಯಕಿಯಾಗಿ ಖಂಡಿತಾ ನಾನು ಮುಂದುವರಿಯುವುದಿಲ್ಲ, ಆದರೆ ಸಿನಿಮಾ ಉದ್ಯಮ ಬಿಟ್ಟು ನಾನು ಬೇರೆಲ್ಲೂ ಹೋಗುವುದಿಲ್ಲ.

ಪ್ರ: ನಿವೃತ್ತಿಯಾಗುತ್ತೀರಾ...?

* ನಾಯಕಿಯಾಗಿ ನಟಿಸುವುದಿಲ್ಲ, ನಿವೃತ್ತಿಯಾಗುವುದಿಲ್ಲ....

ಪ್ರ: ಅಂದರೆ ಅಮ್ಮ, ಅತ್ತಿಗೆ ಪಾತ್ರಗಳನ್ನು ನಿರ್ವಹಿಸುತ್ತೀರಾ?

* ಹ.... ಹಾಂ...ಹ... ಹಾ... ಗುಡ್ ಅಬ್ಸರ್‌ವೇಷನ್....!

ಪ್ರ: ಮದುವೆಯಾದ ಮೇಲೆ ನಟಿಸದೇ ಇರಲು ಕಾರಣ?

* ಬೇರೆ ನಟರ ಜೊತೆ ರೊಮ್ಯಾಂಟಿಕ್ ಸೀನ್ ಮಾಡೋದೆಲ್ಲ ಮುಜುಗರ ಮಾಡುತ್ತೆ.. ಅದು ನಮ್ಮ ಕಲ್ಚರ್ ಅಲ್ಲ...

ಪ್ರ: ಮೊದಲು ಕಾಜೋಲ್ ಹೀಗೇ ಹೇಳಿದ್ದಳು. ಈಗ 'ಫನಾ'ದಲ್ಲಿ ರೊಮ್ಯಾಂಟಿಕ್ ಸೀನ್ ಮಾಡಿದ್ದಾಳಲ್ಲ....

* ಎಲ್ಲರೂ ಕಾಜೋಲ್ ಆಗೋಕೆ ಆಗಲ್ವಲ್ಲಾ... (ನಗು)

ಪ್ರ: ಹಾಗೆಯೇ ಎಲ್ಲರೂ ಅಜಯ್ ದೇವಗನ್ ಆಗೋಕು ಆಗಲ್ಲ?

* ಹೌದು ಹೌದು....

ಪ್ರ: ಮಂಡ್ಯದ ಸರ್ಕಾರಿ ಸ್ಕೂಲ್ ಹುಡುಗ, ಬೆಂಗಳೂರಿನ ಮೌಂಟ್ ಕಾರ್ಮೆಲ್ ಹುಡುಗಿ..... ಯಾರು ಕಾಂಪ್ರೊಮೈಸ್ ಆಗೋದು?

* ಇಬ್ಬರೂ ಫಿಫ್ಟಿ-ಫಿಫ್ಟಿ ಕಾಂಪ್ರೊಮೈಸ್ ಆಗ್ತೀವಿ....

ಪ್ರ: ಅಂದರೆ ಈಗ ವಾರದಲ್ಲಿ ಎರಡು ದಿನ ಪಬ್‌ಗೆ ಹೋಗೋ ನೀವು ಇನ್ಮುಂದೆ ಒಂದೇ ದಿನ ಹೋಗ್ತೀರಾ....?

* ಹಹಹಾ.... ನೊ... ನೊ... ನಾನು ಪಬ್, ಡಿಸ್ಕೋಥೆಕ್‌ಗಳಿಗೆ ಹೋಗೋದನ್ನು ಎಂದೋ ನಿಲ್ಲಿಸಿಬಿಟ್ಟಿದ್ದೀನಿ (ಮತ್ತೆ ನಗು....)

ಪ್ರ: ನೀವು ಜೀನ್ಸ್, ಮಿಡಿ ಹಾಕಿಕೊಂಡು ಜೀವನ ನಡೆಸಿದವರು. ಈಗ ಪ್ರೇಮ್ ಮನೆಯ ಹಳ್ಳಿಯ ವಾತಾವರಣಕ್ಕೆ ಹೇಗೆ ಒಗ್ಗುತ್ತೀರಾ?

* ನೋಡಿ ಜೀನ್ಸ್ ಹಾಕಲಿ, ಮಿಡಿ ಹಾಕಲಿ, ನಾವೆಲ್ಲಾ ಏನೇ ಡ್ರೆಸ್ ಹಾಕಿದರೂ ನಾವು ಹೃದಯದಲ್ಲಿ ಭಾರತೀಯರಾಗಿದ್ದೇವೆ. ನಮ್ಮ ಉಡುಪು ನೋಡಿ ನಮ್ಮ ಮೌಲ್ಯಗಳನ್ನು ಅಳೆಯಬೇಡಿ. ಇದು ನನ್ನೊಬ್ಬಳ ಪ್ರಶ್ನೆ ಅಲ್ಲ; ಜೀನ್ಸ್ ಹಾಕುವ ಎಲ್ಲಾ ಹುಡುಗಿಯರ ಪರ ಹೇಳುತ್ತಿದ್ದೇನೆ.

ಪ್ರ: ನಿಮ್ಮ ಮನೆಯವರು ಈ ಮದುವೆಗೆ ಬೆಂಬಲಿಸಿದ್ದಾರಾ?

* ನಾನೇನು ಕದ್ದುಕೊಂಡು, ಮುಚ್ಚಿಕೊಂಡು ಓಡಾಡಿದ್ದೇನಾ? ನಾನೇನು ಕೆಟ್ಟ ಹುಡುಗೀನಾ? ಪ್ರೇಮ್ ಕೆಟ್ಟ ಹುಡುಗನಾ....? ನಮ್ಮ ಮದುವೆ ವಿರೋಧಿಸಕ್ಕೆ ಯಾವ ಕಾರಣವೂ ಇಲ್ಲ. ನನ್ನ ಅಮ್ಮನಿಗಂತೂ ಈ ಬಗ್ಗೆ ತುಂಬಾ ಸಂತೋಷ. ಪ್ರೇಮ್ ಮನೆಯವರಿಗೂ ನಾನು ತುಂಬಾ ಇಷ್ಟವಾಗಿದ್ದೀನಿ.

ಪ್ರ: ಈ ಮದುವೆಯ ಸುದ್ದಿಯಿಂದಾಗಿ ನಿಮ್ಮ ಕ್ರೇಜ್ ಕಡಿಮೆಯಾಗಿದೆ. ನಿಮ್ಮ ಅಭಿಮಾನಿಗಳು ದೂರವಾಗುತ್ತಾರೆ ಎಂದು ಅನ್ನಿಸುವುದಿಲ್ಲವೇ?

* ನಾನು ಮದುವೆಯಾದರೆ ನನ್ನ ಅಭಿಮಾನಿಗಳು ನನ್ನಿಂದ ಯಾಕೆ ದೂರವಾಗಬೇಕು? ನಾನು ಅದನ್ನು ನಂಬುವುದಿಲ್ಲ. ಅವರು ಸದಾ ನನ್ನೊಂದಿಗೆ ಇರುತ್ತಾರೆ.

ಪ್ರ: ಮದುವೆಯಾದ ನಂತರ ಯಾವ ರೀತಿಯ ಜೀವನ ನಡೆಸಬೇಕೆಂದು ಕನಸು ಕಂಡಿದ್ದೀರಾ?

* ಮದುವೆಯಾದ ನಂತರ ನಾನು ನನ್ನ ಗಂಡನ ಜೊತೆ ಆರಾಮವಾಗಿ ಯಾವುದೇ ವಿವಾದಗಳಿಲ್ಲದೆ ಪ್ರತೀ ಕ್ಷಣವನ್ನು ಆನಂದಿಸಬೇಕೆಂದು ಕನಸು ಕಂಡಿದ್ದೇನೆ. ಆ ದಿನ, ಆ ಕ್ಷಣಕ್ಕಾಗಿ ಕಾಯುತ್ತಾ ಇದ್ದೀನಿ....!

'ಜೋಗಿ'ಯಂತೆ ಪ್ರೇಮಭಿಕ್ಷೆ ಬೇಡುತ್ತಾ..

ಪ್ರ: 'ಪ್ರೀತಿ ಏಕೆ ಭೂಮಿ ಮೇಲಿದೆ?' ಎನ್ನೋ ಪ್ರಶ್ನೆಗೆ ರಕ್ಷಿತಾ ಬಳಿ ಉತ್ತರ ಸಿಕ್ಕಿತೆ?

ಪ್ರೇಮ್: ಹಹಹಾ... (ನಗು... ನಗು... ನಗು...) ನವೆಂಬರ್‌ನಲ್ಲಿ ಹೇಳ್ತೀನಿ...

ಪ್ರ: ಅಂದ್ರೆ ಇನ್ನೂ ಉತ್ತರ ಸಿಕ್ಕಿಲ್ಲಾ ಅನ್ನಿ....

* ಖಂಡಿತ ಸಿಕ್ಕಿದೆ... ನಮ್ಮಿಬ್ಬರಿಗಷ್ಟೇ ಸಿಕ್ಕಿದೆ. ಪ್ರೀತಿ ಕುರಿತು ಎಲ್ಲವನ್ನೂ ಸಿನಿಮಾದಲ್ಲೇ ಹೇಳ್ತೀನಿ.

ಪ್ರ: ನೀವು 'ಎಕ್ಸ್‌ಕ್ಯೂಸ್ ಮಿ, ಎಕ್ಸ್‌ಕ್ಯೂಸ್ ಮಿ' ಎನ್ನುತ್ತಾ 'ಜೋಗಿ'ಯಂತೆ ಪ್ರೇಮಭಿಕ್ಷೆ ಬೇಡಿದಿರಾ?

* (ನಗುತ್ತಾ) ಹುಟ್ಟಿನಿಂದ ಸಾವಿನವರೆಗೆ ಬೇಡುವುದೇ ಜೀವನ.... ಹೃದಯಾಳದಿಂದ 'ಜೋಗಿ'ಯಂತೆ ಪ್ರೇಮಭಿಕ್ಷೆ ಬೇಡಿದೆ. ಅದೂ ಸಿಕ್ಕುಬಿಟ್ಟಿತು.

ಪ್ರ: ರಕ್ಷಿತಾಳೊಂದಿಗೆ 'ಕರಿಯ'ನ 'ತನನಂ ತನನಂ' ಹೇಗೆ ಸಾಗಿದೆ?

* ತುಂಬಾ ಚೆನ್ನಾಗಿ... ಕಾವ್ಯಮಯವಾಗಿಯೇ ನಡೆದಿದೆ.

ಪ್ರ: ಈಗ ಬರೀ ಪ್ರೀತಿ.... ಮದುವೆ ನಂತರನಾ?

* 'ಪ್ರೀತಿ ಏಕೆ ಭೂಮಿ ಮೇಲಿದೆ? ಸಿನಿಮಾ ಮುಗಿಸಿದ ತಕ್ಷಣ ನವೆಂಬರ್‌ನಲ್ಲಿ ಮದುವೆ.

ಪ್ರ: ಮದುವೆಯಾದ ಮೇಲೆ ರಕ್ಷಿತಾ ನಟಿಸಬಾರದು ಅಂತಾ ಆದೇಶ ಮಾಡಿದ್ದೀರಂತೆ.

* ಆದೇಶ ಏನೂ ಇಲ್ಲ... ಬಾಲಿವುಡ್‌ನಲ್ಲೆಲ್ಲಾ ಅದು ನಡೆಯು ಇಲ್ಲಿ ಮದುವೆಯಾದವಳು ಇನ್ನೊಬ್ಬ ನಟನೊಂದಿಗೆ ಡ್ಯೂಯೆ ಹಾಡೋದು, ಕಿಸ್ ಸೀನ್‌ಗಳಲ್ಲಿ ಪಾಲ್ಗೊಳ್ಳೋದು ನ ಕಲ್ಚರ್‌ಗೆ ಸರಿ ಹೊಂದುವುದಿಲ್ಲ, ಕಲೆ ದೇವರು ನಿಜ... ಆದ ಗಂಡನಾದವನಿಗೆ ಎಲ್ಲವನ್ನೂ ಸಹಿಸಿಕೊಳ್ಳೋದು ಕಷ್ಟ ಆಗುತ್ತೆ

ಪ್ರ: 'ಜೋಗಿ' ಸಿನಿಮಾ ನೋಡ್ತಾ ನೋಡ್ತಾ ಫ್ರೆಂಡ್ ಆದಿ ಮೊದಲು ಪ್ರಪೋಸ್ ಮಾಡಿದ್ದು ಯಾರು?

* ನಾನು ಮನಸ್ಸಲ್ಲೇ ಪ್ರೇಮಭಿಕ್ಷೆ ಬೇಡಿದ್ದೆ. ರಕ್ಷಿತಾನೇ ಮೊದ ಪ್ರಪೋಸ್ ಮಾಡಿದಳು.

ಪ್ರ: ಮಾತಾಡಿದ್ದಕ್ಕೆ ಥ್ಯಾಂಕ್ಸ್.. ಇಬ್ಬರಿಗೂ ಒಳ್ಳೆದಾಗಲಿ

ಪ್ರೇಮ್ ಖುಷಿಯಿಂದ ಥ್ಯಾಂಕ್ಸ್ ಹೇಳುತ್ತಾ ರಕ್ಷಿತಾ ಗುಂಗಿಗೆ ಜಾರಿದ

* * * * * *

ಯಾವುದೇ ಗೊಂದಲಗಳಿಲ್ಲದೆ, ಗಾಸಿಪ್‌ಗಳಿಗೆ ಅವಕಾಶ ಮಾಡಿಕೊ ಅರ್ಥಪೂರ್ಣ ಚರ್ಚೆಯ ಮೂಲಕ ಪ್ರೇಮ್ ಮತ್ತು ರಕ್ಷಿತಾ ತ ತಮ್ಮ ಮನೆಯವರ ಅನುಮತಿಯೊಂದಿಗೆ ಮದುವೆಯಾಗ ನಿರ್ಧರಿಸಿದ್ದಾರೆ. ಮದುವೆಯ ನಂತರದ ಜೀವನ ಹೇಗಿರಬೇಕ ಎಂಬುದರ ಕುರಿತು ಈಗಲೇ ಪ್ಲ್ಯಾನ್ ಮಾಡಿಕೊಂಡಿದ್ದಾರೆ.

ಶೆಣೈ ● ಮ

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 2667642 Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44